(ಶ್ರೀ ವಾಟಾಳ್ ನಾಗರಾಜ್)

ನಮಗೆ ಪರಿಚಯವಿರತಕ್ಕ ನೂರಾರು ಜನಗಳು ಈ ಸಭೆಯ ಕಾರ್ಯಕಲಾಪ ನಡೆಯುವುದನ್ನು ನೋಡಬೇಕೆಂದು ಬರುತ್ತಾರೆ. ಅವರಿಗೆ ಪಾಸು ಕೊಡದಿದ್ದರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಕೊಡಬೇಕು ಪಾಸು ಎಂದು ಚೀಟಿ ಕಳುಹಿಸುವಾಗ ನಮ್ಮ ಕಡೆ ಯವರು ಇಂತಿಥವರು ಇದ್ದಾರೆ ಅವರಿಗೆ ಪಾಸು ಕೊಡಬೇಕೆಂದು ಅವರ ಹೆಸರನ್ನು ಬರೆಯಬೇಕು. ಸುಮ್ಮನೆ 20 ಪಾಸು ಕೊಡಿ ಎಂದು ಬರೆದು ಕಳುಹಿಸಿದರೆ ಆ ರೀತಿ ಪಾಸು ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ನನ್ನ ಪರಿಚಯಸ್ಥರಿಗೆ ಪಾಸ್ ಕೊಡಿ ಎಂದು ಚೀಟಿ ಬರೆದಿದ್ದೇನೆ. ಪಾಸು ಕೊಡದೇ ಇರುವುದರಿಂದ ನನಗೆ ಬಹಳ ಅವಹೇಳನ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ದಯವಿಟ್ಟು ಇಂತಹ ಪರಿಸ್ಥಿತಿಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮೊನ್ನೆಯ ದಿವಸ ಯಾರು ಅಲ್ಲಿ ಗಲಾಟೆ ಮಾಡಿದರು ಅವರ ಅಡ್ರೆಸ್ ಮತ್ತು ಹೆಸರು ಎಲ್ಲವೂ ಇದೆ. ಆದ್ದರಿಂದ ಅಂಥವರು ಇದ್ದಾರೆಂದು ಪಾಸ್ ಕೊಡಲಿಲ್ಲವೋ ಏನೋ ಅದನ್ನು ವಿಚಾರಿಸುತ್ತೇನೆ. ಯಾರಿಗೂ ಸದಸ್ಯರಿಗೆ ತೊಂದರೆ ಮಾಡಬೇಕೆಂಬುದು ನಮ್ಮ ಉದ್ದೇಶ ವಲ್ಲ. ಗ್ಯಾಲರಿ ಇರುವುದು ಜನರಿಗೋಸ್ಕರ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಗ್ಯಾಲರಿ ಭರ್ತಿಯಾಗದೆ ಖಾಲಿಯಾಗಿದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಗ್ಯಾಲರಿಗೆ ಏಕೆ ಮಾತನಾಡಬೇಕು ?

ಶ್ರೀ ಎಂ. ಎಸ್. ಕೃಷ್ಣನ್.—ನಾವು ಇಲ್ಲಿ ನಿಂತುಕೊಂಡು ಗ್ಯಾಲರಿಯ ಜನರಿಗೆ ಮೆಚ್ಚಿಗೆ ಗೋಸ್ಕರ ಮಾತನಾಡುತ್ತಾ ಇಲ್ಲ. ಆ ಅರ್ಥದಲ್ಲಿ ತಾವು ಮಾತನಾಡಬಾರದು. ಆದರೆ ಇವತ್ತು ಈ ರೀತಿ ಮಾಡಿದ್ದರಿಂದ ಅನೇಕ ಜನರಿಗೆ ತೊಂದರೆಯಾಗಿದ.

BUDGET ESTIMATES FOR 1973-74 General Discussior

(Debate Continued)

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಮಾತನಾಡುವಾಗ ನಮ್ಮ ರಾಷ್ಟ್ರದಲ್ಲಿರತಕ್ಕಂತಹ ಅಸಮಾನತೆಗಳ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೆ. ರಾಷ್ಟ್ರ ಜೀವನದಲ್ಲಿ ಕಂಡು ಬರತಕಂಥ ಅಸಮಾನತೆಗೆ ಒಳಪಟ್ಟಿದ್ದು ನಮ್ಮ ರಾಜ್ಯವೂ ಒಂದಾಗಿದೆ. ಇಂತಹ ಅಸಮಾನತೆ ಇರುವಾಗ ಸ್ವಾಭಾವಿಕವಾಗಿ ಸಾಮಾಜಿಕ ಜೀವನದಲ್ಲಿ ಮನುಷ್ಯರಿಗೆ ಬಡತನ ಮತ್ತು ಜೀವನಕ್ಕೆ ಬೇಕಾಗಿರತಕ್ಕಂತಹ ಕನಿಷ್ಟ ಪ್ರಮಾಣದ ಸೌಕರ್ಯ ಇಲ್ಲದಿರತಕ್ಕಂತಹ ಸಮಯದಲ್ಲಿ, ಒಂದು ರೀತಿಯಲ್ಲಿ ಇವರ ಘೋಷಣೆಗೆ ಮಾರುಹೋಗುವುದು ಸ್ವಾಭಾವಿಕ. ಇಂತಹ ಪರಿಸ್ಥಿತಿ ಒಂದು ಕಡೆ ಇರುವಾಗ, ಇನ್ನೊಂದು ಕಡೆ ಅಭಾವದ ಹೊರೆ ಇರುವಾಗ ಕಳೆದ 25 ವರ್ಷಗಳ ಯೋಜನೆಯ ಫಲವಾಗಿ ನಾವು ಕಂಡದ್ದಾದರೂ ಏನು ? ನಮ್ಮ ರಾಜ್ಯದಲ್ಲಿ ಇವತ್ತು ಅಭಾವ ಪರಿಸ್ಥಿತಿ ಒಂದು ಭೀಕರ ಸ್ವರೂಪವನ್ನು ತಾಳಿದೆ. ಇದರಿಂದ ಸರ್ವೆ ಸಾಮಾನ್ಯವಾಗಿ ನಮ್ಮ ಜೀವನ ಅತ್ಯಂತ ದುಸ್ಥಿತಿಗೆ ಮುಟ್ಟಿದೆ ಎಂದು ಹೇಳಬಹುದು. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಅಪೇಕ್ಷೆಪಡುತ್ತೇನೆ. ಕೆಲವು ತಜ್ಞರು ನಮ್ಮ ರಾಷ್ಟ್ರದ ಬಗ್ಗೆ ಹೇಳಿದ ಅಭಿಪ್ರಾಯವನ್ನು ಇಲ್ಲಿ ಹೇಳುವುದು ಸೂಕ್ತವೆಂದು ಕಾಣುತ್ತದೆ. ದೆಹಲಿಯಲ್ಲಿ ನಡೆದ ಒಂದು ವಿಚಾರಗೋಷ್ಠಿಯಲ್ಲಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ. ಅದು ಹಿಂದೂಸ್ಥಾನ್ ಟೈಂಸ್ ಪತ್ರಿಕೆಯಲ್ಲಿ ಸಹ 2-2-1972 ರಲ್ಲಿ ಪ್ರಕಟವಾಗಿದೆ. ಅದು ಈ ರೀತಿ ಇದೆ. ''ಭಾರತವು ಜಗತ್ತಿನ ದೃಷ್ಟಿಯಲ್ಲಿ ದುರ್ಬಲ, ಹಸಿದ, ಅತಿ ಹೆಚ್ಚು ಜನಸಂಖ್ಯೆಯ ಆರ್ಥಿಕವಾಗಿ ದಿವಾಳಿಯಾದ, ಸಾಮಾಜಿಕವಾಗಿ ಹಿಂದುಳಿದ ಮತ್ತು ಶೀಘ್ರ ಅಭಿವೃದ್ಧಿಯು ಅಸಾಧ್ಯವೆನಿಸುವ ರಾಷ್ಟ್ರವಾಗಿದೆ ಎಂದರೆ ಇದೊಂದು ''ತಳಕಾಣದ'' ಒಂದು ಹಳ್ಳವಾಗಿದೆ.'' ಪ್ರಪಂಚದ ಅನೇಕ ಭಾಗಗಳಿಂದ ಬಂದಿರತಕ್ಕಂತಹ ಅನೇಕ ತಜ್ಞರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಆಳ ಎಷ್ಟು ಇದೆಯೆಂದರೆ ಶೀಘ್ರವಾಗಿ ನಾವು ಮೇಲಕ್ಕೆ ಬರುವುದಕ್ಕೆ ಸಾಧ್ಯವಿಲ್ಲವೆಂಬುದನ್ನು ಊಹಿಸಿಕೊಳ್ಳಬಹುದು. ಇಂತಹ ದುಸ್ಥಿತಿ ಇರುವಾಗ ನಮ್ಮ ರಾಜ್ಯದ ಸ್ಥಿತಿಯನ್ನು

ಯಾವ ರೀತಿಯಲ್ಲಿ ಸರಿಪಡಿಸುತ್ತಾರೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಆದ್ದರಿಂದ ಆಯವ್ಯಯ ಪಟ್ಟಿಯಲ್ಲಿ ಏನೊಂದು ಆಶ್ವಾಸನೆ ಕೊಟ್ಟಿದ್ದಾರೆ, ಮತ್ತು ಏನೇನು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಅದರಲ್ಲಿಯೂ ಕಳೆದ ಆಯವ್ಯಯ ಪಟ್ಟಿಯನ್ನು ಮಂಡಿಸುವಾಗ ಈ ಸರ್ಕಾರ ಆಡಳಿತಕ್ಕೆ ಬಂದ ತಕ್ಷಣ ಗಡಿಬಿಡಿಯಲ್ಲಿ ಇದ್ದುದರಿಂದ ಹೆಚ್ಚು ಸಮಂಜಸವಾದ ಆಯವ್ಯಯ ಪತ್ರವನ್ನು ಮಂಡಿಸಲಾಗಲಿಲ್ಲವೆಂದು ಹೇಳಿದ್ದಾರೆ. ಆದರೆ ಈ ವರ್ಷವಾದರೂ ಕಳೆದ ಚುನಾವಣೆಯ ಕಾಲದಲ್ಲಿ ಕೊಟ್ಟಂತಹ ಭರವಸೆಗಳನ್ನು ಈಡೇರಿಸುವುದರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಯೇ ಮತ್ತು ಕಾರ್ಯಗತಮಾಡಿದ್ದಾರೆಯೇ ಎಂದು ನೋಡಿದರೆ ಅದು ಯಾವುದೂ ಇಲ್ಲದೆ ಮತ್ತು ದೇಶದ ಜನತೆಯನ್ನು ಇವರು ವಂಚನೆ ಮಾಡಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಚುನಾವಣೆಯ ಕಾಲದಲ್ಲಿ ಒಂದು ಘೋಷಣೆ ಮಾಡಿದ ಪ್ರತಿ ನನ್ನಲ್ಲಿ ಇದೆ. ದೇಶದಲ್ಲಿ ಸ್ವಾಭಾವಿಕವಾಗಿ ನಿರ್ಗತಿಕರಾದವರು ಈ ಆಶೆಯನ್ನು ತೋರಿಸುವುದರಿಂದ ನಂಬಿ ಬೆಂಬಲ ಕೊಡುವುದು ಸಹಜವಾದ ಮನುಷ್ಯನ ಲಕ್ಷಣ. ಹಾಗೆ ಕಳೆದ 25 ವರ್ಷಗಳಿಂದ ಶೋಷಣೆಗೆ ಒಳಪಟ್ಟ ಜನರು ಏನಿದ್ದಾರೆ, ಅವರು ಇಂತಹ ಇವರ ಘೋಷಣೆಗೆ ಮೋಸ ಹೋಗಿಬಿಟ್ಟರು. ಇಂತಹ ಆಶೆಯನ್ನು ತೋರಿಸಿ ಸಾಮಾನ್ಯ ಜನರ ಬೆಂಬಲವನ್ನು ದೊರಕಿಸಿಕೊಂಡರು. ಇವರ ಘೋಷಣೆಯಲ್ಲಿ ಉಳುವವನಿಗೆ ಹೊಲ, ಸರ್ವರಿಗೂ ಉದ್ಯೋಗ ಮತ್ತು ಅಸಮಾನತೆಯ ನಿವಾರಣೆ—ಹೀಗೆ ಮೂರು ಘೋಷಣೆಗಳನ್ನು ಮುದ್ರಿಸಿ ಸಾಮಾನ್ಯ ಜನರಿಂದ ಓಟನ್ನು ಗಿಟ್ಟಿಸಿಕೊಂಡಿದ್ದಾರೆ. ಈ ರೀತಿಯ ಮೂರು ಮಾತುಗಳನ್ನು ಹಸಿದ ಹೊಟ್ಟೆಯ ಜನರಿಗೆ ಹೇಳಿದರೆ, ಅವರು ನಂಬುವುದು ಸ್ವಾಭಾವಿಕ. ಇದರಿಂದಾಗಿ ಇವರ ಪಕ್ಷಕ್ಕೆ ಅನಿರೀಕ್ಷಿತವಾದ ಬೆಂಬಲ ಸಿಕ್ಕಿತು. ಇನ್ನೊಂದು ಕಡೆಯಿಂದ ಸಮಾಜಕ್ಕೆ ವಿರೋಧವಾಗಿರುವ ಶಕ್ತಿಗಳನ್ನು ಹೊರಗೆ ಹಾಕತಕ್ಕ ದೃಶ್ಯವನ್ನು ತೋರಿಸಿಕೊಟ್ಟಿದ್ದಾರೆ. ಆದರೆ ಅಧಿಕಾರದಲ್ಲಿದ್ದ ಪಕ್ಷ ಘೋಷಣೆಗಳನ್ನು ಮಾಡಿದ ರೀತಿಯಲ್ಲಿ ಬಡ ಜನರ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಆದ್ದರಿಂದ ಇಂತಹ ಬೆಂಬಲ ಸಿಕ್ಕಿದಾಗ ಇಂತಹ ಘೋಷಣೆಗಳನ್ನು ಕಾರ್ಯಗತಮಾಡುವ ಜವಾಬ್ದಾರಿ ಈ ಸರ್ಕಾರಕ್ಕೆ ಇದೆ. ಆದರೆ ಇವರು ಎಷ್ಟರಮಟ್ಟಿಗೆ ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆಂಬುದು ನಮ್ಮ ಮುಂದಿರುವ ಪ್ರಶ್ನೆ. ನಮಗೆ ಬೇಕಾಗಿರುವುದು ಜನರಿಗೆ ಇವತ್ತು ಕನಿಷ್ಟ ಕೆಲವು ಸೌಕರ್ಯಗಳನ್ನು ಒದಗಿಸಿಕೊಡಬೇಕಾಗುದುದು ಪ್ರಜಾಪ್ರಭುತ್ವ ಸರ್ಕಾರದ ಕರ್ತವ್ಯ. ಆದರಲ್ಲಿಯೂ ಕೂಡ ಸರ್ಕಾರ ಏನೊಂದು ಘೋಷಣೆಗಳನ್ನು ಮಾಡಿಕೊಂಡು ಅಧಿಕಾರಕ್ಕೆ ಬಂದಿದೆಯೋ ಅವೆಲ್ಲವನ್ನೂ ಕಾರ್ಯಗತಮಾಡುವುದು ಸರ್ಕಾರದ ಪ್ರಥಮ ಕರ್ತವ್ಯ. ಅದನ್ನು ಅವರು ಎಷ್ಟರಮಟ್ಟಿಗೆ ಮಾಡಿದ್ದಾರೆಂಬುದನ್ನು ನಾನು ಈಗ ನಿವೇದಿಸಿಕೊಳ್ಳುತ್ತೇನೆ. ಜನಸಾಮಾನ್ಯರಿಗೆ ಬೇಕಾದಷ್ಟು ದುಡಿಯುವುದಕ್ಕೆ ಕೆಲಸ, ವಾಸಕ್ಕೆ ಮನೆ, ಅವರಿಗೆ ಜೀವನ ನಡೆಸುವುದಕ್ಕೆ ಉತ್ತಮವಾದಂಥ ರಕ್ಷಣೆ ಹಾಗೂ ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಸೌಕರ್ಯ—ಇವು ಮೂಲಭೂತವಾಗಿ ನಾಗರೀಕ ಸೌಲಭ್ಯಗಳು ಮನುಷ್ಯನಿಗೆ ಸಿಕ್ಕಿದರೆ ಸಾಕು. ಆಗ ಯಾವ ಒಂದು ಹೆಚ್ಚಿನ ಅಧಿಕಾರವನ್ನು ಜನ ನಿರೀಕ್ಷಣೆ ಮಾಡುವುದಿಲ್ಲ. ಎಲ್ಲಕ್ಕಿಂತಲೂ ಹೆಚ್ಚಿಗೆ ಕನಿಷ್ಟ ಅಗತ್ಯಗಳನ್ನು ಯಾವ ರೀತಿಯಲ್ಲಿ ಜನರಿಗೆ ಒದಗಿಸಿಕೊಡಬೇಕೆಂಬುದನ್ನು ಅದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ಅರ್ಥಮಂತ್ರಿಗಳು ವಿಶ್ಲೇಷಣೆ ಮಾಡಿದ್ದಾರೆ. ಒಂದು ಮಾತನ್ನು ಮಾತ್ರ ಬಹಳ ಜಾಣರಾಗಿ ಕೈಬಿಟ್ಟಿದ್ದಾರೆ. ಜನರಿಗೆ ಉದ್ಯೋಗ ಕೊಡುವುದು ನನ್ನದಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಾನು ತಿಳಿದಿರುವ ಹಾಗೆ ಅವರು ಶಿಕ್ಷಣ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಕೆಲವು ಕನಿಷ್ಟ ಅಗತ್ಯವಾದ ಕಾರ್ಯಕ್ರಮಗಳನ್ನು ಮಾತ್ರ ಅವರು ವಿಶ್ಲೇಷಣೆ ಮಾಡಿದ್ದಾರೆಯೇ ವಿನಹ ಮನುಷ್ಯನಿಗೆ ದುಡಿಯುವುದಕ್ಕೆ ಕೆಲಸವನ್ನು ಒದಗಿಸುವ ಕೆಲಸ ನನ್ನದಲ್ಲವೆಂದು ಕೈಬಿಟ್ಟಿದ್ದಾರೆ. ಜನರಿಗೆ ಉದ್ಯೋಗಗಳನ್ನು ಒದಗಿಸಿಕೊಡುವ ಪ್ರಯತ್ನದಲ್ಲಿ ಈ ಆಯವ್ಯಯ ಸಂಪೂರ್ಣವಾಗಿ ವಿಫಲವಾಗಿದೆ. ಇವತ್ತು ಜನರಿಗೆ ದುಡಿಯುವುದಕ್ಕೆ ಅಪಾರವಾದ ಪ್ರೇಮ ಇದೆ. ಅಪಾರವಾಗಿ ಜನಸಂಖ್ಯೆಯೂ ಇದೆ. ಯೋಗ್ಯರಾದ ಜನರೂ ಇದ್ದಾರೆ. ಅವರಿಗೆ ಕೆಲಸವಿಲ್ಲದೆ ಜೀವನ ನಡೆಸುವುದು ಬಹಳ ಕಷ್ಟವಾಗಿದೆ. ಅವರಿಗೆ ಬಹು ಮುಖ್ಯವಾಗಿ ಬೇಕಾಗಿರುವುದು ಕೆಲಸ. ಕೆಲಸ ಕೊಟ್ಟರೆ ಅವರ ಜೀವನ ನಡೆಯುತ್ತದೆ. ರಾಜ್ಯದ ಉತ್ಪಾದನಾ ಶಕ್ತಿಯೂ ಹೆಚ್ಚಾಗುತ್ತದೆ. ಜನರಿಗೆ ಕೊಡುವ ಕೆಲಸ ಹೇಗಿರಬೇಕೆಂದರೆ ದುಡಿಮೆ ಕ್ಷೇತ್ರದಲ್ಲಿ ಅವರನ್ನು ಸೇರಿಸಿ ಅಲ್ಲಿ ಅವರು ಕೆಲಸವನ್ನು ಮಾಡುವಂತೆ ಮಾಡುವುದು ಮುಖ್ಯ. ದುಡಿಯುವುದಕ್ಕೆ ಅವರನ್ನು ಹಚ್ಚಬೇಕಾಗಿದೆ. ತಮಗೆಲ್ಲರಿಗೂ ತಿಳಿದಿರುವ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸೇಕಡ 40ರಷ್ಟು ಜನರು, ನಗರ ಪ್ರದೇಶಗಳಲ್ಲಿ ಸೇಕಡ 50ರಷ್ಟು ಜನರು ಈ ಒಂದು ಬಡತನ ಬೇಗೆಯಲ್ಲಿ ಸಿಕ್ಕಿ ನರಳುತ್ತಾ ಬಹಳ ಕೀಳುಮಟ್ಟದ ಜೀವನ

(ಶ್ರೀ ಕಾಗೋಡು ತಿಮ್ಮಪ್ಪ)

ನಡೆಸುತ್ತಿದ್ದಾರೆ. ದೊಡ್ಡ ಪ್ರಮಾಣದ ಜನಸಂಖ್ಯೆ ಕನಿಷ್ಟ ಪ್ರಮಾಣದ ಸೌಕರ್ಯಗಳನ್ನು ಪಡೆಯದೇ ಇರತಕ್ಕ ದುರ್ಬಲವರ್ಗ ನಮ್ಮ ದೇಶದಲ್ಲಿದೆ. ಇಂತಹ ಜನರಿಗೆ ಯಾವ್ಯಾವ ಕೆಲಸಗಳನ್ನು ಕೊಡಬೇಕೆನ್ನುವುದು ಬಹಳ ಮಹತ್ವವಾದಂಥ ವಿಚಾರ. ನಮ್ಮ ಕನಿಷ್ಟ ಅಗತ್ಯವಾದ ಕಾರ್ಯಕ್ರಮಗಳ ವಿಶ್ಲೇಷಣೆಯ ಕಡೆ ನಮ್ಮ ಅರ್ಥ ಮಂತ್ರಿಗಳು ಬಹಳ ಸೊಗಸಾದ ಭಾಷೆಯನ್ನು ಉಪಯೋಗಿಸಿದ್ದಾರೆ. ಅವರ ಭಾಷೆಯ ವಿಚಾರ ದೃಷ್ಟಿಯಿಂದ, ಅಂತಹ ಭಾಷೆಯನ್ನು ಅವರು ಬಳಸಿರತಕ್ಕದು ಏಕೆಂದರೆ ಅವರು ಅರ್ಥ ಸಚಿವರಾಗಿರುವುದೇ ಕಾರಣವೆನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಇದರಲ್ಲಿ ಅವರು ಕರ್ತವ್ಯನಿಷ್ಠರು ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅವರು ವಿಶ್ಲೇಷಣೆ ಮಾಡುತ್ತಿದ್ದ ನಮ್ಮ ಪರಿಸ್ಥಿತಿಯ ಬಗ್ಗೆ ನಾನು ನೇರವಾಗಿ ಅರ್ಥಮಾಡಿಕೊಂಡಿದ್ದೇನೆ. ಅವರು ವಸ್ತುಸ್ಥಿತಿಯನ್ನು ಹೇಳಿದ್ದಾರೆ. ಅವರು ಹೇಳಿರತಕ್ಕ ಮಾತಿನಿಂದ ಎಲ್ಲವೂ ಅರ್ಥವಾಗುತ್ತದೆ. ಒಟ್ಟಿನಲ್ಲಿ ಈ ರಾಜ್ಯದಲ್ಲಿರತಕ್ಕ ದುರ್ಬಲವರ್ಗಕ್ಕೆ ನಾವು ಅಗತ್ಯವಾಗಿ ಕೆಲವಾರು ಕೆಲಸಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ಅದು ಒಂದು ಸಾಮಾಜಿಕ ಹೊಣೆ, ಸಾಮಾಜಿಕ ಕರ್ತವ್ಯ ಎನ್ನುವ ಪದಗಳನ್ನು ಉಪಯೋಗಿಸಿದ್ದಾರೆ. ಈ ಮಾತುಗಳನ್ನು ಹೇಳುವಾಗ ದುರ್ಬಲವರ್ಗಕ್ಕೆ ಏನೇನು ಅವಶ್ಯಕವಾಗಿ ದೊರಕಿಸಿಕೊಡಬೇಕು ಎಂಬುದನ್ನು ಬಹು ಸೂಕ್ಷ್ಮವಾಗಿ ವಿಚಾರಮಾಡಿದ್ದರೆ ಚೆನ್ನಾಗಿತ್ತು. ಇವರ ಮಾತು ಒಂದು ರೀತಿಯಲ್ಲಿ ವಸ್ತುನಿಷ್ಟವಾಗಿದೆಯೇ ಹೊರತು ಅದು ಅವರ ಕರ್ತವ್ಯನಿಷ್ಟೆಯಾಗಿಲ್ಲ. ಅದಕ್ಕೆ ಪೂರ್ವಭಾವಿಯಾಗಿ ಯಾವದೊಂದು ಕಾರ್ಯಕ್ರಮವೂ ಇಲ್ಲದೇ ಇರುವುದರಿಂದ ಯಾರಿಗೇ ಆಗಲೀ ಇದರಿಂದ ಒಂದು ನೆಮ್ಮದಿ, ಸಮಾಧಾನವನ್ನು ಪಡೆಯುವುದಕ್ಕಾಗುವುದಿಲ್ಲ. ಕರ್ತವ್ಯನಿಷ್ಟೆಯಿಂದ ಕೆಲಸಮಾಡಿದ್ದೇ ಆದರೆ ಆಗ ಒಂದು ರೀತಿಯ ನೆಮ್ಮದಿಯನ್ನು ನಾವು ಪಡೆಯಬಹುದು. ಈ ರಾಜ್ಯದ ಜನರಿಗೆ ಏನಾದರೂ ಒಂದು ಆಶೆಯನ್ನು ಸಹ ತೋರಿಸಬಹುದು. ನಾವು ಚುನಾವಣೆಯಲ್ಲಿ ಆರಿಸಿ ಬಂದಮೇಲೆ ಹೆಚ್ಚು ಕಡಿಮೆ ಈ ರಾಜ್ಯದಲ್ಲಿರತಕ್ಕ ಜನರು ತಮ್ಮ ಹಿತ ರಕ್ಷಣೆಯನ್ನು ನೋಡುತ್ತಿರುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಕರ್ತವ್ಯನಿಷ್ಠೆ ಅಂದರೆ ಹೇಗೆ ಇರಬೇಕೆಂಬುದನ್ನು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಹೆಚ್ಚು ಕಡಿಮೆ ಈ ರಾಜ್ಯದ ಜನರ ಭವಿಷ್ಯವನ್ನು ಕಾಪಾಡಲು ಸರ್ಕಾರ ಬಹಳ ಹೆಚ್ಚಿನ ಜವಾಬ್ದಾರಿಯಿಂದ ವರ್ತಿಸಬೇಕು. ಈ ರಾಜ್ಯದ ಜನರ ಕನಿಷ್ಟ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ನಾನು ಈಗ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇವತ್ತು ಬಹು ಮುಖ್ಯವಾಗಿ ಬಡವರಿಗೆ ವಸತಿ ಸೌಕರ್ಯಗಳನ್ನು ಕೊಡುವಂತಹ ಒಂದು ಉತ್ತಮವಾದಂಥ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಅದು ಒಂದು ಸಣ್ಣ ಯೋಜನೆಯಾದರೂ ಒಂದು ನಿರ್ದಿಷ್ಟವಾದ ಕ್ರಮವನ್ನು ಅವರ ಬಗ್ಗೆ ತೆಗೆದುಕೊಂಡಿದ್ದಾರೆ. ಆ ಒಂದು ಕಾರ್ಯವನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

ಶ್ರೀ ಕೆ. ಸಿದ್ದಯ್ಯ.—ಅದು ವಸ್ತುನಿಷ್ಠೆಯಲ್ಲ ಅಂದಮೇಲೆ ಅದು ಕರ್ತವ್ಯನಿಷ್ಠೆಯುಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ದುರ್ಬಲ ಜನರಿಗೆ ಕನಿಷ್ಠ ಪ್ರಮಾಣದ ವಸತಿಯನ್ನು ಕೊಡತಕ್ಕ ಯೋಜನೆಗಾಗಿ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ ಮನೆಗಳನ್ನೂ ಸಹ ಕಟ್ಟಿಕೊಡುತ್ತೇವೆಂದೂ ಸಹ ಹೇಳಿದ್ದಾರೆ. ಹಿಂದೆ ಕೆಲವು ನಡೆದಿರತಕ್ಕಂಥ ಉದಾಹರಣೆಗಳನ್ನು ಹೇಳಿದರೆ ಒಳ್ಳೆಯದೆಂದು ಕಾಣುತ್ತದೆ. ಮನೆಗಳ ವಸತಿ ಸೌಕರ್ಯಗಳನ್ನು ಒದಗಿಸುವ ಸಂದರ್ಭದಲ್ಲಿ ಸರ್ಕಾರ ಸ್ವಲ್ಪ ಹುಷಾರಾಗಿ ಇರಬೇಕು. ಹಿಂದೆ 54—55 ನೇ ಇಸವಿಯಲ್ಲಿ ಹರಿಜನ, ಗಿರಿಜನರಿಗೆ ಅಪಾರವಾದ ಮನೆಗಳನ್ನು ಕಟ್ಟಿಸಿಕೊಟ್ಟರು. ಹಾಗೆಯೇ ಅವರಿಗೆ ಸ್ವಲ ಹಣವನ್ನೂ ಕೊಟ್ಟರು. ಮನೆಗೆ ಬೇಕಾದಂಥ ಸಾಮಾನುಗಳನ್ನೂ ಸಹ ಒದಗಿಸಿಕೊಟ್ಟರು. ನಮ್ಮಲ್ಲಿ ಮಾವು, ಆಲದ ಮರ ಮುಂತಾದ ಬೆಂಡು ಮರಗಳಿವೆ. ಈ ಮರಗಳನ್ನು ಮನೆಗೆ ಹಾಕುವುದಿಲ್ಲ. ಅವನ್ನು ಅವರಿಗೆ ಕೊಡುವುದೇ ಇಲ್ಲ. ಸಾಮಾನ್ಯವಾಗಿ ಒಂದು ಮನೆಯನ್ನು ಕಟ್ಟಿದರೆ ಅದಕ್ಕೆ 50—60 ವರ್ಷಗಳವರೆಗೆ ಆಯಸ್ಸು ಇರುತ್ತದೆ. ಸರ್ಕಾರ ಒದಗಿಸಿಕೊಡುವಂಥ ಮರಮುಟ್ಟುಗಳಿಂದ ಮನೆಗಳನ್ನು ಕಟ್ಟಿದರೆ ಅದು ಸುಮಾರು 5 ವರ್ಷಗಳಲ್ಲಿಯೇ ಗೆದ್ದಲು ತಿಂದು ಬಿದ್ದುಹೋಗುತ್ತದೆ. ಆದ್ದರಿಂದ ಈಗ ಅಂತಹ ಕೆಲಸವನ್ನು ಈ ಸರ್ಕಾರ ಮಾಡುವುದಿಕ್ಕೆ ಹೋಗಬಾರದು. ಸಾಮಾನ್ಯ ಮನೆ ಕಟ್ಟಿದರೂ ಅದು ಕನಿಷ್ಠ ಪಕ್ಷ 50 ವರ್ಷಗಳಾದರೂ ಇರ

ಬೇಕು. ಇಲ್ಲಧಿದ್ದರೆ ಇದು ತೀರಾ ಚೌಕಾಸಿಯಾಗುತ್ತದೆ. ಈ ಬಾಬಿಗೆ ಪ್ರತಿವರ್ಷವೂ ಹಾಕುವ ದುಡ್ಡು ವೃಥಾ ಅನ್ಯಾಯವಾಗದೆ ಇರುವ ಹಾಗೆ ಸರ್ಕಾರದವರು ನೋಡಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ಈಗ ನಾನು ಮಧ್ಯೆ ಇಂಟರ್‌ವೀನ್ ಮಾಡಬೇಕೆಂದಿರಲಿಲ್ಲ. ಈ ವಿಚಾರದಲ್ಲಿ ನಾನು ಮೊದಲೇ ಸೂಕ್ಷ್ಮವಾಗಿ ಮಾನ್ಯ ಸದಸ್ಯರಿಗೆ ಪರಿಚಯ ಮಾಡಿಸಿಕೊಟ್ಟರೆ ಬಹುಶಃ ಹೆಚ್ಚಿನ ಸಹಾಯವಾಗುತ್ತದೆಂದು ನಾನು ಕೆಲವು ವಿಷಯಗಳನ್ನು ಈಗ ಹೇಳಬೇಕಾಗಿದೆ. ಈಗ ಅವರಿಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅವರಿಗೆ ಕಟ್ಟು ಹೋಗಿರತಕ್ಕ ಸಾಮಾನುಗಳನ್ನು ಕೊಡಬೇಕೆಂಬ ದೃಷ್ಟಿ ಸರ್ಕಾರಕ್ಕೆ ಇಲ್ಲ. ಮನೆ ಕಟ್ಟಿ ಕೊಳ್ಳುವುದಕ್ಕೋಸ್ಕರವಾಗಿ ಏನೋ ಒಂದು ಲೆಕ್ಕ ಬರೆಯುತ್ತಾರೆಂದು ಅನಾದರಣೆಯಿಂದ ಕೆಲಸಮಾಡುವುದಲ್ಲ. ಆ ರೀತಿ ಮಾಡುವುದು ಅಗತ್ಯವಿಲ್ಲ. ಈ ಸ್ಕೀಮಿನಲ್ಲಿ ಮನೆ ಕಟ್ಟಿಕೊಡುವುದಕ್ಕೆ ಯೋಗ್ಯವಾಗಿ ಅವರಿಗೆ ಸಹಾಯ ಮಾಡಬೇಕಾಗಿದೆ. ಜಂಗಲ್‌ವುಡ್ ವೆರೈಟೀಸ್ ಬೇಕಾದಷ್ಟಿವೆ. ಹಳ್ಳಿಗಳಲ್ಲಿ ಹುಲ್ಲು ಮನೆ ಕಟ್ಟಿದ್ದರೂ ಅನೇಕ ಸಂದರ್ಭಗಳಲ್ಲಿ ಅವುಗಳಿಗೆ 50 ವರ್ಷಗಳಾದರೂ ಗೆದ್ದಲು ಹಿಡಿಯುವುದಿಲ್ಲ. ಹೊಸದಾಗಿ ಅಂತಹ ಮನೆಗಳನ್ನು ಕಟ್ಟಿದರೆ ಅಷ್ಟಾಗಿ ಗೆದ್ದಲು ಹಿಡಿಯುವುದಿಲ್ಲ. ಅದರ ಅನುಭವ ಹಳ್ಳಿಗಾಡಿನಲ್ಲಿರುವವರಿಗೆ ಜಾಸ್ತಿ ಇದೆ. ಮರಮುಟ್ಟುಗಳ ವಿಚಾರ ನನಗೆ ಗೊತ್ತಿದೆ. ಯಾವಾಗ, ಏನಾಯಿತು ಎಂಬ ಅನುಭವ ಇದರ ಬಗ್ಗೆ ನನಗೆ ಇರುವುದರಿಂದ, ಆ ತಪ್ಪುಗಳನ್ನು ಪುನಃ ಯಾರೂ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಇದು ಏನೋ ಕಣ್ಣು ಒರಿಸುವುದಕ್ಕೆ ಮಾಡುವ ಯೋಜನೆಯಲ್ಲ. ಎರಡನೆಯ ವಿಚಾರವೇನೆಂದರೆ, ಮಾನ್ಯ ದೇವೇಗೌಡರು ಅವರ ಪಕ್ಷದ ನಾಯಕರಾಗಿ ಹೇಳಬೇಕಾದುದನ್ನು ಹೇಳುತ್ತಾರೆ. ಒಂದೊಂದು ಸಾರಿ ಬಹಳ ಆತುರದಿಂದ ಡಿಪೆಂಡ್ ಮಾಡುವುದಕ್ಕೆ ಹೋಗುವಾಗ ಅವರೇ ಮುಗ್ಗರಿಸುತ್ತಾರೆ.

ಇದೇನು ಹೊಸದೇ ? ಅದೂ ಹಳೇದೇ. ಆದರೆ ಅದನ್ನು ಮಾಡತಕ್ಕ ವಿಧಾನ ಹೊಸದಾಗಿ ಕಾಣಬಹುದು ಅಷ್ಟೆ. ನಾವು ಹಿಂದೆಲ್ಲಾ ಇದೇ ವಿಷಯವನ್ನು ಎಷ್ಟೋ ಸಾರಿ ವಿಚಾರ ಮಾಡಿದ್ದೇವೆ. ಆದರೆ ಆಗ ಇಷ್ಟು ಕರ್ತವ್ಯ ನಿಷ್ಠೆ ಇರಲಿಲ್ಲ ಎನ್ನುವುದನ್ನು ಒಪ್ಪಬಹುದು. ಹಿಂದೆ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಆ ಏನೋ ಒಂದು ಆತುರದಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಹಣವನ್ನು ತಂದೆವು. ಒಳ್ಳೆಯ ಉದ್ದೇಶದಿಂದಲೇ ಸೊಸೈಟಿಗಳನ್ನು ಮಾಡಿದೆವು. ಸೊಸೈಟಿಗಳ ಮೂಲಕ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಹಣವನ್ನು ಕೊಡಲಾಯಿತು. ಆದರೆ ಇಲ್ಲಿಯವರೆಗೆ ಆ ಬಾಬಿನಲ್ಲಿ ವಾಪಸ್ ಬಂದಿರುವುದು ಕೇವಲ 40 ಸಾವಿರ ರೂಪಾಯಿಗಳು ಮಾತ್ರ. ಸುಮಾರು 17 ಸಾವಿರ ಮನೆಗಳನ್ನು ಕಟ್ಟಿಸಲು ಆ ಹಣವನ್ನು ಕೊಡಲಾಯಿತು. ಆ ದಿವಸ ಕೆಲವರು ದೂರಾಲೋಚನೆ ಇಲ್ಲದೆ ಸುಮ್ಮನೆ ಅದು ಉದ್ದ ಇಷ್ಟಿರಬೇಕು ಅಗಲ ಇಷ್ಟಿರಬೇಕು ಎಂದು ಉದ್ದಕ್ಕೆ 30 ಅಡಿ ಅಗಲ 40 ಅಡಿ ಉದ್ದಕ್ಕೆ ಗೋಡೆಗಳನ್ನೆತ್ತಿ, ಮೇಲೆ ಹೊದಿಸುವುದಕ್ಕೆ ಹೆಂಚಿಗೆ ದುಡ್ಡಿಲ್ಲ ಎಂದು ಹಾಗೇ ಉಳಿದಿರತಕ್ಕವೂ ಎಷ್ಟೋ ಇರಬಹುದು. ಏಕೆಂದರೆ ಈ ಜನರಿಗೆ ಕೊಟ್ಟ ದುಡ್ಡು ವಾಪಸ್ ಬರುತ್ತದೆ ಅನ್ನತಕ್ಕ ಮಾತೇ ಇಲ್ಲ. ಈ ಮನೆಗಳನ್ನು ಕಟ್ಟತಕ್ಕ ವಿಚಾರ ಏನಿದೆ ಇದು ''ಅಸ್ ಓಲ್ಡ್ ಆಸ್ ಮ್ಯಾನ್' ಆದರೆ ಈ ದಿವಸ ಅದನ್ನು ಕಟ್ಟತಕ್ಕ ವಿಧಾನ ಹೊಸದಷ್ಟೇ. ಈ ದಿವಸ ನಾವು ಮಾಡುತ್ತಿರುವುದು ಕೂಡ ಹೊಸದೇನೂ ಅಲ್ಲ. ಹಿಂದಿನದನ್ನೇ ಬೇರೊಂದು ರೀತಿಯಲ್ಲಿ ಮಾಡುತ್ತಿದ್ದೇವೆ. ಭಾರತದಲ್ಲಿ ವಾಸಕ್ಕೆ ಮನೆಯಿಲ್ಲದಂಥ ಜನರ ಸಂಖ್ಯೆ ಲಕ್ಷಗಟ್ಟಲೆ ಇದೆ—ಅಂದರೆ ಹಿಮಾಲಯದಂಥ ಒಂದು ಬೃಹತ್ ಸಮಸ್ಯೆಯಾಗಿದೆ ಇದು. ಏನೋ ಈ ದಿವಸ ಇಂಜಿನಿಯರಿಂಗ್ ಬಹಳ ಮುಂದುವರಿದಿದೆ, ಆದ್ದರಿಂದ ಮನೆಗಳನ್ನು ಕಟ್ಟತಕ್ಕ ವಿಚಾರದಲ್ಲಿ ಇಟ್ಟಿಗೆ ಗೋಡೆಗಳನ್ನೇ ಹಾಕಬೇಕು, ಪ್ರತಿ ಗೋಡೆಯಲ್ಲೂ ನಾಲ್ಕು ಕಿಟಕಿಗಳನ್ನೇ ಇಡಬೇಕು, ತಾರಸಿ ಮಾಳಿಗೆಯನ್ನೇ ಹಾಕಬೇಕು ಎಂದು ಹೀಗೆಲ್ಲಾ ಒಂದು ಮಾಡರನ್ ಅಪ್ರೋಚ್ ಇಟ್ಟುಕೊಂಡು ಹೊರಟರೆ ತೊಂದರೆಯಾಗುತ್ತದೆ. I am against this modern approach to the

2-00 P. M.

economy. This modern approach has created havoc in this country and it has not solved the problem of the poorer sections on a massive scale. ನಮ್ಮಲ್ಲಿ ಹೀಗೆ ಇದೊಂದು ಲಾಟರಿ ಇದ್ದ ಹಾಗಾಗಿದೆ. ದುಡ್ಡು ಕೊಡತಕ್ಕವರು ಬಹಳ ಜನಗಳಾದರೆ ಲಾಟರಿಯಲ್ಲಿ ಬಹುಮಾನ ಪಡೆಯತಕ್ಕವರು ಒಬ್ಬರೋ, ಇಬ್ಬರೋ ಅಷ್ಟೇ. ಆದರೆ ಇದು ಹೀಗಾಗಬಾರದೆಂಬುದು ನನ್ನ ಖಚಿತವಾದ ಅಭಿಪ್ರಾಯ; ಅದನ್ನು ತಾವುಗಳೂ ಕೂಡ ಒಪ್ಪುತ್ತೀರೆಂದು ನಾನು ನಂಬಿದ್ದೇನೆ. ಎಲ್ಲರಿಗೂ ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ಕೊಡಬೇಕೆಂದು

(ಶ್ರೀ ಡಿ. ದೇವರಾಜ ಅರಸ್)

ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ ಈ ವಿಷಯ ತಮಗೂ ಚೆನ್ನಾಗಿ ಅನುಭವವಿರಬೇಕು. ತಾವೂ ಕೂಡ ಹಳ್ಳಿಯ ವಾಸದ ಅನುಭವ ಪಡೆದಿದ್ದೀರಿ. ಹಿಂದೆ ನಮ್ಮ ಹಿರಿಯರು ಯಾರೂ ಅಷ್ಟಾಗಿ ಇಟ್ಟಿಗೆ ಮನೆಯನ್ನು ಕಟ್ಟಿಸುತ್ತಿರಲಿಲ್ಲ. ಅವರು ಸಾಮಾನ್ಯವಾಗಿ ವಾಸ ಮಾಡುತ್ತಿದ್ದ ಮನೆಗಳೆಲ್ಲಾ ಮಣ್ಣಿನ ಮನೆಗಳೇ. ಅವು ನೂರು ಇನ್ನೂರು ವರ್ಷಗಳವರೆಗೂ ಹಾಗೆ ಭದ್ರವಾಗಿ ನಿಂತಿರುತ್ತವೆ. ಅನೇಕರಿಗೆ ಈ ಅನುಭವ ಇದೆ. ಆದರೆ ನಾನು ಹೇಳುತ್ತಿರುವುದು ಈ ದಿವಸ ನಾವು ಕಟ್ಟತಕ್ಕ ಮನೆಗಳೇನಿವೆ ಅವು ಅಷ್ಟು ವರ್ಷಗಳ ಕಾಲ ಇರಬೇಕಾದ್ದಿಲ್ಲ. ಅವು 50 ವರ್ಷ ಕೂಡ ಇರಬೇಕಾಗಿಲ್ಲ. ನನ್ನ ದೃಷ್ಟಿಯಲ್ಲಿ ಅವು 25—30 ವರ್ಷ ಇದ್ದರೆ ಸಾಕೆಂಬ ಅಭಿಪ್ರಾಯ ನನ್ನದು. ಅಷ್ಟರಲ್ಲಿ ಪ್ರಪಂಚದಲ್ಲಿ ಇನ್ನೂ ಏನೇನು ಬದಲಾವಣೆಗಳು ಬರುತ್ತವೆಯೋ ಯಾರು ಕಂಡಿದ್ದಾರೆ ? ಅಷ್ಟರಲ್ಲಿ ಇನ್ನೂ ಅನೇಕ ಹೊಸ ಹೊಸ ವಿಚಾರಗಳು ಈ ವಿಚಾರದಲ್ಲಿ ತಲೆದೋರಬಹುದು. ಆದರೆ ನನಗೆ ಇನ್ನೂ ಒಂದು ಏನು ಮನಸ್ಸಿನಲ್ಲಿ ಅನಿಸುತ್ತಿದೆ ಎಂದರೆ ಈ ಹರಿಜನರಿಗೆ ಮೊಟ್ಟಮೊದಲನೆಯದಾಗಿ ಸಂಪಾದನಾ ಶಕ್ತಿ ಇಲ್ಲ. ಅಂಥವರಿಗೆ ನಾವು ಏನು ಮಾಡಿಕೊಟ್ಟರೂ ಅದು ಉಳಿಯುವುದಿಲ್ಲ. ಅದುದರಿಂದ ನಾವು ಅವರಿಗೆ ಕಟ್ಟುತಕ್ಕ ಮನೆಗಳಿಗೆ ಹಣವನ್ನು ಅಪಾರವಾಗಿ ವೆಚ್ಚ ಮಾಡದೆ, ಆ ಜನರಲ್ಲಿ ಹೆಚ್ಚು ಸಂಪಾದನಾ ಶಕ್ತಿಯನ್ನು ಹುಟ್ಟಿಸುವುದಕ್ಕಾಗಿ ಹಣವನ್ನು ಹೆಚ್ಚು ಖರ್ಚು ಮಾಡೋಣ ಅನ್ನುವುದು ನನ್ನ ಉದ್ದೇಶ. ಅಲ್ಲದೆ ಈ ಮನೆಗಳನ್ನು ಯಾರಿಗೂ ಉಚಿತವಾಗಿ ಕೊಡಬೇಕು ಅನ್ನತಕ್ಕ ಮಾತೇ ಇಲ್ಲ. ಎಲ್ಲರೂ ಅವರವರ ಒಂದು ಜವಾಬ್ದಾರಿಯನ್ನು ಅವರು ಅರಿತು ಅದರ ಬಗ್ಗೆ ಅವರಿಗೆ ಒಂದು ಆಸಕ್ತಿ ಇದ್ದರೇನೇ ಅವರು ಆ ಆಸ್ತಿಯನ್ನು ಉಳಿಸಿಕೊಳ್ಳುವುದು—ಇಲ್ಲದಿದ್ದರೆ ಅವರು ಅದನ್ನು ಉಳಿಸಿಕೊಳ್ಳುವುದೂ ಇಲ್ಲ—ಇತ್ತಲಾಗಿ ಅದನ್ನು ಬೇರೊಬ್ಬರು ಕೊಂಡುಕೊಳ್ಳುವ ಹಾಗೂ ಇರುವುದಿಲ್ಲ. ಏಕೆಂದರೆ ಅದು ಹರಿಜನರಿದ್ದ ಮನೆ ಎಂದು ಯಾರೂ ಅದನ್ನು ಕೊಂಡುಕೊಳ್ಳುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅವರಿಗೆ ಕಟ್ಟಿಸತಕ್ಕ ಮನೆಗಳೇನಿವೆ ಅವುಗಳಿಗೆ ಆಯಾಯ ಸ್ಥಳದಲ್ಲಿ ಏನೇನು ವಸ್ತುಗಳು ದೊರೆಯುತ್ತವೆಯೋ ಅವುಗಳನ್ನು ಉಪಯೋಗ ಮಾಡೋಣ ಅನ್ನುವುದು ನನ್ನ ಉದ್ದೇಶ. ಈ ದಿವಸ ಮೈಸೂರು ನಗರದಲ್ಲಿ ಬಿದಿರನ್ನು ಉಪಯೋಗ ಮಾಡಿ ಕಟ್ಟಿಸಿರತಕ್ಕ ಮಹಡಿ ಮನೆಗಳಿವೆ. ಈ ವಿಚಾರ ಮಾನ್ಯ ಅಧ್ಯಕ್ಷರಿಗೆ ಚೆನ್ನಾಗಿ ಗೊತ್ತಿದೆ. ನಮ್ಮಲ್ಲಿ ಹಿಂದೆ ಎಂಥೆಂಥಾ ಮನೆಗಳನ್ನು ಅಲ್ಲಲ್ಲೇ ದೊರೆಯತಕ್ಕ ಸಾಮಾನುಗಳನ್ನು ಬಳಸಿ ಕಟ್ಟಿಸಿದ್ದಾರೆ ಎಂಬುದನ್ನು ನೋಡಿದರೆ ನಾವು ಅದೇ ಮಾರ್ಗದಲ್ಲಿ ಹೋಗೋಣ, ಆ ಹಿಂದಿನವರು ಏನು ಮಾಡಿದ್ದಾರೆ ಅದನ್ನೇ ಮತ್ತೆ ರಿವೈಸ್ ಮಾಡೋಣ ಎಂದು ಮನಸ್ಸು ಮಾಡಿದ್ದೇನೆ. ಆದರೆ ನಾವು ಇದನ್ನು ತೋರಿಕೆಗಾಗಿ ಅಥವಾ ಎದುರು ಪಕ್ಷದವರನ್ನು ಸಮಾಧಾನ ಮಾಡುವುದಕ್ಕಾಗಿ ಮಾಡತಕ್ಕ ಕೆಲಸವೇನೂ ಅಲ್ಲ ಇಲ್ಲಿ ಲಕ್ಷಾಂತರ ಜನರಿಗೆ ನೆಗಳನ್ನು ಕಟ್ಟಿಸಬೇಕು ಎಂಬ ಬೃಹತ್ ಯೋಜನೆ ಮುಂದಿರುವಾಗ ಸಾಮಾನ್ಯವಾಗಿ ಒಳ್ಳೆಯ ಮಣ್ಣಿ ಮನೆಗಳನ್ನೇ ಕಟ್ಟಿಸಿದರೆ ಸಾಕೆಂಬುದು ನನ್ನ ಅಭಿಪ್ರಾಯ. ಈ ಯೋಜನೆಯಲ್ಲಿ ಸ್ಥಳೀಯ ಮುಖಂಡರನ್ನೂ ಸೇರಿಸಬೇಕಾಗಿದೆ. ಸ್ಥಳೀಯ ಸಾಮಾನುಗಳನ್ನೇ ಬಳಸಿ ಅಲ್ಲಿ ದೊರೆಯುತಕ್ಕ ಮಣ್ಣನ್ನೇ ಬಳಸಿ ಮನೆಗಳನ್ನು ಕಟ್ಟಿಸೋಣ ಎಂಬ ಉದ್ದೇಶ ನನಗಿದೆ. ಹಿಂದೆ ಇದರ ವಿಚಾರದಲ್ಲಿ ಒಂದು ದೊಡ್ಡ ಕಥೆಯೇ ಆಗಿತ್ತು...

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಕಂಪೆನಿಯಲ್ಲಿರತಕ್ಕವರೇ ಅದರಲ್ಲೂ ಇದ್ದರು ಅವರ ಹೆಸರನ್ನು ಬೇಕಾದರೂ ಹೇಳು ಎಂದರೆ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಹೌದು ನನಗೂ ಗೊತ್ತಿದೆ ಅವರ ಜಾತಿ ಮತ್ತು ಹೆಸರು ಎಲ್ಲಾ. ಆದರೆ ನಮ್ಮ ಮಾನ್ಯ ದೇವೇಗೌಡರಿಗೆ ಆ ಪಕ್ಷದಲ್ಲಿ ಸೇರಿದ ನಂತರ ಅವರಿಗೊಂದು ಭ್ರಾಂತಿ ಹುಟ್ಟಿದೆ. ಅವರಿಗೆ ಅಲ್ಲಿ ಇರುವುದಕ್ಕೆ ಮನಸಿಲ್ಲ—ಬೇರೇ ಗತಿಯಿಲ್ಲ ಅನ್ನುವಂತೆ ಆಗಿದೆ ಅವರ ವಿಚಾರ. I do not accept the philosophy behind this.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾವೂ ಕೇಳುತ್ತಿದ್ದೇವೆ—ನೀವು ಅವರನ್ನು ಪದೇ ಪದೇ ಊಟ ಉಪಚಾರಕ್ಕೆ ಕರೆಸಿಕೊಳ್ಳುತ್ತಾ ಇದ್ದೀರಿ ಎಂದು...

ಶ್ರೀ ಡಿ. ದೇವರಾಜ ಅರಸ್.—ಅಷ್ಟು ಸುಲಭವಾಗಿ ಕೊಂಡುಕೊಳ್ಳುವುದಕ್ಕೆ ದೊರೆಯತಕ್ಕಂಥ ವ್ಯಕ್ತಿಯಲ್ಲ ಅವರು. ಹಿಂದೆ ಏನೇನೋ ನಡೆಯಿತು. ಆದರ ವಿಚಾರ ಈಗ ಬೇಡ. ಸರ್ಕಾರದ ಕಾಡು ಬೇಕಾದಷ್ಟು ಇದೆ. ಅದರಲ್ಲಿ ನಾವೀದಿವಸ ಕೋಟ್ಯಾಂತರ ರೂಪಾಯಿಗಳ ನಾಟಾವನ್ನು ಕಡಿದು ಬೇರೆಯವರಿಗೆ ಮಾರಾಟ ಮಾಡುತ್ತಿದ್ದೇವೆ. ಆ ಮರವನ್ನೇ ಇದಕ್ಕೆ ನಾವು

ಈ ದಿವಸ ಏತಕ್ಕೆ ಉಪಯೋಗ ಮಾಡಬಾರದು ಎಂದು ಆಲೋಚನೆ ಮಾಡುತ್ತಿದ್ದೇವೆ... ಇತ್ತೀಚೆಗೆ ವುಡ್ ಸ್ಟೈನ್ಸ್ ಸ್ವಲ್ಪ ಬೆಳೆದಿದೆ, ಸಾಫ್ಟ್ ವುಡ್ ಹಾರ್ಡ್ ವುಡ್ ಮಾಡುವ ಪ್ರೋಸೆಸ್ ಇದೆ, ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಮನೆಗಳ ಆವಶ್ಯಕತೆ ಇರುವವರನ್ನೂ ಇನ್‌ವಾಲ್ವ್ ಮಾಡಬೇಕು, ಹೀಗೆ ಮಾಡಿ ಮನೆಗಳ ಸಮಸ್ಯೆ ಬಗೆಹರಿಸಬೇಕು, ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಯಾರು ಮನೆ ಕಟ್ಟಿಕೊಂಡು ಸಂಸಾರಿಯಾಗಿ ಬಾಳಬೇಕೆಂದಿರುವರೋ ಅವರೂ ಸ್ವಲ್ಪ ಶ್ರಮವಹಿಸಬೇಕು ಎಂಬ ಭಾವನೆ ಇದೆ. ಪ್ರಾಣಿಗಳೂ ಕೂಡ ಮನೆ ಅಥವ ಗೂಡು ಕಟ್ಟಿಕೊಳ್ಳುವುದಕ್ಕೆ ಸಾಹಸ ಮಾಡುವುವು; ಇದು ನೈಸರ್ಗಿಕ ನಿಯಮ. ಅನಂತರ ಸ್ವಶಕ್ತಿಯ ಮೇಲೆ ಮನುಷ್ಯರೂ ಕೂಡ ನಿಲ್ಲಲು ಪ್ರಯತ್ನಿಸಬೇಕು. ಸಾಮೂಹಿಕವಾಗಿ ಮನೆ ಬೇಕೆನ್ನುವವರು ಯಾರಿರುವರೋ ಅವರಿಂದಲೂ ಕೆಲಸ ಮಾಡಿಸಿ ಮನೆ ಕಟ್ಟಿಸಲು ವ್ಯವಸ್ಥೆ ಮಾಡಬೇಕು ಎಂಬ ಉದ್ದೇಶವಿದೆ. ಇದರ ಬಗ್ಗೆ ಉಪಯುಕ್ತವಾದ ಯಾವ ಸಲಹೆ ಕೊಟ್ಟರೂ ಸ್ವಾಗತ ಮಾಡಲು ಸಿದ್ಧ ಎಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ವಸತಿ ಸೌಕರ್ಯ ಒದಗಿಸುವಾಗ ಟ್ರೈಪ್ ಡಿಸ್ಟ್ರಿನ್ ತೆಗೆಯುವಿರಾ?

ಶ್ರೀ ಡಿ. ದೇವರಾಜ ಅರಸ್.—ಆಗಬಹುದು.

ಶ್ರೀ ಎಚ್.ಡಿ. ದೇವೇಗೌಡ.—ಮುಖ್ಯ ಮಂತ್ರಿಗಳು ನನ್ನ ಹೆಸರು ಹೇಳಿ ವ್ಯಾಖ್ಯಾನ ಮಾಡಿದರು, ಹಳ್ಳಿಯ ಅಭ್ಯಾಸ ನನಗೂ ಸಹ ಹೆಚ್ಚಾಗಿದೆ. ಹಿಂದೆ ಹಳ್ಳಿಗಳಲ್ಲ ಕಾಡು ಮರ ಉಪಯೋಗಿಸಿ ಮನೆ ಕಟ್ಟಿದ್ದಾರೆ. ಹರಿಜನರು 2 ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟಿದ್ದಾರೆ, ಅದಕ್ಕೆ ಹೊನ್ನೆ, ಟೀಕ್‌ವುಡ್ ಮುಂತಾದ್ದನ್ನು ಉಪಯೋಗ ಮಾಡಿಲ್ಲ, ಊರ ಬಳಿ ದೊರೆಯುವ ಮರ ಉಪಯೋಗ ಮಾಡಿ ಕಟ್ಟಿದ್ದಾರೆ. ಸ್ಥಳದಲ್ಲಿ ದೊರೆಯುವ ಮಣ್ಣು, ಮರ ಮುಂತಾದ್ದನ್ನು ಉಪಯೋಗ ಮಾಡಿ ಹರಿಜನರು 2 ಸಾವಿರರೂಪಾಯಿ ಖರ್ಚಿನಲ್ಲಿ ಮನೆ ಕಟ್ಟಿದ್ದಾರೆ. ಆದರೆ ಸೊಸೈಟಿಗಳಿಗೆ ಡಿಫಾಲ್ಟರ್ಸ್ ಆಗಿದ್ದಾರೆ, ಹಣ ವಾಪಸು ಕೊಡುವುದಕ್ಕಾಗಿಲ್ಲ. ಪುಕ್ಕಟ್ಟೆ ಕೊಡಲು ಸಾಧ್ಯವಿದೆಯೇ ಹೇಳಿ.

ಶ್ರೀ ಡಿ. ದೇವರಾಜ ಅರಸ್.—ಅದು ಸಾಧ್ಯವಿಲ್ಲ. ಲಕ್ಷಗಟ್ಟಲೆ ಜನರಿಗೆ ಪುಕ್ಕಟ್ಟೆ ಸೌಕರ್ಯ ಕೊಡಲು ಸಾಧ್ಯವೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮುಖ್ಯಮಂತ್ರಿಗಳು ಹೇಳಿದ ಮಾತನ್ನು ಕೇಳಿದಮೇಲೆ ಇನ್ನೊಂದು ಸಲಹೆ ಕೊಡುತ್ತೇನೆ. ಮನೆ ಪಡೆಯುವ ಜನರು ನಿರ್ಗತಿಕರು, ಯಾವುದೇ ರೀತಿಯ ಆಸ್ತಿಯಿಲ್ಲದಿರುವವರು. ಅವರಿಗೆ ಮನೆ ಕೊಡುವಾಗ ದುಡಿಮೆಗೆ ಹಚ್ಚಿ ಒಂದು ವ್ಯವಸ್ಥೆ ಮಾಡಬೇಕು. ಅದಕ್ಕೆ ಹೇಳುವುದು 50 ಎಕರೆ ಭೂಮಿ ಸಿಕ್ಕುವ ಕಡೆ 10 ಕುಟುಂಬಗಳನ್ನಿಟ್ಟು ಅವರಿಗೆ ಮನೆ ಮತ್ತು ಭೂಮಿ ಎರಡೂ ಕೊಟ್ಟು ಅನುಕೂಲ ಮಾಡಬೇಕು ಯಾವುದೇ ಕ್ಷೇತ್ರದಲ್ಲಾಗಲಿ ದುಡಿಮೆ ಮಾಡುವವರಿಗೆ ಅವರನ್ನು ಕಂಡುಹಿಡಿದು ಅವರಿಗೆ ಅನುಕೂಲ ಕಲ್ಪಿಸಬೇಕು. ವ್ಯವಸಾಯದ ಕೂಲಿಗಳಿಗೆ 12 ತಿಂಗಳೂ ವರ್ಷದಲ್ಲ ಕೂಲಿ ಸಿಕ್ಕುವುದಿಲ್ಲ, 3 ತಿಂಗಳೂ ಸಿಕ್ಕಬಹುದು ಇದನ್ನು ತಜ್ಞರು ಪರಿಶೀಲಿಸಿದ್ದಾರೆ. ಅವರಿಗೆ ವಸತಿ ಸೌಕರ್ಯ ಕಟ್ಟಿಸಿಕೊಟ್ಟು ಅವರು ಉತ್ಪತ್ತಿ ಮಾಡುವುದಕ್ಕೂ ಅನುಕೂಲವಾಗುವಂತೆ ಅವಕಾಶ ಕಲ್ಪಿಸಲು ತಕ್ಕ ಕಾರ್ಯಕ್ರಮ ರೂಪಿಸಿಕೊಳ್ಳಬೇಕು. ಟಿಬೆಟ್ ಮುಂತಾದ ಕಡೆಗಳಿಂದ ಬಂದಿರುವವರಿಗೆ ವ್ಯವಸ್ಥೆ ಮಾಡಿರುವಂತೆ ಕಾಲೋನಿ ಮಾಡಿ ಸೌಕರ್ಯ ಕಟ್ಟಿಸಬೇಕು ಉದ್ಯೋಗ ಒದಗಿಸಬೇಕು. ಇದನ್ನು ಸರಕಾರ ಗಮನಿಸಬೇಕು. ಮನೆಗಳಿಗೆ ಈಗ ಅನೇಕರಿಗೆ ನಿವೇಶನ ಕೊಡಲಾಗಿದೆ. ಅದು ಸಹಿತ ನಾನು ಹೇಳಿದಂತೆ ಸೌಕರ್ಯ ಕಲ್ಪಿಸಬೇಕು.

ಇಂದು ನಮ್ಮ ರಾಜ್ಯದಲ್ಲಿ ಉದ್ಯೋಗ ಜನತೆಗೆ ಒದಗಿಸುವುದು ಒಂದು ಬೃಹತ್ ಸಮಸ್ಯೆಯಾಗಿದೆ. ಮಾನ್ಯ ಅರ್ಥಿಕ ಸಚಿವರು ಒಂದು ವಿಚಾರ ಹೇಳಿದ್ದಾರೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡಲು, ಉದ್ಯೋಗದ ಅವಕಾಶ ಹೆಚ್ಚಿಸಲು ಇರುವ ಕಾರ್ಯಕ್ರಮಗಳಿಗೆ ಆದ್ಯತೆ ಕೊಡಲಾಗುವುದು ಎಂದು ತಿಳಿಸಿದ್ದಾರೆ. ಈ ದಿವಸ ಕೋಟ್ಯಾಂತರ ರೂಪಾಯಿ ಹಣ ಹಾಕಿ ಕಾರ್ಖಾನೆ ಮಾಡುವರು. ಆದರೆ ಅದು ಲೇಬರ್ ಓರಿಯೆಂಟೆಡ್ ಆಗಿರುವುದಕ್ಕೆ ಬದಲಾಗಿ ಮೆಷೀನ್ ಓರಿಯೆಂಟೆಡ್ ಆಗುತ್ತಿದೆ, ಇದನ್ನು ತಡೆಯಬೇಕು. ಕನಿಷ್ಠ ಒಂದು ಕೋಟಿ ರೂಪಾಯಿ ಹಾಕಿರುವ ಒಂದು ಉದ್ಯಮದಲ್ಲಿ 1 ಸಾವಿರ ಜನರಿಗಾದರೂ ಉದ್ಯೋಗ ಒದಗಿಸಬೇಕು. ಹರಿಹರದಲ್ಲಿ ಒಂದು ಕಾರ್ಖಾನೆ ಇದೆ, ಅದಕ್ಕೆ 8–10 ಕೋಟಿ ಖರ್ಚುಮಾಡಿದ್ದಾರೆ, ಆದರೆ ಅಲ್ಲಿ 500 ಜನರು ಸಹ ಕೆಲಸಮಾಡಲು ಸಾಧ್ಯವಿಲ್ಲ. ಮಂಗಳೂರಿನಲ್ಲಿ ಫರ್ಟಿಲೈಜರ್ ಕಾರ್ಖಾನೆಯಿಂದ, ಕೋಟ್ಯಾಂತರ ರೂಪಾಯಿ ಅಲ್ಲಿಗೆ ಖರ್ಚಮಾಡಿದರೂ ಕಡಮೆ ಕೆಲಸಗಾರರಿಗೆ ಅವಕಾಶವಿದೆ ಲೇಬರ್ ಓರಿಯೆಂಟೆಡ್ ಯೋಜನೆಯಾಗಬೇಕು.

ಶ್ರೀ ಡಿ. ದೇವರಾಜ ಅರಸ್.—ಅದು ಎಲ್ಲಾ ಕಡೆ ಮಾಡುವುದು ಕಷ್ಟ.

ಶ್ರೀ ಕಾಗೋಡು ತಿಮ್ಮಪ್ಪ.—ಇಂದು 3 ಲಕ್ಷ ಜನ ನಿರುದ್ಯೋಗಿಗಳಿದ್ದಾರೆ, ಜೊತೆಗೆ ಕೃಷಿ ಕಾರ್ಮಿಕರು ಸರಕಾರಿ ಅಂಕಿ ಅಂಶದ ಪ್ರಕಾರ 26 ಲಕ್ಷ ಇದ್ದಾರೆ. ಪ್ರತಿವರ್ಷ ಆಯವ್ಯಯದಲ್ಲಿ ಸರಕಾರಿ ನೌಕರರಿಗೆ ಒಂದಲ್ಲ ಒಂದು ರೀತಿಯಲ್ಲಿ ಪರಿಹಾರ ಸಿಕ್ಕುವುದು. ಆದರೆ ಕೃಷಿ ಕಾರ್ಮಿಕರಿಗೆ ಕೂಲಿ ಜಾಸ್ತಿ ಮಾಡಿಲ್ಲ. ಅವರಿಗೆ ಕಾನೂನು ಮೂಲಕ ರಕ್ಷಣೆ ನೀಡಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲೂ ಕೃಷಿ ಕಾರ್ಮಿಕರನ್ನು ನಿಯಂತ್ರಿಸುವ ಎಷ್ಟು ಜನ ಅಧಿಕಾರಿಗಳಿದ್ದಾರೆಂಬುದನ್ನು ನೋಡಿ. ಕೃಷಿ ಕಾರ್ಮಿಕರನ್ನು ಇಂದು ಕೈಬಿಟ್ಟಿದ್ದೇವೆ. ಅವರು ಸಂಘಟಿತರಾಗಿಲ್ಲ, ಅವರಲ್ಲಿ ರಾಜಕೀಯ ಪ್ರಜ್ಞೆಯಿಲ್ಲ, ಪ್ರಜ್ಞೆ ಇರುವವರು ಸಂಘಟಿತರಾಗಿದ್ದಾರೆ. ಸಂಘಟಿತರಾಗಿರುವವರಿಗೆ ಹೆಚ್ಚು ಸಹಾಯ ದೊರೆಯುತ್ತದೆ. ಅಸಂಖ್ಯಾತರಾಗಿರುವ ಕಾರ್ಮಿಕರ ಶೋಷಣೆ ನಡೆಯುತ್ತಿದೆ. ಆದರಿಂದ ಅವರನ್ನು ಮುಕ್ತರನ್ನಾಗಿ ಮಾಡುವವರೆಗೆ ಆರ್ಥಿಕ ಕ್ಷೇತ್ರ ಬೆಳೆಯುವುದಿಲ್ಲ. ಸರಕಾರಿ ಅಂಕಿ ಅಂಶಗಳ ಪ್ರಕಾರ ಸುಮಾರು 3 ಸಾವಿರಕ್ಕಿಂತ ಹೆಚ್ಚು ಕಾರ್ಖಾನೆಗಳಿವೆ, ಅವುಗಳಲ್ಲಿ ಕನಿಷ್ಟ 20 ಜನರಿಗಾದರೂ ಪ್ರತಿಯೊಂದರಲ್ಲೂ ಉದ್ಯೋಗ ಅವಕಾಶ ಜಾಸ್ತಿ ನಿರ್ಮಾಣಮಾಡಬೇಕು. ಹಾಗೆ ಮಾಡಿದರೆ ಸುಮಾರು 60 ಸಾವಿರ ಜನರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ಕೊಡಬಹುದು. ಸರಕಾರ ಇದನ್ನು ತೀವ್ರವಾಗಿ ಯೋಚನೆಮಾಡಬೇಕು. ಜೊತೆಗೆ ನಮ್ಮಲ್ಲಿರುವ 3 ಲಕ್ಷ ನಿರುದ್ಯೋಗಿಗಳಿಗೆ ಅಗತ್ಯವಾದ ಕೆಲಸ ಕೊಡಲೇಬೇಕು.

ಅವರಿಗೆ ಪ್ರತಿವರ್ಷ ಕನಿಷ್ಟ ಪಕ್ಷ ಸರ್ಕಾರ 20 ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕು. ಹೊಸ ಉದ್ಯಮಗಳನ್ನು ಪ್ರಾರಂಭ ಮಾಡಿದ್ದೇವೆ. ಸರ್ಕಾರ ಮಾಡಿರತಕ್ಕ ಉದ್ಯಮದಲ್ಲಿ, ಕೊನೆಯಲ್ಲಿ ಕಾರ್ಮಿಕರಿಗೋಸ್ಕರವಾಗಿ ಕೇವಲ 6 ಕೋಟಿ 13 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಿಂದ ಯಾವ ಉದ್ಯಮವನ್ನೂ ಸ್ಥಾಪನೆ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಒಂದು ತಾಲ್ಲೂಕಿನಲ್ಲಿ ಒಂದು ಸಾವಿರ ಜನಕ್ಕೆ ಹೊಸದಾಗಿ ಉದ್ಯೋಗವನ್ನು ಕೊಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು. ಕನಿಷ್ಟ ಪಕ್ಷ ಎರಡು ಕೋಟಿ ರೂಪಾಯಿಗಳನ್ನು ಒಂದು ತಾಲ್ಲೂಕಿನಲ್ಲಿ ಖರ್ಚು ಮಾಡಿದರೆ ಒಂದು ಸಾವಿರ ಜನಕ್ಕೆ ಉದ್ಯೋಗ ಕೊಡುವುದಕ್ಕೆ ಆಗುತ್ತದೆ. ಎಲ್ಲಾ ತಾಲ್ಲೂಕಿನಲ್ಲಿ ಮಾಡುವುದು ಬೇಡ, ಪ್ರತಿವರ್ಷ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು 10 ತಾಲ್ಲೂಕುಗಳನ್ನು ಚುನಾಯಿಸಿ, 10 ತಾಲ್ಲೂಕುಗಳಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಸಾವಿರ ಜನಕ್ಕೆ ಉದ್ಯೋಗ ನಿರ್ಮಾಣ ಮಾಡಿ ಉತ್ಪಾದನಾ ಕ್ಷೇತ್ರದಲ್ಲಿ ಇವರನ್ನು ತೊಡಗಿಸುವ ದೃಷ್ಟಿಯಿಂದ ಕಾರ್ಯಕ್ರಮ ಹಾಕಿಕೊಳ್ಳಬೇಕು. ಎರಡು ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ತೆಗೆದು ಇಟ್ಟುಕೊಂಡರೆ ಖಂಡಿತವಾಗಿ ನಾನು ಹೇಳಿದ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಸಾವಿರ ಜನಕ್ಕೆ ಉದ್ಯೋಗವನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಈ ಕಾರ್ಯಕ್ರಮವನ್ನು ತಾವು ತೀವ್ರವಾಗಿ ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಒಂದೊಂದು ವರ್ಷ ಒಂದು ತಾಲ್ಲೂಕಿನಲ್ಲಿ ಮಾಡಿದರೆ ಬೇರೆಯವರು ಸುಮ್ಮನೆ ಇರುತ್ತಾರೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಜಿಲ್ಲೆಯಲ್ಲಿ ಒಂದು ತಾಲ್ಲೂಕು ಎಂದು ಇಟ್ಟುಕೊಳ್ಳಿ, ಎಲ್ಲಾ ತಾಲ್ಲೂಕಿಗೂ ಬಂದೇ ಬರುತ್ತದೆ. ಮಾಡತಕ್ಕ ಕಾರ್ಯಕ್ರಮದಲ್ಲಿ ಒಂದೆರಡು ಇದ್ದರೆ ಯಾರಿಗೆ ಕೊಡುವುದು ಯಾರಿಗೆ ಬಿಡುವುದು ಎಂಬ ಪ್ರಶ್ನೆ ಬರುತ್ತದೆ. ಎಲ್ಲಿ ತಾಲ್ಲೂಕಿಗೂ ಇಂಥ ಅವಕಾಶ ಸಿಕ್ಕುತ್ತದೆ ಎನ್ನುವ ಖಾತ್ರಿ. ಆದರೆ ಆಗ ಯಾರೂ ಅನುಮಾನ ಮಾಡತಕ್ಕ ಸಂದರ್ಭ ಇರುವುದಿಲ್ಲ. ಇವತ್ತಲ್ಲ ನಾಳೆ ಬಂದೇ ಬರುತ್ತದೆ ಎಂದು ಸುಮ್ಮನಿರುತ್ತಾರೆ ಈ ಯೋಜನೆಯನ್ನು ತರುವುದಕ್ಕೆ ತೀವ್ರವಾಗಿ ಆಲೋಚನೆ ಮಾಡದೇ ಹೋದರೆ, ನಮ್ಮಲ್ಲಿರುವ ಜನಗಳಿಗೆ ಉದ್ಯೋಗ ಕೊಡುವುದಕ್ಕೆ ಆಗುವುದಿಲ್ಲ. ಉದ್ಯಮಕೋಸ್ಕರ ಕೇಂದ್ರ ಸರ್ಕಾರ ಪ್ರಮುಖವಾಗಿ ಒಂದು ಯೋಜನೆಯನ್ನು ಮಾಡುತ್ತಾ ಇದೆ ಎಂದು ಹೇಳಿದ್ದಾರೆ ಅವರು ಸುಮಾರು 100 ಕೋಟಿ ರೂಪಾಯಿಗಳನ್ನು ನಿರುದ್ಯೋಗ ನಿವಾರಣೆಗೆ ಉಪಯೋಗಿಸುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ನಮ್ಮ ರಾಜ್ಯಕ್ಕೆ ಅದರಲ್ಲಿ ಐದು ಅಥವಾ ಆರು ಕೋಟಿ ರೂಪಾಯಿಗಳು ಬರಬಹುದು ಎಂದು ಊಹಿಸಿದರೂ ಕೂಡ, ಇದರ ಜೊತೆಗೆ ನಾವು 15 ಕೋಟಿ ರೂಪಾಯಿಗಳನ್ನು ಸೇರಿಸಿಕೊಂಡರೆ, ಒಟ್ಟು 20 ಕೋಟಿ ರೂಪಾಯಿಗಳು ಒಂದು ವರ್ಷಕ್ಕೆ ನಮಗೆ ಸಿಕ್ಕುತ್ತದೆ, ಇದರಿಂದ ಕನಿಷ್ಟ ಪಕ್ಷ ಒಂದು ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ, ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಅರ್ಥ

ಮಂತ್ರಿಗಳು ಉದ್ಯಮದ ಬಗ್ಗೆ ಪ್ರಸ್ತಾಪ ಮಾಡುತ್ತಾ ಒಂದು ಮಾತನ್ನು ಹೇಳಿದರು. ನಂದಿಹಳ್ಳಿಯಲ್ಲಿ ಪ್ರಾರಂಭವಾಗತಕ್ಕ ಸ್ನಾತಕೋತ್ತರ ಕೇಂದ್ರದ ಬಗ್ಗೆ ಅವರು ಉಲ್ಲೇಖ ಮಾಡಿದ್ದಾರೆ ಹೊಸಪೇಟೆಯಲ್ಲಿ ಪ್ರಾರಂಭವಾಗತಕ್ಕ ಉಕ್ಕಿನ ಕಾರ್ಖಾನೆಗೆ ಕುಮಾರಸ್ವಾಮಿ ದೇವಸ್ಥಾನದ ಹತ್ತಿರ ನಂದಿಹಳ್ಳಿಯಲ್ಲಿ ಸ್ನಾತಕೋತ್ತರ ಕೇಂದ್ರದ ಸ್ಥಾಪನೆಯ ಬಗ್ಗೆ ಉಲ್ಲೇಖಮಾಡಿದ್ದಾರೆ. ಅದಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಹೊಸಪೇಟೆಗೂ ಮತ್ತು ನಂದಿಹಳ್ಳಿಗೂ ಸುಮಾರು 20 ಮೈಲಿ ದೂರವಿದೆ. ಈ ಕೇಂದ್ರದ ಸ್ಥಾಪನೆಗೆ ಈಗಾಗಲೇ ಆರು ಸಾವಿರ ಎಕರೆ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ. ಅಲ್ಲಿ ಇವರು ಇದನ್ನು ಪ್ರಾರಂಭ ಮಾಡುತ್ತಾ ಒಂದು ಮಾತು ಹೇಳಿದರು ಸೊಂಡೂರಿನ ಅಭಿವೃದ್ಧಿಯನ್ನು ಕುಂಠಿತಗೊಳಿಸುವುದಕ್ಕೆ ಏನೋ ಮಾಡುತ್ತಾರೆ ಎನ್ನುವ ಅಭಿಪ್ರಾಯವನ್ನು ಸೂಚಿಸಿದರು. ನಾವು ಸೊಂಡೂರಿನ ಅಭಿವೃದ್ಧಿಯನ್ನು ಕುಂಠಿತಗೊಳಿಸುವುದಕ್ಕೆ ಸ್ವಲ್ಪವೂ ಚಿಂತೆ ಮಾಡುವುದಿಲ್ಲ. ಎರಡು ಕೋಟಿ ರೂಪಾಯಿಯ ಕಾರ್ಖಾನೆಯನ್ನು ಮೊದಲು ಸೊಂಡೂರಿಗೆ ಹಾಕಿ ನಾವು ಬೇಡ ಎಂದು ಹೇಳುವುದಿಲ್ಲ ಆದರೆ ನಂದಿಹಳ್ಳಿಯಲ್ಲಿ ಇರುವ ಇನಾಂ ಜಮೀನು ರೈತರಿಗೆ ಸಾಗುವಳಿಯಾಗತಕ್ಕ ಯೋಗ್ಯ ಜಮೀನು. ಅಲ್ಲಿ ಕೃಷಿಕಾರ್ಮಿಕರು ಇದ್ದಾರೆ, ಅಂಥ ಜನರಿಗೆ ಈ ಭೂಮಿಯನ್ನು ಕೊಡಬೇಕೇಂದು ಒತ್ತಾಯ ಮಾಡತಕ್ಕ ಕಾಲದಲ್ಲಿ, ಕಣಿವೆಯಲ್ಲಿಂತಕ್ಕ ಪ್ರದೇಶವನ್ನು ವ್ಯವಸಾಯಕ್ಕೆ ಯೋಗ್ಯವಾದ ಪ್ರದೇಶವನ್ನು ಈ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿಗೆ ಕೊಟ್ಟರೆ ಏನು ಪ್ರಯೋಜನ ಯಾವ ಜಮೀನು ಉತ್ಪಾದನೆಗೆ ಯೋಗ್ಯವಾಗಿದೆಯೋ, ಅದನ್ನು ಉತ್ಪಾದನೆಗೆ ಬಿಡುವುದಕ್ಕೆ ಬದಲಾಗಿ ಅನುತ್ಪಾದನ ಕೇಂದ್ರಕ್ಕೆ ಕೊಡುತ್ತೇವೆ. ಎಂದರೆ ಎಷ್ಟರಮಟ್ಟಿಗೆ ಉತ್ಪಾದನೆಗೆ ಸಹಾಯ ಮಾಡುತ್ತಾರೆ ಎಂದು ಯೋಚನೆ ಮಾಡಿ. ಅರ್ಥಮಂತ್ರಿಗಳು ದಯವಿಟ್ಟು ನಂದಿಹಳ್ಳಿಯಲ್ಲಿರತಕ್ಕ ಸಾಗುವಳಿಗೆ ಯೋಗ್ಯವಾದ ಜಮೀನನ್ನು ಕೃಷಿಕಾರ್ಮಿಕರಿಂದ ಕಿತ್ತುಕೊಳ್ಳುವುದಕ್ಕಿಂತ ಸಾಗುವಳಿಗೆ ಯೋಗ್ಯವಲ್ಲದ ಭೂಮಿಯಲ್ಲಿ ಇದನ್ನು ಸ್ಥಾಪನೆ ಮಾಡಬೇಕು. ಮತ್ತು ನಂದಿಹಳ್ಳಿಯ ಭೂಮಿಯನ್ನು ಕೃಷಿ ಕಾರ್ಮಿಕರಿಗೆ ಕೊಡುವುದಕ್ಕೆ ಇವರು ಮನಸ್ಸು ಮಾಡಬೇಕು ಎಂದು ನಾನಾದರೂ ಕೇಳಿಕೊಳ್ಳುತ್ತೇನೆ.

ಇನ್ನು ವೈದ್ಯಕೀಯದ ಬಗ್ಗೆ ಒಂದು ಮಾತು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಹೆಚ್ಚಿನ ಬೆಡ್ಡುಗಳು ಇರತಕ್ಕ ಆಸ್ಪತ್ರೆಗಳು ಹೆಚ್ಚಾಗಿ ನಗರ ಪ್ರದೇಶಗಳಲ್ಲಿವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಆಸ್ಪತ್ರೆಗಳು ಎಂದರೆ ಹೆಲ್ತ್ ಯೂನಿಟ್‌ಗಳು. ಇಲ್ಲಿ ಏನಾಗಿದೆ ಎಂದರೆ ಬಡ ರೋಗಿಗಳು ಬಂದರೆ ಇರುವುದಕ್ಕೆ ಯಾವ ವ್ಯವಸ್ಥೆಯೂ ಇಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 2275 ಹೆಲ್ತ್ ಯೂನಿಟ್‌ಗಳು ಇವೆ. ಪ್ರತಿಯೊಂದು ಹೆಲ್ತ್ ಯೂನಿಟ್‌ಗಳಿಗೂ ಐದು ಬೆಡ್ಡುಗಳ ಸೌಕರ್ಯವನ್ನು ಒದಗಿಸಿಕೊಟ್ಟರೆ ಗ್ರಾಮಾಂತರ ಪ್ರದೇಶದ ಜನರು ಪೇಟೆಗೆ ಬಂದು ದುಡ್ಡು ಖರ್ಚುಮಾಡಿ ವೈದ್ಯಕೀಯ ಸೌಲಭ್ಯವನ್ನು ಪಡೆಯುವುದನ್ನು ತಪ್ಪಿಸುವುದಕ್ಕೆ ಅವಕಾಶವಾಗುತ್ತದೆ. ಸುಮಾರು 25—30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಕನಿಷ್ಠ 1000—1500 ಹೆಲ್ತ್ ಯೂನಿಟ್‌ಗಳಿಗೆ ಐದು ಬೆಡ್‌ಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಆಸ್ಪತ್ರೆಯಲ್ಲಿ ಒಂದು ದಿವಸ ಉಳಿದು ಚಿಕಿತ್ಸೆ ಪಡೆಯುತ್ತೇನೆ. ಎನ್ನುವ ಸೌಕರ್ಯ ಇಲ್ಲದೆಹೋದರೆ ಅವ ಎಲ್ಲಿ ಇರಬೇಕು ? ಎನ್ನುವ ಪ್ರಶ್ನೆ ಬರುತ್ತದೆ. ಈ ದೃಷ್ಟಿಯಿಂದ ಪ್ರತಿಯೊಂದು ಹೆಲ್ತ್ ಯೂನಿಟ್‌ಗಳಲ್ಲಿಯೂ ಐದು ಬೆಡ್ಡುಗಳ ಸೌಕರ್ಯವನ್ನು ಒದಗಿಸುವುದಕ್ಕೆ ಅವಕಾಶಮಾಡಿಕೊಡಬೇಕು ಎಂದು ಅರ್ಥಮಂತ್ರಿಗಳಲ್ಲಿ ಒತ್ತಾಯಮಾಡುತ್ತೇನೆ.

ಸಮಾಜಕಲ್ಯಾಣದ ಅಂಗವಾಗಿ, ವಿದ್ಯಾರ್ಥಿನಿಲಯಗಳಿಗೆ ಕೊಡತಕ್ಕಂಥ ಹಣ ಸಾಲುವುದಿಲ್ಲ. ತಾಲ್ಲೂಕು ಮಟ್ಟದ ವಿದ್ಯಾರ್ಥಿ ನಿಲಯಗಳಿಗೆ ಬರತಕ್ಕ ಹಣವನ್ನು ಈ ಸಾರಿ ಬಡ್ಜೆಟ್ಟಿನಲ್ಲಿ ತೆಗೆದು ಇಟ್ಟಿಲ್ಲ, ಈ ಯೋಜನೆಯನ್ನು ಕೈ ಬಿಟ್ಟಿದ್ದಾರೆ ಎನ್ನುವ ಸಂಶಯ ಬರುತ್ತದೆ. ಸಾರ್ವಜನಿಕ ವಿದ್ಯಾರ್ಥಿನಿಲಯಗಳು ಇನ್ನೂ ಹೆಚ್ಚಾಗಿ ಆಗತಕ್ಕಂಥಾದ್ದು ಇದೆ,

ಅಧ್ಯಕ್ಷರು.—ಮಾನ್ಯ ಸದಸ್ಯರು ಎಜುಕೇಷನ್ ಡಿಮ್ಯಾಂಡ್ ಬಂದಾಗ ಈ ವಿಷಯವನ್ನು ಪ್ರಸ್ತಾಪಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಆರನೆಯ ಆರ್ಥಿಕ ಆಯೋಗದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕೇಂದ್ರ ಸರ್ಕಾರವನ್ನು ನಾವು ನಿರೀಕ್ಷಿಸಿ ನಮ್ಮ ಆಯವ್ಯಯವನ್ನು ರೂಪಿಸಿಕೊಳ್ಳತಕ್ಕ ಸಂದರ್ಭ ಬಂದಿದೆ. ಜೊತೆಗೆ ಹಣಕಾಸಿನ ಪ್ರಶ್ನೆಯನ್ನು ನಾವು ಅತೀವವಾಗಿ ಚರ್ಚೆ ಮಾಡುವುದು. ಇದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದನ್ನು ಗಮನದಲ್ಲಿಟ್ಟುಕೊಂಡು ಹಣಕಾಸಿನ ಆಯೋಗದವರು ಬಂದಾಗ ಮಾತ್ರ ಆಲೋಚನೆ ಮಾಡುತ್ತೇವೆ, ಅನೇಕ ಸಂದರ್ಭಗಳಲ್ಲಿ ನಾವು ಇದರ ಬಗ್ಗೆ ಚರ್ಚೆ ಮಾಡುವುದನ್ನು ಮರೆಯುತ್ತೇವೆ. ಕೇಂದ್ರ ಸರ್ಕಾರ ನಮಗೆ

(ಶ್ರೀ ಕಾಗೋಡು ತಿಮ್ಮಪ್ಪ)

ಹಣವನ್ನು ಯಾವ ರೀತಿಯಲ್ಲಿ ವಿತರಣೆ ಮಾಡುತ್ತದೆ ಎನ್ನುವುದರ ಬಗ್ಗೆ ನಾವು ಸ್ಪಷ್ಟವಾಗಿ ಚಿಂತನೆ ಮಾಡತಕ್ಕ ಅಭ್ಯಾಸ ಮಾಡತಕ್ಕ ಪ್ರಸಂಗ ಇವತ್ತು ಬಂದಿದೆ. ತಾವು ಈಗ ಏನು 30 ಕೋಟಿ ರೂಪಾಯಿಗಳ ಖೋತ ಬಡ್ಜೆಟ್ ಎಂದು ಹೇಳಿದ್ದಿರಿ ಇದು 54 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಣೆ ಮಾಡಿ. ಕೇಂದ್ರ ಸರ್ಕಾರದಿಂದ ಅಷ್ಟು ಹಣ ಬಾರದೆ ಹೋದರೆ, ನಮ್ಮ ಕೊರತೆ ಇನ್ನೂ ಜಾಸ್ತಿಯಾಗುತ್ತದೆ ಎನ್ನುವುದು ಇದರಿಂದ ಸಾಬೀತು ಆಗುತ್ತದೆ. ಹೋದ ಆಯ ವ್ಯಯ ಪತ್ರದಲ್ಲಿ ಮೂರು ಕೋಟಿ ರೂಪಾಯಿಗಳನ್ನು ಖೋತ ತೋರಿಸಿ ನಂತರ ಕೇಂದ್ರ ಸರ್ಕಾರ ದಿಂದ ಹಣ ಬಾರದೆ ಇದ್ದುದರಿಂದ 27 ಕೋಟಿ ರೂಪಾಯಿಗೆ ಖೋತ ಹೋಯಿತು. ಕೇಂದ್ರ ಸರ್ಕಾರದವರು ಬರಗಾಲ ಪರಿಹಾರಕ್ಕಾಗಿ 25 ಕೋಟಿ ರೂಪಾಯಿಗಳನ್ನು ಇದುವರೆಗೂ ಕೊಟ್ಟಿದ್ದಾರೆ. 16 ಕೋಟಿ ರೂಪಾಯಿ ಮಾತ್ರ ಇನ್ನು ಉಳಿದಿರುವುದು, ಇದು ಕೇಂದ್ರ ಸರ್ಕಾರ ದಿಂದ ಬಾರದೆ ಹೋದರೆ ಪ್ರಸಕ್ತ ಸಾಲಿನಲ್ಲಿ ಹಣದ ಕೊರತೆ ಎಷ್ಟು ಎನ್ನುವ ನಿಜವಾದ ಸಂಗತಿಯನ್ನು ಹೇಳಬೇಕು ಇಲ್ಲದೆ ಹೋದರೆ, ಈ ಖೋತವನ್ನು ಕಡಿಮೆ ಮಾಡುವುದಕ್ಕಾಗಲೀ ಭರಿಸುವುದ ಕ್ಕಾಗಲೀ ಬೇರೆ ವಿಧಿಯೇ ಇಲ್ಲ. ಇವತ್ತು, ಕೇಂದ್ರ ಸರ್ಕಾರದಿಂದ 54 ಕೋಟಿ ರೂಪಾಯಿಗಳು ಬಾರದೆ ಹೋದರೆ ನಿಜವಾಗಿ, ಮುಂದಿನ 1973-74ನೇ ಸಾಲಿನಲ್ಲಿ ಬರತಕ್ಕ ಖೋತ ಎಷ್ಟು ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—ಏತಕ್ಕೆ ಬರುವುದಿಲ್ಲ ಎಂದು ಹೇಳುತ್ತೀರಿ?

ಶ್ರೀ. ಕಾಗೋಡು ತಿಮ್ಮಪ್ಪ.—ಇವೊತ್ತು 25 ಕೋಟಿ ರೂಪಾಯಿ ನಿರೀಕ್ಷಣೆ ಮಾಡಿದ್ದು ತರತಕ್ಕದ್ದು 16 ಕೋಟಿ ರೂಪಾಯಿ.

ಶ್ರೀ ಡಿ. ದೇವರಾಜ್ ಅರಸ್.—ಇನ್ನು ಬರಬೇಕಾದುದು ಟೈಮ್ ಇದೆ. ವರ್ಷದ ಕೊನೆ ಯಲ್ಲಿ ಎಷ್ಟು ನಿಲ್ಲುತ್ತದೆ ಆಲೋಚನೆ ಮಾಡಿ ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಖರ್ಚು ಮಾಡಿದಷ್ಟು ಬರುತ್ತದೆ. ಖೋತಾ ಅಷ್ಟಕ್ಕೆ ನಿಲ್ಲುವುದಿಲ್ಲ. ಜಾಸ್ತಿ ಹೋಗುತ್ತದೆ ಎನ್ನುವ ಶಂಕೆಯನ್ನು ವ್ಯಕ್ತಪಡಿಸಬೇಕಾಗಿದೆ. ಈ ರಾಜ್ಯದ ಜನರಿಗೆ ಕನಿಷ್ಟ ಪ್ರಮಾಣದ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ನಷ್ಟ ಆಗಬಹುದು. ಇಂಗ್ಲೆಂಡಿನಲ್ಲಿ ಅಭ್ಯಾಸ ಮಾಡಿರತಕ್ಕ ಶ್ರೀ ಮಾನ್ ಘೋರ್ಪಡೆಯವರು ಪಾಶ್ಚಿಮಾತ್ಯ ಸಮಾಜವಾದಕ್ಕೆ ಮಾರುಹೋಗದೆ ಹೆಚ್ಚಿಗೆ ಭಾರತೀಯ ಸಮಾಜವಾದಗಳನ್ನು ಅನುಸರಿಸಿ ಜನರಿಗೆ ಬೇಕಾದ ಕನಿಷ್ಟ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಒಂದು ವರ್ಷದ ಕಾರ್ಯಕ್ರಮಗಳಲ್ಲಿ ಕರ್ತವ್ಯನಿಷ್ಠರಾಗಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

3-00 P.M.

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷಣೆಯವರೇ, 1973-74 ನೇ ಇಸವಿ ಬಗ್ಗೆ ಅರ್ಥ ಸಚಿವರು ಈಗ ಸೂಚಿಸಿರುವಂತಹ ಅಂದಾಜುಪಟ್ಟಿಗೆ ಬೆಂಬಲ ನೀಡಲು ನಾನು ನಿಂತಿದ್ದೇನೆ. ಈ ಸಮಯದಲ್ಲಿ ವಿರೋಧಪಕ್ಷದ ಸದಸ್ಯರು ಕೆಲವು ಟೀಕೆಗಳನ್ನು ಮಾಡಿರುವುದು ಸರಿಯಲ್ಲವೆಂದು ನಾನು ಹೇಳಬಯಸುತ್ತೇನೆ. ನಮ್ಮ ಪಕ್ಷದವರು ಚುನಾವಣೆ ಕಾಲಕ್ಕೆ ಕೊಟ್ಟ ಆಶ್ವಾಸನೆಗಳನ್ನು ಸಂಪೂರ್ಣವಾಗಿ ಈ ಸರ್ಕಾರ ಪೂರ್ಣಗೊಳಿಸುವದೃಷ್ಟಿಯಿಂದ ಪ್ರಯತ್ನ ನಡೆಸಿದೆ. ಮೊದಲನೆಯದು ನಮ್ಮ ಪಕ್ಷದವರು ಲ್ಯಾಂಡ್ ಟು ದಿ ಟಿಲ್ಲರ್. ಈ ವಿಷಯವಾಗಿ ಉಳುವವನು ಮಾಲೀಕನಾಗಬೇಕೆಂದು ಮಾಡಬೇಕೆಂಬ ಬಗ್ಗೆ ಲ್ಯಾಂಡ್ ರೀಫಾರಮ್ಸ್ ಬಿಲ್ಲು ಬಂದು ಸಿಲೆಕ್ಟ್ ಕಮಿಟಿ ಕಡಿಗೆ ಹೋಗಿದೆ. ಸ್ವಲ್ಪ ದಿವಸಗಳಲ್ಲೇ ಬಿಲ್ಲು ಸಂಬಳಿ ಮುಂದೆ ಬಂದು ಉಳುವವನೇ ಮಾಲೀಕ ಆಗುವಂತೆ ಮಾಡುತ್ತಾರೆಂದು ಸಂಪೂರ್ಣ ಭರವಸೆ ಉಳ್ಳವನಾಗಿದ್ದೇನೆ. ಈ ಬಗೆ ಈ ಸದನದಲ್ಲಿ ಯಾವುದು ಭಿನ್ನಾಭಿಪ್ರಾಯವಿಲ್ಲ. ಅನಂತರ ಎರಡನೆಯದು ಭರವಸೆ ಕೊಟ್ಟಿದ್ದು ಎಂಪ್ಲಾಯ್‌ಮೆಂಟ್ ಕೊಡಬೇಕು. ಉದ್ಯೋಗಾವಕಾಶ ಒದಗಿಸಿ ಕೊಡುವ ಭರವಸೆ ಗಳು ನಮ್ಮ ಪಕ್ಷದವರು ಕೊಟ್ಟಿದ್ದಾರೆ. ನಾವೆಲ್ಲರೂ ಕ್ಷಾಮದಲ್ಲಿ ಸಿಕ್ಕಿದರೂ ಕೂಡ ಯಾವತ್ತು ಕಾರ್ಮಿಕರಿಗೆ ನಮ್ಮ ಕ್ಷಾಮ ಪೀಡಿತ ಪ್ರದೇಶಗಳಲ್ಲಿ 10 ಲಕ್ಷ 76 ಸಾವಿರ ಜನಗಳಿಗೆ ಉದ್ಯೋಗಾವ ಕಾಶಗಳನ್ನು ನಮ್ಮ ಸರ್ಕಾರದವರು ಮಾಡಿಕೊಟ್ಟಿದ್ದಾರೆ. ಈ ಬಗ್ಗೆ 45 ಕೋಟಿ 27 ಲಕ್ಷ ರೂಪಾಯಿ ಹೆಚ್ಚು ತಗಲುವಂತಾದ್ದು ಈಗ ಅಂದಾಜು ಮಾಡಲಾಗಿದೆ. ಅದೇ ಪ್ರಕಾರ ವಿದ್ಯಾ ವಂತ ನಿರುದ್ಯೋಗಿಗಳಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಕೊಡುವುದಕ್ಕೋಸ್ಕರ ಸರ್ಕಾರ ಪ್ರಯತ್ನ ಮಾಡಲು ಹತ್ತಿದೆ. ಆ ಬಗ್ಗೆ ನಮ್ಮ ಅರ್ಥ ಮಂತ್ರಿಗಳು ತಮ್ಮ ಲಿಖಿತ

ಭಾಷಣದಲ್ಲಿ 17ನೇ ಪೇಜಿನಲ್ಲಿ 7ನೇ ಪ್ಯಾರಾದಲ್ಲಿ ಸ್ಪಷ್ಟವಾಗಿ ಆ ವಿಷಯಗಳನ್ನು ಕಾಣಿಸಿದ್ದಾರೆ. "The problem of creating employment opportunities particularly for the educated unemployed is receiving special attention. The Government of India has provided Rs. 100 crores for this programme in their budget for 1973-74 for the country. The State Government is also preparing schemes for generating employment opportunities for the educated un-employed. Every effort will be made to secure the maximum Central assistance towards this programme" ಎಂದು ಹೇಳಿದ್ದಾರೆ. ಈ ಪ್ರಕಾರವಾಗಿ ನಮ್ಮ ಪಕ್ಷದವರು ಚುನಾವಣೆ ಕಾಲಕ್ಕೆ ಕೊಟ್ಟ ವಚನಗಳನ್ನು ಸಂಪೂರ್ಣವಾಗಿ ಈಗ ಪಾಲಿಸುತ್ತಾ ಇದ್ದಾರೆ. ನಂತರ ಬಡತನ ನಿವಾರಣೆ ಬಗ್ಗೆ ಸರ್ಕಾರದವರು ಬೇರೆ ಬೇರೇ ಯೋಜನೆಗಳನ್ನು ಮಾಡಲಿಕ್ಕೆ ಹತ್ತಿದ್ದಾರೆ. ಸುಮಾರು 2 ಲಕ್ಷ ನಿವೇಶನಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ವರ್ಷ 20 ಸಾವಿರ ಮನೆಗಳನ್ನು ಬಡ ಜನರಿಗೆ ಕೊಡುವುದಕ್ಕೋಸ್ಕರ 5 ಕೋಟಿ ರೂಪಾಯಿ ವೆಚ್ಚದ ಅಂದಾಜು ಮಾಡಲಾಗಿದೆ. ಈ ಪ್ರಕಾರವಾಗಿ ನಮ್ಮ ಸರ್ಕಾರದವರು ಎಲ್ಲರಿಗೂ ಕೊಡಲು ವೆಚ್ಚಗಳನ್ನು ಹಂತಹಂತವಾಗಿ ಪೂರೈಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಜನಗಳ ವಿಶ್ವಾಸ ನಮ್ಮ ಪ್ರಧಾನಿ ಮೇಲೆ ಎಷ್ಟು ಇಟ್ಟಿದ್ದಾರೆ ಎನ್ನುವ ಬಗ್ಗೆ ನೋಡಿದರೆ ಆಲಮಟ್ಟಿಗೆ ಬಂದ ಸಮಯದಲ್ಲಿ 30 ಸಾವಿರ ಜನಗಳು ಬಿಸಿಲಿನಲ್ಲಿ ಕಾಯುತ್ತಾ ಕೂತಿದ್ದರು. ಇಂದಿರಾ ಚಲೇಜಾವ್ ಎನ್ನುವ ಘೋಷಣೆ ಕೆಲವರು ಕೂಗಿದಾಗ ಇಂದಿರಾಗಾಂಧಿಯವರನ್ನು ಬರಮಾಡಿಕೊಳ್ಳಲಿಕ್ಕೆ ಅಲ್ಲಿ ಕೂತಿದ್ದಂತ 30 ಸಾವಿರ ಜನರ ಮನಸ್ಸಿನಲ್ಲಿ ಮೆಚ್ಚಿದ್ದು ಕಂಡುಬಂತು. ನೂರಾರು ಸ್ವಯಂಸೇವಕರು ಕೂಗಿದರೂ ಚಲೇಜಾವ್ ಘೋಷಣೆಯನ್ನು ಯಾರೂ ಕೇಳಲಿಲ್ಲ. ಅದೇ ಪ್ರಕಾರ ಇವೊತ್ತಿನ ದಿವಸ ನಮ್ಮ ಇಂದಿರಾ ಗಾಂಧಿಯವರ ಪಕ್ಷದವರ ಪ್ರತಿಷ್ಠೆ ಯಾವರೀತಿಯಲ್ಲಿಯೂ ಕಡಿಮೆಯಾಗಿಲ್ಲ, ಈ ಸಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ನಮ್ಮ ಸರ್ಕಾರಕ್ಕೆ ಕೊಡಬಯಸುತ್ತೇನೆ. ಸರ್ಕಾರದವರು ಕೂಲಿಕಾರರಿಗೆ ಕೂಲಿಯನ್ನು ಒದಗಿಸಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿ ಇರುವಂಥ ನೇಕಾರರಿಗೆ ಸಾಕಷ್ಟು ಹಣ ಕೊಡಲಿಲ್ಲವೆಂದು ನಾನು ವಿಶೇಷವಾಗಿ ಈ ಸಮಯದಲ್ಲಿ ಹೇಳಬಯಸುತ್ತೇನೆ. ಬಿಜಾಪುರದಲ್ಲಿ 32 ಸಾವಿರ ಮಗ್ಗಗಳು ಇದ್ದು 1 ಲಕ್ಷದ 60 ಸಾವಿರ ನೇಕಾರರು ಈ ಉದ್ದಿಮೆ ಮೇಲೆ ಅವಲಂಬನೆ ಮಾಡುತ್ತಾ ಇದ್ದಾರೆ. ಇದೇ ಪ್ರಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ 17 ಸಾವಿರ ಮಗ್ಗಗಳು ಇದ್ದು, 85 ಸಾವಿರ ನೇಕಾರರು ಈ ಉದ್ದಿಮೆ ಮೇಲೆ ತಮ್ಮ ಬಾಳುವೆಯನ್ನು ಸಾಗಿಸುತ್ತಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ 25 ಸಾವಿರ ಮಗ್ಗಗಳು ಇದ್ದು 12,500 ನೇಕಾರರು ಈ ಉದ್ದಿಮೆ ಮೇಲೆ ಅವಲಂಬನೆ ಮಾಡುತ್ತಾ ಇದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಪ್ರತಿಯೊಂದು ಮಗ್ಗಕ್ಕೆ 15 ಕೆ. ಜಿ. ನೂಲಿನ ಪ್ರಕಾರವಾಗಿ 4 ಲಕ್ಷ 80 ಸಾವಿರ ಕೆ. ಜಿ. ಪ್ರತಿ ತಿಂಗಳು ನೂಲು ಬೇಕಾಗುತ್ತದೆ. ಸದ್ಯಕ್ಕೆ ಬಿಜಾಪುರ ಜಿಲ್ಲೆಯಲ್ಲಿ ಕೇವಲ 40 ಸಾವಿರ ಕೆ. ಜಿ. ನೂಲನ್ನು ಸರ್ಕಾರಿ ಗೋಡೌನ್ ಮುಖಾಂತರ ವಿತರಣೆ ಮಾಡುತ್ತಿದ್ದಾರೆ. ನೂಲು ಕೇವಲ ಒಂದು ದಿವಸಕ್ಕೆ ಕೂಡ ಸಾಕಾಗುವುದಿಲ್ಲ. ಇದೇ ಪ್ರಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ 2 ಲಕ್ಷ 50 ಸಾವಿರ ಕೆ. ಜಿ. ನೂಲು ಪ್ರತಿ ತಿಂಗಳು ನೇಕಾರರಿಗೆ ಬೇಕಾಗುತ್ತದೆ. ಈಗ ಕೇವಲ 22 ಸಾವಿರ ಕೆ. ಜಿ. ಸರ್ಕಾರದ ಗೋಡೌನ್ ಮುಖಾಂತರ ವಿತರಣೆಯಾಗುತ್ತದೆ. ಬೀದರ್ ಜಿಲ್ಲೆಯಲ್ಲಿ ಒಂದು ಲಕ್ಷ ಕೆ. ಜಿ. ನೂಲು ಬೇಕಾಗುತ್ತದೆ. ಅವರೆ ಕೇವಲ 66 ಸಾವಿರ ಕೆ. ಜಿ. ನೂಲನ್ನು ಕೊಡುವ ವ್ಯವಸ್ಥೆ ಸರ್ಕಾರದವರು ಮಾಡಿದ್ದಾರೆ. ಈ ಪ್ರಕಾರವಾಗಿ ನೂಲಿನ ಕೊರತೆ ಏನು ಇದೆ ಇದರಿಂದ ಜನಗಳಿಗೆ ನೇಕಾರರು ತಯಾರು ಮಾಡಿದ ಸೀರೆಗಳಿಗೆ ಎಲ್ಲೂ ಗಿರಾಕಿಗಳೂ ಇಲ್ಲ. ಬಿಜಾಪುರ ಜಿಲ್ಲೆಯಲ್ಲಿ ಒಂದು ಲಕ್ಷದ 66ಸಾವಿರ ನೇಕಾರರು ನಿರುದ್ಯೋಗಿಗಳಾಗಿ ಬಹಳ ಕಷ್ಟಕ್ಕೆ ಈಡಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಅವರಿಗೆ ಬೇಕಾಗುವಂತ ಯೋಜನೆಯಂದ ಬಿಸಿನೆಸ್ ನಡೆಯಲಿಕ್ಕೆ ಉದ್ಯಮವನ್ನು ಸರ್ಕಾರದವರು ಕಲ್ಪಿಸಿ ಕೊಡುವುದು ಅತ್ಯವಶ್ಯವಿದೆ. ನೇಕಾರರನ್ನು ಬೇರೆ ಉದ್ಯಮಗಳ ಮೂಲಕ ಅವರಿಗೆ ಮುಂದಿನ ಕೆಲಸ ಸರ್ಕಾರವೇ ಪರಿಹರಿಸಬೇಕು. ಬನಹಟ್ಟಿ ನೇಕಾರರಿಗೆ ಗೋಡೆಕಟ್ಟುವುದು ಮಣ್ಣು ತೆಗೆಯುವ ಕೆಲಸ ಅವರ ಕೈಯಿಂದ ಆಗಲ್ಲಿಲ್ಲ. ಅವರ ಕೈಗಳ ಮೇಲೆ ಗುಳ್ಳೆಗಳು ಎದ್ದು ಕೆಲಸಮಾಡುವುದಕ್ಕೆ ಆಗಲಿಲ್ಲ ಅದಕ್ಕೋಸ್ಕರ ಅವರಿಗೆ ಬನಹಟ್ಟಿಯಲ್ಲಿ ಅನಾಥರ ರೂಮ್ ಮಾಡಿದ್ದಾರೆ. ರಾಜಾಸ್ಥಾನದಿಂದ ಬಂದಂಥ ಶ್ರೀಮಂತರು ಅನ್ನದ ಛತ್ರವನ್ನು ಸ್ಥಳದಲ್ಲೇ ಮಾಡಿದ್ದಾರೆ.

ಮೂರು ಸಾವಿರ ಮಠದ ಸ್ವಾಮಿಗಳು ಪಾದಯಾತ್ರೆ ಮಾಡಿ ಎರಡು ಲಕ್ಷ ರೂಪಾಯಿ ಮತ್ತು 200 ಚೀಲ ಧಾನ್ಯವನ್ನು ವಿತರಣೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದೇ ಪ್ರಕಾರ

(ಶ್ರೀ ಪಿ. ಎಂ. ಬಂಗಿ)

ಪೇಜಾವರ ಮಠದ ಸ್ವಾಮಿಗಳು ಪಾದಯಾತ್ರೆ ಮಾಡಿ ಅವರೂ ಸಾಕಷ್ಟು ಈ ಕ್ಷಾಮ ಪೀಡಿತ ಪ್ರದೇಶದ ಜನಗಳಿಗೆ ಸಹಾಯ ಮಾಡಲಿಕ್ಕೆ ಹೊರಟಿದ್ದಾರೆ. ಈ ಪ್ರಸಂಗದಲ್ಲಿ ನಮ್ಮ ಸಂಸ್ಥಾ ಪಕ್ಷದವರು ಎಲ್ಲ ದೃಷ್ಟಿಯಿಂದಲೂ ಸರ್ಕಾರದ ಜೊತೆಗೆ ಸಹಕಾರ ಮಾಡಿ ಈ ಬಡ ಜನಗಳಿಗೆ ಸಹಾಯ ಮಾಡುವುದನ್ನು ಬಿಟ್ಟು ರಾಷ್ಟ್ರದ ಪುಡಾರಿಗಳಾದ ಶ್ರೀ ನಿಜಲಿಂಗಪ್ಪನವರನ್ನು ಕರೆದು ಕೊಂಡು ಬಿಜಾಪುರ ಜಿಲ್ಲೆಯಲ್ಲಿ ಅನ್ನ ಸತ್ಯಾಗ್ರಹದ ತಮಾಷೆ ಮಾಡಲಿಕ್ಕೆ ಹೊರಟಿದ್ದಾರೆ. ಇದರಿಂದ ಜನಗಳಿಗೆ ಸಾಕಷ್ಟು ಉಪಯೋಗವಾಗುವುದಿಲ್ಲ ಮತ್ತು ಜನ ಹೆಚ್ಚು ತೊಂದರೆಯಲ್ಲಿ ಬೀಳಲಿಕ್ಕೆ ಹತ್ತಿದ್ದಾರೆ. ಇವರೂ ಸಹ ಪಾದಯಾತ್ರೆ ಮಾಡಿ ಹಣ ಮತ್ತು ದವಸ ಸಂಗ್ರಹಣೆ ಮಾಡಿ ಜನಗಳಿಗೆ ಸಹಾಯ ಮಾಡಿದರೆ ಹೆಚ್ಚು ಒಳಿತು.

ಇದೇ ತಿಂಗಳು 10ನೇ ತಾರೀಖು ಪ್ರಧಾನಿಯವರು ಆಲಮಟ್ಟಿಗೆ ಬಂದಾಗ ಸಂಸ್ಥಾ ಕಾಂಗ್ರೆಸ್ ಸದಸ್ಯರಾದ ಶ್ರೀ ಜಿ. ಎನ್. ಪಾಟೀಲ್ ಅವರು ಮತ್ತು ಪಕ್ಷದ ಪರವಾಗಿ ನಾನು ಮತ್ತು ನಮ್ಮ ಪಾರ್ಲಿಮೆಂಟ್ ಸದಸ್ಯರು, ಮುಖ್ಯ ಮಂತ್ರಿಗಳು ಕೂಡಿ ಯಾವತ್ತೂ ವಿಷಯಗಳನ್ನು ಅವರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದೆವು. ಆಲಮಟ್ಟಿ, ನಾರಾಯಣಪುರ ಬಂಡಾರಗಳನ್ನು ರಾಷ್ಟ್ರೀಯ ಯೋಜನೆಗಳನ್ನಾಗಿ ಮಾಡಬೇಕೆಂದೂ, ಅದೇ ಪ್ರಕಾರವಾಗಿ ಲಿಂಕ್ ರೈಲ್ವೆ ಮೀರಜ್-ಹುಬ್ಬಳ್ಳಿ ರಾಯಬಾಗ್-ರಾಯಚೂರು ರೈಲ್ವೆ ಕಾಮಗಾರಿಗಳನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳಬೇಕೆಂದು ನಾವು ಮನವಿ ಮಾಡಿಕೊಂಡೆವು. ಅದೇ ಪ್ರಕಾರವಾಗಿ ಸಿಮೆಂಟ್ ಕಾರ್ಖಾನೆಗಳನ್ನು ತಾಳಿಕೋಟೆ ಮುಂತಾದ ಕಡೆ ಪ್ರಾರಂಭ ಮಾಡಬೇಕು ಎಂದು ಅವರ ಮುಂದೆ ಎಲ್ಲ ವಿವರಗಳನ್ನೂ ಇಟ್ಟೆ . ಯಾವತ್ತೂ ಸಂಗತಿಗಳನ್ನು ವಿಚಾರಮಾಡಿ ಆ ಬಗ್ಗೆ ಯೋಗ್ಯ ಪರಿಹಾರವನ್ನು ಕೊಡುತ್ತೇನೆ, ಆ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನಮ್ಮೆಲ್ಲರಿಗೂ ವಚನವನ್ನು ಕೊಟ್ಟು ಹೋಗಿದ್ದಾರೆ.

ನೇಕಾರರ ಪರವಾಗಿ ಕೊಟ್ಟಂಥ ವಚನವೆಂದರೆ 15 ಕಾಮನ್ ವೀವಿಂಗ್ ಸೆಂಟರ್‌ಗಳನ್ನು ನಮ್ಮ ರಾಜ್ಯದಲ್ಲಿ ಮಾಡಿ ಪ್ರತಿಯೊಂದು ಕೇಂದ್ರದಲ್ಲಿಯೂ ಸಾಕಷ್ಟು ಜನರಿಗೆ ಕೆಲಸವನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆ ಬಗ್ಗೆ ಇನ್ನೂ ವ್ಯವಸ್ಥೆಯಾಗಿಲ್ಲ. ಅದನ್ನು ಕೂಡಲೇ ಸರ್ಕಾರದವರು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರವಾಗಿ ಕೈಮಗ್ಗದ ನೇಕಾರರಿಗೋಸ್ಕರ ಪ್ರತ್ಯೇಕ ಡೈರೆಕ್ಟೊರೇಟ್ ಮಾಡುತ್ತೇವೆಂದು ಈ ಸದನದಲ್ಲಿ ಸರ್ಕಾರ ವಚನ ಕೊಟ್ಟಿತ್ತು. ಆದರೆ ಬಜೆಟ್ಟಿನಲ್ಲಿ ಆ ಬಗ್ಗೆ ಏನೂ ಹಣವನ್ನು ಹಿಡಿ ದಿಟ್ಟಿಲ್ಲ. ಈ ಬಗ್ಗೆ ಕೂಡ ನಮ್ಮ ಅರ್ಥ ಮಂತ್ರಿಗಳು ವಿಚಾರ ಮಾಡಬೇಕೆಂದು ನಾನು ಅವರಿಗೆ ಈ ಸಮಯದಲ್ಲಿ ಸಲಹೆ ಮಾಡುತ್ತಿದ್ದೇನೆ. ಅದೇ ಪ್ರಕಾರವಾಗಿ ಬನಹಟ್ಟಿಯಲ್ಲಿ 9 ಲಕ್ಷ ರೂಪಾಯಿ ವೆಚ್ಚದಲ್ಲಿ ಸ್ಪೈಜಿಂಗ್ ಪ್ಲಾಂಟ್ ಕೊಡುತ್ತೇವೆಂದು ಸರ್ಕಾರದ ಪರವಾಗಿ ಹೇಳಿದ್ದರು. ಇನ್ನೂ ಅದರ ಬಗ್ಗೆ ಏನೂ ಆಗಿಲ್ಲ. ಅದೇ ಪ್ರಕಾರವಾಗಿ ಡಿಸ್ಟ್ರೆಸ್ಡ್ ವೀವರ್ಸ್‌ಗೆ ನಾಲ್ಕು ಲಕ್ಷ ರೂಪಾಯಿ ಸಾಲ ಕೊಡತಕ್ಕ ವ್ಯವಸ್ಥೆ ಮಾಡಲಾಗುವುದೆಂದು ಸರ್ಕಾರದ ಪರವಾಗಿ ಹೇಳ ಲಾಗಿತ್ತು. ಆದರೆ ಇನ್ನೂ ಆ ಬಗ್ಗೆ ಏನೂ ವ್ಯವಸ್ಥೆಯಾಗಿಲ್ಲ. ರಬಕವಿ, ಬನಹಟ್ಟಿ, ಇಲಕಲ್ ಮುಂತಾದ ಗ್ರಾಮಗಳಲ್ಲಿ ಹತ್ತು ಲಕ್ಷ ರೂಪಾಯಿ ಪ್ಲೆಜ್ ಲೋನ್ ಕೊಡುವುದಾಗಿ ಸರ್ಕಾರದ ಪರವಾಗಿ ವಚನ ಕೊಡಲಾಗಿದ್ದರೂ ಇನ್ನೂ ಆ ಬಗ್ಗೆ ಯಾವುದೇ ವ್ಯವಸ್ಥೆಯಾಗಿಲ್ಲ. ಅದನ್ನು ಮಾಡಬೇಕೆಂದು ಈ ಸಮಯದಲ್ಲಿ ನಾನು ಅರ್ಥ ಮಂತ್ರಿಗಳಿಗೆ ಸೂಚಿಸಬಯಸುತ್ತೇನೆ. ಬನಹಟ್ಟಿ, ಇಲಕಲ್, ಗುರುಮಿಟ್‌ಕಲ್, ಆಲಂದ್, ಬಿದರ್, ರಾಮದುರ್ಗ ಮತ್ತು ಗದಗ್ ಈ ಏಳು ಸ್ಥಳ ಗಳಲ್ಲಿ ಪ್ರತ್ಯೇಕವಾಗಿ ನೂಲಿನ ಗೋಡೌನ್‌ಗಳು ಪ್ರಾರಂಭವಾಗಿವೆ. ಈ ಗೋಡೌನ್‌ಗಳಲ್ಲಿ ನೂಲಿನ ವಿತರಣೆ ವ್ಯವಸ್ಥೆ ಏನಿದೆ ಅದು ತಪ್ಪು ಇದೆ. ಹತ್ತಿಪ್ಪತ್ತು ಮೈಲಿ ದೂರದಿಂದ ಕೇಂದ್ರ ಸ್ಥಳಗಳಿಗೆ ಹೋಗಿ ಒಂದೊಂದು ಸಲ ಐದು ಪೌಂಡು ಅಥವಾ ಎರಡುವರೆ ಕೆ. ಜಿ. ನೂಲನ್ನು ತೆಗೆದುಕೊಳ್ಳುವುದಕ್ಕೆ ನೇಕಾರರಿಗೆ ಬಹಳ ತೊಂದರೆಯುಂಟು. ಆ ದೃಷ್ಟಿಯಿಂದ ಈ ನೂಲಿನ ಕೇಂದ್ರಗಳು ಹೋಲ್‌ಸೇಲ್ ಗೋಡೌನ್‌ಗಳಾಗಬೇಕು ಮತ್ತು ಪ್ರತಿಯೊಂದು ಗ್ರಾಮದಲ್ಲಿಯೂ ರೀಟೆಲರ್ಸ್ ಅಂಗಡಿಗಳನ್ನು ನಿರ್ಮಾಣ ಮಾಡಿ ನೂಲನ್ನು ವಿತರಣೆ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಮಯದಲ್ಲಿ ಸೂಚಿಸುತ್ತೇನೆ.

ಕುಡಿಯುವ ನೀರಿನ ವ್ಯವಸ್ಥೆಯನ್ನು ಬಿಜಾಪುರ ಜಿಲ್ಲೆಯ ಕೃಷ್ಣ ಎಡದಂಡೆ ಮತ್ತು ಬಲ ದಂಡೆಯಲ್ಲಿರುವ ಗ್ರಾಮಗಳಿಗೆ ಇನ್ನೂ ಮಾಡಿಲ್ಲ. ರಬಕವಿ ಬನಹಟ್ಟಿ ಮುಂತಾದ ಗ್ರಾಮ ಗಳಲ್ಲಿ ಲಿಫ್ಟ್ ಮೂಲಕ ಮುನಿಸಿಪಾಲಿಟಿಗಳಿಗೆ ಬರುವ ನೀರು ಸರಬರಾಜಾಗುವುದಿಲ್ಲ. ಜವಾ

ಖಂಡಿಯಲ್ಲಿಕೂಡ ಎರಡು ದಿವಸಗಳಿಗೊಮ್ಮೆ ನೀರು ಬಿಡುವ ವ್ಯವಸ್ಥೆಯಾಗಿದೆ. ಅದೇ ಪ್ರಕಾರವಾಗಿ ಕೃಷ್ಣ ಎಡ ಮತ್ತು ಬಲದಂಡೆ ಮೇಲಿನ ಯಾವತ್ತೂ ಹಳ್ಳಿಗಳಲ್ಲಿ ನೀರನ್ನು ಪೂರೈಸುವ ವ್ಯವಸ್ಥೆಯಾಗಿಲ್ಲ. ಸರ್ಕಾರದವರು ಬಿಜಾಪುರ ಜಿಲ್ಲೆಯಲ್ಲಿ, ವಿಶೇಷವಾಗಿ ಜಮಖಂಡಿ, ಬೀಳಗಿ ಮುಂತಾದ ತಾಲ್ಲೂಕುಗಳಲ್ಲಿ ಕೃಷ್ಣ ಎಡ ಮತ್ತು ಬಲದಂಡೆ ಮೇಲಿರುವ ಜನಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಶಿಕ್ಷಣದ ವಿಷಯವಾಗಿ ಹೇಳಬೇಕಾದರೆ, ಕೆಲವು ಹೈಸ್ಕೂಲುಗಳಲ್ಲಿ ಬಹಳ ಹೇಯವಾದ ಪದ್ಧತಿಯನ್ನು ಅನುಸರಿಸುವ ಹಾಗೆ ಇದೆ. ಬಾಗಲಕೋಟೆ ಊರಿನಲ್ಲಿರುವ ಒಂದು ಹೈಸ್ಕೂಲಿನಲ್ಲಿ ಸರಾಸರಿ ಪಾಸಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಾಗಿ ತೋರಿಸುವ ದೃಷ್ಟಿಯಿಂದ ಸೊನ್ನೆ ಅಂಕಗಳು ಬಂದ ವಿದ್ಯಾರ್ಥಿಗಳಿಗೆ 35-40 ಮಾರ್ಕ್ಸ್ ಹಾಕಿ ಅಲ್ಲಿನ ವಾರ್ಷಿಕ ಪರೀಕ್ಷೆಗಳಲ್ಲಿ ಪಾಸ್ ಮಾಡಿಸುವ ವ್ಯವಸ್ಥೆ ಇದೆ ಎಂದು ನಾವು ವಿದ್ಯಾ ಮಂತ್ರಿಗಳು ಜಮಖಂಡಿಗೆ ಬಂದ ಸಮಯದಲ್ಲಿ ತೋರಿಸಿದ್ದೇನೆ. ಅದೇ ಪ್ರಕಾರವಾಗಿ ಮೆಟ್ರಿಕ್ ಸೆಂಟರ್‌ಗಳಲ್ಲಿ ಕಾಪಿ ಮಾಡಿಸುವುದರಿಂದ ಆ ಕೇಂದ್ರಗಳಿಗೆ ಕೆಲವು ವಿದ್ಯಾರ್ಥಿಗಳು ಹೋಗುವುದು ಪ್ರೊಸೀಜರ್ ಆಗಿದೆ. ಇಂಥ ಕೇಂದ್ರಗಳನ್ನು ಬಂದ್ ಮಾಡಬೇಕೆಂದು ನಾವು ವಿದ್ಯಾ ಮಂತ್ರಿಗಳಿಗೆ ವಿನಂತಿ ಮಾಡಿಕೊಂಡೆವು. ಆ ಪ್ರಕಾರವಾಗಿ ಅವರು ಮಾಡುವರೆಂದು ನಾವು ನಂಬಿದ್ದೇವೆ ರಾಜ್ಯದಲ್ಲಿ ಸುಮಾರು 300 ಜೂನಿಯರ್ ಕಾಲೇಜುಗಳು ಪ್ರಾರಂಭವಾಗಿವೆ. ಅವುಗಳಲ್ಲಿ 200ಕ್ಕೆ ಮೇಲ್ಪಟ್ಟು ಖಾಸಗಿ ಕಾಲೇಜುಗಳಿದ್ದು ಅವುಗಳಿಗೆ ಇನ್ನೂ ವರೆಗೆ ಗ್ರಾಂಟ್ ಬರಲಿಲ್ಲ. ಅಲ್ಲಿಯ ಶಿಕ್ಷಕರಿಗೆ ಇನ್ನೂ ಪಗಾರ ಕೊಡುವ ವ್ಯವಸ್ಥೆಯಾಗಿಲ್ಲ. ಅಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಪಗಾರ ಕೊಡುವ ವ್ಯವಸ್ಥೆಯಾಗಬೇಕು. 80 ಪರ್ಸೆಂಟ್ ಗ್ರಾಂಟ್ ರೂಪದಲ್ಲಿ ಕೊಡುತ್ತೇವೆಂದು ಸರ್ಕಾರದ ಪರವಾಗಿ ಹೇಳುತ್ತಲೇ ಇದ್ದಾರೆ. ಆದರೆ ಇಂದಿನವರೆಗೂ ಆ ಕಾಲೇಜುಗಳಿಗೆ ಏನೂ ಗ್ರಾಂಟ್ ರೂಪದಿಂದ ಹಣ ಕೊಟ್ಟಿಲ್ಲ. ಈ ದೃಷ್ಟಿಯಿಂದ ವಿದ್ಯಾ ಮಂತ್ರಿಗಳು ಆ ಬಗ್ಗೆ ವಿಚಾರ ಮಾಡಿ ಖಾಸಗಿ ಸಂಸ್ಥೆಯವರು ನಡೆಸತಕ್ಕ ಜೂನಿಯರ್ ಕಾಲೇಜುಗಳಿಗೆ ಗ್ರಾಂಟ್ ಕೊಟ್ಟು ಅವುಗಳನ್ನು ಚೆನ್ನಾಗಿ ನಡೆಸಲಿಕ್ಕೆ ಸಹಾಯ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಉದ್ಯೋಗದ ಬಗ್ಗೆ ವಿಚಾರ ಮಾಡುವದಾದರೆ, ಬಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಜಮಖಂಡಿ, ಬೀಳಗಿ, ಮುಧೋಳ್ ತಾಲ್ಲೂಕುಗಳಲ್ಲಿ ಸಾಕಷ್ಟು ಎಮ್ಮೆಗಳಿದ್ದು ಹೈನು, ಹಾಲು ಸಿಕ್ಕುತ್ತದೆ. ಅದನ್ನು ಕೊಳ್ಳುವವರು ಇಲ್ಲದ ಮೂಲಕ ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲವಾಗಿದೆ. ಕೃಷ್ಣ ನದಿಯ ಎಡ ದಂಡೆ ಮತ್ತು ಬಲದಂಡೆಯ ಹಳ್ಳಿಗಳಲ್ಲಿ ಸಾಕಷ್ಟು ಹೈನು ಕೊಡುವ ಎಮ್ಮೆಗಳಿವೆ. ಅಲ್ಲಿ ಕೊಳ್ಳುವವರಿಲ್ಲದ ಮೂಲಕ ಮೀರಜ್, ಸಾಂಗ್ಲಿ ಊರುಗಳಿಗೆ ನಮ್ಮ ನಾಡಿನಿಂದ ಬೆಣ್ಣೆ, ತುಪ್ಪ ಮುಂತಾದುವು ಹೋಗುತ್ತಿವೆ. ಅದಕ್ಕಾಗಿ ಬಿಜಾಪುರ ಜಿಲ್ಲೆಯಲ್ಲಿ ಒಂದು ಡೇರಿ ಫಾರಂ ತೆಗೆಯಬೇಕೆಂದು ನಾನು ಸೂಚಿಸಬಯಸುತ್ತೇನೆ.

ಇನ್ನು ಫುಡ್ ಗ್ರೇನ್ಸ್ ವಿಚಾರವಾಗಿ ಹೇಳಬೇಕದಾರೆ ನಮ್ಮ ತಾಲ್ಲೂಕಿನಲ್ಲಿ ವಿಶೇಷವಾಗಿ ನೇಕಾರರಿಗೆ ಯಾವ ರೀತಿಯಿಂದಲೂ ಫುಡ್ ಗ್ರೇನ್ಸ್ ದೊರೆಯುತ್ತಿಲ್ಲ. ಆದುದರಿಂದ ಜಮಖಂಡಿ, ಬನಹಟ್ಟಿ ಮುಂತಾದ ಗ್ರಾಮಗಳಲ್ಲಿ ಸಾಕಷ್ಟು ಫುಡ್ ಗ್ರೇನ್ಸ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಹಿಪ್ಪರಗಿ ಬ್ಯಾರೇಜ್‌ಗೆ 2 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದರಿಂದ 2 ಲಕ್ಷ 4 ಸಾವಿರ ಎಕರೆಯ ಪ್ರದೇಶದಲ್ಲಿ ಆರಂಭದ ಕೆಲಸ ಪ್ರಾರಂಭವಾಗ ಅಲ್ಲಿಯ ಜನಗಳಿಗೆ ಸಾಕಷ್ಟು ಕೂಲಿ ದೊರೆತು ಕುಡಿಯುವ ನೀರಿನ ವ್ಯವಸ್ಥೆ ಮತ್ತು ಇರಿಗೇಷನ್ ವ್ಯವಸ್ಥೆ ಆಗುತ್ತದೆಂದು ನಾನು ಭಾವಿಸಿದ್ದೇನೆ. ಅಧ್ಯಕ್ಷಿಣಿಯವರೇ, ಇಷ್ಟು ಹೊತ್ತಿನವರೆಗೆ ಈ ಅಂದಾಜು ಪತ್ರದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಈ ಬಗ್ಗೆ ತುಂಬಾ ಅಭಾರಿಯಾಗಿದ್ದು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷರೇ, ಈಗ ಅರ್ಥ ಸಚಿವರು ಶ್ರಮವಹಿಸಿ ನಮ್ಮ ಮುಂದೆ ಇಟ್ಟಿರತಕ್ಕ ಈ ವರ್ಷದ ಆಯವ್ಯಯದ ಲೆಕ್ಕಪತ್ರವನ್ನು ಮತ್ತು ಬಹಳ ಉತ್ತಮವಾದ ಶೈಲಿಯಲ್ಲಿ ಬರೆದಿರತಕ್ಕ ಅವರ ಭಾಷಣವನ್ನು ಕೂಡ ಸ್ವಾಗತಿಸಬೇಕಾಗಿದೆ. ಆದರೆ ಈ ಆಯವ್ಯಯ ವಿಚಾರ ತೆಗೆದುಕೊಂಡರೆ ಮತ್ತು ಬರತಕ್ಕಂಥ ವರಮಾನವನ್ನು ತೆಗೆದುಕೊಂಡರೆ ಇದು ಸತ್ಯಕ್ಕೆ ದೂರವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು ಈ ಬಜೆಟಿನಲ್ಲಿ 67 ಕೋಟಿ

(ಶ್ರೀ ಟಿ. ಆರ್. ಶಾಮಣ್ಣ)

ರೂಪಾಯಿ ರೆವಿನ್ಯೂ ಡಿಫಿಸಿಟ್ ತೋರಿಸಿ 36 ಕೋಟಿ ರೂಪಾಯಿಯ ಓವರ್ ಆಲ್ ಡಿಫಿಸಿಟ್ ತೋರಿಸಿದ್ದಾರೆ. ಜೊತೆಗೆ ಬರತಕ್ಕಂಥ ವರಮಾನವನ್ನು ಸಾಕಷ್ಟು ಇನ್‌ಫ್ಲೇಟ್ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಮತ್ತು ಖರ್ಚುಗಳನ್ನು ಅಂಡರ್ ಎಸ್ಟಿಮೇಟ್ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಹೋದ ವರ್ಷ ಲ್ಯಾಂಡ್ ರೆವಿನ್ಯೂ ವರಮಾನ 5.40 ಕೋಟಿ ರೂಪಾಯಿ ಇತ್ತು. ಈ ವರ್ಷ ಬರಗಾಲ ಇದ್ದರೂ ಸಹ ಲ್ಯಾಂಡ್ ರೆವಿನ್ಯೂ ಸರಿಯಾಗಿ ವಸೂಲು ಆಗುವುದಿಲ್ಲ ಎಂದು ಗೊತ್ತಿದ್ದರೂ ಕೂಡ 5.60 ಕೋಟಿ ರೂಪಾಯಿ ತೆಗೆದುಕೊಂಡಿದ್ದಾರೆ, ಇದು ಸರಿಯೇ ಎನ್ನುವ ಬಗ್ಗೆ ವಿವರಣೆಯನ್ನು ಕೊಡಬೇಕು. ಈ ವರ್ಷ ಎಲೆಕ್ಟ್ರಿಸಿಟಿ ಕಟ್ ಆಗಿ ವ್ಯಾಪಾರ ಮತ್ತು ಕೈಗಾರಿಕೆಗೆ ಸ್ವಲ್ಪ ತೊಂದರೆಯಾಗಿದ್ದರೂ ಹೋದವರ್ಷ 57 ಕೋಟಿ ರೂಪಾಯಿ ತೆಗೆದುಕೊಂಡಿದ್ದಾರೆ. ಈ ವರ್ಷ 64 ಕೋಟಿ ರೂಪಾಯಿ ವರಮಾನ ತೆಗೆದುಕೊಂಡಿದ್ದಾರೆ. ಈ ಈ ವರ್ಷ 25 ಪರ್ಸೆಂಟ್ ಪವರ್ ಕಟ್ ಆಗಿರುತ್ತದೆ. ಆರು ತಿಂಗಳು ಪವರ್ ಕಟ್ ಆಗಿದೆ ಎಂದು ತೆಗೆದುಕೊಂಡರೂ ಕೂಡ ಹನ್ನೆರಡೂವರೆ ಪರ್ಸೆಂಟ್ ಕಟ್ ಆಗುತ್ತದೆ. ಯಾವಾಗ ಎಲೆಕ್ಟ್ರಿಸಿಟಿ ಕಟ್ ಕಡಿಮೆ ತೋರಿಸುವುದಕ್ಕೆ ಸಾಕಷ್ಟು ಕಾರಣ ಇರುತ್ತದೆ. ಈ ಸಂದರ್ಭದಲ್ಲಿ 57 ರಿಂದ 64 ಕೋಟಿ ರೂಪಾಯಿ ಆಗಬೇಕಾದರೆ ಈಗ ತೆಗೆದುಕೊಂಡಿರತಕ್ಕ ಮೊತ್ತ ಸರಿಯಾದುದು ಅಲ್ಲ ಎಂದು ಹೇಳಬೇಕಾಗಿದೆ. ಆದುದರಿಂದ ಈ ವರ್ಷ ಬರತಕ್ಕ ವರಮಾನವನ್ನು ನಾವು ಸರಿಯಾಗಿ ವಸೂಲು ಮಾಡಿದರೆ ಮಾತ್ರ ಈ ಆಯವ್ಯಯ ಪತ್ರ ಸರಿಹೋಗುತ್ತದೆ. ಇಲ್ಲದೇ ಹೋದರೆ ಖೋತಾ ಹೆಚ್ಚು ಆಗುತ್ತದೆ. ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಹುದು. ಕೇಂದ್ರದಿಂದ ಬರುವ ಹಣವನ್ನು ಹೆಚ್ಚು ನಿರೀಕ್ಷೆ ಮಾಡಿದೇವೆ. ಕೇಂದ್ರ ಸರ್ಕಾರಕ್ಕೆ ಸಾಕಷ್ಟು ಒತ್ತಾಯ ಮಾಡದೇ ಹೋದ ಪಕ್ಷದಲ್ಲಿ ಖಂಡಿತನಾವು ನಿರೀಕ್ಷೆ ಮಾಡಿದಷ್ಟು ಹಣದ ಸಹಾಯ ದೊರೆಯುವುದಿಲ್ಲ ಎಂದು ಹೇಳುತ್ತೇನೆ. ಮಾನ್ಯ ಪ್ರಧಾನ ಮಂತ್ರಿಗಳು ಮಹಾರಾಷ್ಟ್ರದಲ್ಲಿ ಪ್ರವಾಸ ಮಾಡಿದಾಗ ಆನ್ ದಿ ಸ್ಪಾಟ್ ಇಂಥಿಂಥ ಕೆಲಸಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿದರು. ಮೈಸೂರು ರಾಜ್ಯಕ್ಕೆ ಬಂದಾಗ ನೋಡೋಣ ಎಂದು ಹೇಳಿದರೇ ಹೊರತು ಕಡ್ಡಾಯವಾಗಿ ಇಷ್ಟು ಸಹಾಯ ಮಾಡುತ್ತೇವೆ ಎಂದು ಹೇಳಲಿಲ್ಲ. ಬಹುಶಃ ನಮ್ಮ ರಾಜ್ಯದಿಂದ ಸಾಕಷ್ಟು ಪ್ರಭಾವ ಬೀರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮಹಾರಾಷ್ಟ್ರದಲ್ಲಿ ರೈಲ್ವೆ ಲೈನನ್ನು ಸ್ಯಾಂಕ್ಷನ್ ಮಾಡಿದ್ದೇವೆ ಎಂದು ಹೇಳಿದರು. ಆದರೆ ನಮ್ಮ ರಾಜ್ಯದ ವಿಚಾರದಲ್ಲಿ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟರೇ ವಿನಹ ಕಡ್ಡಾಯವಾಗಿ ಇಷ್ಟು ಹಣವನ್ನು ಕೊಡುತ್ತೇವೆ ಎಂಬ ಭರವಸೆಯನ್ನು ಕೊಡದೇ ಇರುವುದು ಬಹಳ ಆಶ್ಚರ್ಯವಾದ ವಿಚಾರ. ಅರ್ಥ ಸಚಿವರು ಮತ್ತು ಮುಖ್ಯ ಮಂತ್ರಿಗಳು ಕೇಂದ್ರದ ಮೇಲೆ ಸಾಕಷ್ಟು ಪ್ರಭಾವ ಬೀರಿ ರಾಜ್ಯ ಸರಕಾರಕ್ಕೆ ಬೇಕಾದಂಥ ಗ್ರ್ಯಾಂಟನ್ನು, ಸಬ್‌ಸಿಡಿಯನ್ನು ವಸೂಲು ಮಾಡದೆ ಹೋದ ಪಕ್ಷದಲ್ಲಿ ಬಜೆಟ್ ಖೋತಾ ಆಗುತ್ತದೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಖರ್ಚಿಗೆ ಒಂದು ಮಿತಿ ಹಾಕಿಕೊಂಡು ಖರ್ಚನ್ನು ಕಡಿಮೆ ಮಾಡಬೇಕಾಗುತ್ತದೆ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ನ್ನು ಕಡಿಮೆ ಮಾಡದೇ ಹೋದ ಪಕ್ಷದಲ್ಲಿ ಬಜೆಟ್ ಸರಿದೂಗಿಸುವುದಕ್ಕೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸೇಲ್ಸ್ ಟ್ಯಾಕ್ಸ್, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಜ್ ಡ್ಯೂಟಿ ಇದು ಸರಿಯಾದಂಥ ರೀತಿಯಲ್ಲಿ ವಸೂಲು ಆಗದೇ ಹೋದ ಪಕ್ಷದಲ್ಲಿ ಬಜೆಟ್‌ನಲ್ಲಿ ಸೂಚಿಸಿರತಕ್ಕ ಹಣವನ್ನು ವಸೂಲು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸೇಲ್ಸ್ ಟ್ಯಾಕ್ಸ್ ಸೋರಿ ಹೋಗದಂತೆ ಅದನ್ನು ಸರಿಪಡಿಸಬೇಕು ಎಂದು ಈ ಸಭೆಯಲ್ಲಿ ಅನೇಕ ಸಂದರ್ಭದಲ್ಲಿ ಒತ್ತಿ ಹೇಳಿದ್ದೇನೆ. ಅರ್ಥ ಸಚಿವರು ಸಾಕಷ್ಟು ಪ್ರಯತ್ನ ಪಟ್ಟಿದ್ದಾರೆ. ಆದರೂ ಸಹ ಸೇಲ್ಸ್ ಟ್ಯಾಕ್ಸ್ ಎಷ್ಟು ವಸೂಲು ಆಗಬಹುದಾಗಿತ್ತೋ ಅಷ್ಟು ವಸೂಲು ಆಗದೆ ಇರುವುದನ್ನು ನಾವು ಪ್ರತಿ ದಿನ ಕಾಣುತ್ತಿದ್ದೇವೆ. ಆಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಸಹ ಒಂದು ಕೋಟಿ 95 ಲಕ್ಷ ರೂಪಾಯಿ ಇದ್ದದ್ದು ಈ ಸಾರಿ ಒಂದು ಕೋಟಿ 50 ಲಕ್ಷ ರೂಪಾಯಿ ಆಗಿದೆ ಮತ್ತು ಲ್ಯಾಂಡ್ ರೆವಿನ್ಯೂ ಸಹ ಕಡಿಮೆ ಆಗಿದೆ. ಏತಕ್ಕೆ ಇದು ಕಡಿಮೆ ಆಯಿತು ಎನ್ನುವ ಬಗ್ಗೆ ವಿವರ ಕೊಡಬೇಕಾಗುತ್ತದೆ. ಸೇಲ್ಸ್ ಟ್ಯಾಕ್ಸ್ ವಸೂಲು ಆಗುವುದಕ್ಕೆ ಈ ವರ್ಷ ಜನಗಳಿಗೆ ಸಹಾಯ ಮಾಡುತ್ತೇವೆ ಎಂದು ಸೇಲ್ಸ್ ಟ್ಯಾಕ್ಸ್‌ನಲ್ಲಿ ಕೆಲವಕ್ಕೆ ಸಿಂಗಲ್ ಪಾಯಿಂಟ್ ಎಂದು ತೋರಿಸಿದ್ದೀರಿ. ಆದರೆ ಸಿಂಗಲ್ ಪಾಯಿಂಟ್ ಹಾಕಿರತಕ್ಕ ವಸ್ತುಗಳು 6 ಪರ್ಸೆಂಟಿಗೆ ಏರಿಸಿದ್ದೀರಿ. ಇದರಿಂದ ಜನಗಳಿಗೆ ಖಂಡಿತವಾಗಿ ಏನೂ ಪ್ರಯೋಜನವಾಗುವುದಿಲ್ಲ. ಯಾವುದನ್ನು ಸಿಂಗಲ್ ಪಾಯಿಂಟ್ ಎಂದು ಹಾಕಿದ್ದೀರಿ ಅದು ದಿನ ನಿತ್ಯ ಬಳಕೆಯಲ್ಲಿ ಇಲ್ಲದೇ ಇರುವ ಸಾಮಾನುಗಳು ಮತ್ತು ಅನೇಕಸಾರಿ ಸರ್ಕ್ಯುಲೇಟ್ ಆಗದೇ ಇರುವ

ಸಾಮಾನುಗಳು. ಸಾಮಾನ್ಯವಾಗಿ ಸಿಂಗಲ್ ಪಾಯಿಂಟ್ ಮಾಡಿ ಆರು ಪರ್ಸೆಂಟ್ ಮಾಡಿರುವುದನ್ನು ನೋಡಿದರೆ ಇದರಿಂದ ಜನಗಳಿಗೆ ತೊಂದರೆಯೇ ಹೊರತು ಅನುಕೂಲವಾಗುವುದಿಲ್ಲ. ಸರಕಾರಕ್ಕೆ ಮಾತ್ರ ಹೆಚ್ಚಿನ ಲಾಭ ಬರುತ್ತದೆ. ಅಲ್ಯೂಮಿನಿಯಂ ನೇರವಾಗಿ ರಿಟೇಲರಿಗೆ ಬರುತ್ತದೆ ರೀಟೇಲರಿಂದ ಕನ ಸ್ಯೂಮರ್ ತೆಗೆದು ಕೊಳ್ಳುತ್ತಾರೆ. ಇದು ಒಂದು ಪಾಯಿಂಟ್ ಅಥವಾ ಎರಡು ಪಾಯಿಂಟ್‌ನಲ್ಲಿ ಟರ್ನ್ ಓವರ್ ಆಗಿರುವುದರಿಂದ ಇದಕ್ಕೆ 6 ಪರ್ಸೆಂಟ್ ಟ್ಯಾಕ್ಸ್ ಏರಿಸಿರುವುದರಿಂದ ಜನಗಳಿಗೆ ಹೆಚ್ಚಿನ ತೊಂದರೆಯಾಗುತ್ತದೆ. ಇಂಡಸ್ಟ್ರಿಯಲ್ ಗ್ಯಾಸ್ ಮಲ್ಟಿ ಪಾಯಿಂಟ್, ಸಿಂಗಲ್ ಪಾಯಿಂಟ್ ಮಾಡಿರುವುದರಿಂದ ಹೆಚ್ಚು ತೊಂದರೆಯಾಗುತ್ತದೆ. ಪುಡ ವೇರ್ ಸಾಧಾರಣವಾಗಿ ಮ್ಯಾನುಫಾಕ್ಚರ್ ಮತ್ತು ರಿಟೇಲರಿಂದ ಕನ್‌ಸ್ಯೂಮರ್ಸ್‌ಗೆ ನೇರವಾಗಿ ಹೋಗತಕ್ಕದ್ದು. ಇವು ಎರಡಕ್ಕಿಂತ ಹೆಚ್ಚಿಗೆ ಸಾರಿ ಟರ್ನ್ ಓವರ್ ಆಗತಕ್ಕಂಥ ಸಾಮಾನುಗಳು. ವಾಟರ್ ಮೀಟರ್, ಪ್ರೆಜರ್ ಕುಕ್ಕರ್, ಲಿನೋಲಿಯಮ್ ಇವು ಹೆಚ್ಚಿಗೆ ಸರ್‌ಕ್ಯುಲೇಟ್ ಆಗತಕ್ಕ ಸಾಮಾನುಗಳು ಅಲ್ಲ. ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾವಣೆ ಆಗುವುದು ಹೆಚ್ಚು. 6 ಪರ್ಸೆಂಟ್ ಮಾಡಿ ಅವನ್ನು ಸಿಂಗಲ್ ಪಾಯಿಂಟ್ ಮಾಡುವುದರಿಂದ ಹೆಚ್ಚಿನ ತೆರಿಗೆ ಹಾಕಿದಂತಾಗುತ್ತದೆ. ಫ್ಯೂಯಲ್, ಗ್ಯಾಸ್, ಕಂಟೇನರ್ಸ್ ಈ ಸಾಮಾನುಗಳಿಗೆ 4 ಪರ್ಸೆಂಟ್ ಹಾಕಿದ್ದೀರಿ. ಅದರಲ್ಲಿಯೂ ಕೂಡ ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾವಣೆ ಆದರೂ ಕೂಡ ಸಿಂಗಲ್ ಪಾಯಿಂಟ್ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ದಿನ ನಿತ್ಯ ಬಳಕೆ ವಸ್ತುಗಳಿಗೆ ಸಿಂಗಲ್ ಪಾಯಿಂಟ್ ಮಾಡಿದ್ದರೆ ಚೆನ್ನಾಗಿತ್ತು. ಅದು ಬಿಟ್ಟು ಆಹಾರ ಧಾನ್ಯಗಳ ಮೇಲೆ ಮಾಡಿದ್ದೀರಿ. ಅದು ಅನೇಕ ಸಲ ಕೈ ಬದಲಾವಣೆ ಆಗುವ ಸಾಮಾನುಗಳು. ಮತ್ತೆ ಸರಕಾರಕ್ಕೆ ಹೆಚ್ಚು ವರಮಾನ ಬರತಕ್ಕ ಮತ್ತು ಜನಗಳಿಗೆ ಹೆಚ್ಚು ತೊಂದರೆ ಆಗತಕ್ಕ ರೀತಿಯಲ್ಲಿ ವರಮಾನವನ್ನು ಹಾಕಿರುವುದರಿಂದ ಸರಕಾರದಿಂದ ಜನಗಳಿಗೆ ಯಾವ ವಿಧವಾದ ಪ್ರಯೋಜನವೂ ಆಗಲಿಲ್ಲ. ಇದರಿಂದ ಇನ್ನೂ ಹೆಚ್ಚು ತೊಂದರೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ.

3.30 P.M

ಕೇಂದ್ರ ಸರಕಾರದವರು ಬಾಂಗ್ಲಾ ದೇಶದ ಲೆವಿಯನ್ನು ತೆಗೆದು ಹಾಕಿದರು. ಆದರೆ ನಮ್ಮ ಸರಕಾರ ಅದನ್ನು ಉಳಿಸಿಕೊಂಡು ಇದರಿಂದ ಬರತಕ್ಕ ಹಣವನ್ನು ಬಡವರಿಗೆ ಮನೆ ಕಟ್ಟಿಕೊಳ್ಳುವ ಸಲುವಾಗಿ ಉಪಯೋಗಿಸುತ್ತೇವೆ ಎಂದು ಹೇಳಿ ನಮ್ಮ ಬಾಯನ್ನು ಮುಚ್ಚಲು ಪ್ರಯತ್ನ ಮಾಡಿದ್ದಾರೆ. ಇದಕ್ಕಿಂತ ಬೇರೆ ರೀತಿಯಾದ ಉಚಿತಾಯವನ್ನು ಮಾಡಿದ್ದರೆ ಸರಿಯಾಗುತ್ತಿರಲಿಲ್ಲವೆ ಎನ್ನುವುದು ನನ್ನ ಪ್ರಶ್ನೆ. ಈ ವರ್ಷ ಸುಮಾರು ಎರಡು ಲಕ್ಷ ಜನಕ್ಕೆ ಮನೆ ಇಲ್ಲದವರಿಗೆ ಸೈಟು ಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ, ಇದರಲ್ಲಿ 25 ಸಾವಿರ ಜನಕ್ಕೆ ಮನೆ ಕಟ್ಟಲು ಹಣವನ್ನು ಒದಗಿಸಿದ್ದಾರೆಂದು ಹೇಳುತ್ತಾರೆ. ಎರಡು ಲಕ್ಷ ಜನರಿಗೆ ಸೈಟುಗಳನ್ನು ಹಂಚುವಾಗ ಕೇವಲ 25 ಸಾವಿರ ಜನಕ್ಕೆ ಮಾತ್ರ ಮನೆಕಟ್ಟಲು ಸಹಾಯ ಮಾಡಿದರೆ ಇನ್ನೂ ಹತ್ತು ವರ್ಷಗಳ ಮೇಲಾಗುತ್ತದೆ ಈ ಯೋಜನೆ ಪೂರೈಸಬೇಕಾದರೆ, ಇದು ಯಾವ ರೀತಿ ಆಗುತ್ತದೆ ಎನ್ನುವುದನ್ನು ಆಲೋಚನೆ ಮಾಡಬೇಕಾಗುತ್ತದೆ.

ಇನ್ನು ಸರಕಾರದ ನೌಕರರಿಗೆ ಕೇಂದ್ರದ ನೌಕರರುಗಳಿಗೆ ಕೊಡುವಂತೆ ಸಮಾನವಾದ ರೀತಿಯಲ್ಲಿ ತುಟ್ಟಿಭತ್ಯವನ್ನು ಹೆಚ್ಚಿಸಿರುವುದೇನೋ ಸಂತೋಷದ ವಿಚಾರ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳಿದರೆ ಅದನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ಸರಕಾರದ ನೌಕರರುಗಳಿಗೆ ಸಂಬಳಸಾರಿಗೆಗಳನ್ನು ಹೆಚ್ಚು ಮಾಡಬೇಕೆಂದು ಕೇಳುವಾಗ ಅದೇ ರೀತಿಯಲ್ಲಿ ಕೆಲಸ ಮಾಡುವ ವಿಚಾರದಲ್ಲಿ ಸರಕಾರದ ನೌಕರರು ಹೆಚ್ಚು ಗಮನ ಕೊಟ್ಟ ಪಕ್ಷದಲ್ಲಿ ಆದರಿಂದ ಜನಕ್ಕೆ ಬಹು ಅನುಕೂಲವಾಗುತ್ತದೆ, ಇಂದು ನಮ್ಮ ರಾಜ್ಯ ಸರಕಾರದ ಬಜೆಟ್ಟಿನಲ್ಲಿ ಹೆಚ್ಚು ಹಣ ಎಸ್ಟಾಬ್ಲಿಷ್‌ಮೆಂಟಿಗೇ ಹೋಗುತ್ತಿದೆ, ಈಗ ಸಂಬಳ ಮತ್ತಷ್ಟು ಹೆಚ್ಚಿಸಿರುವಾಗ ಬಜೆಟ್ಟು ಇನ್ನೂ ಹೆಚ್ಚಾಗುತ್ತದೆ. ಆದರೆ ಇಂದು ಸಂಬಳ ಮಾತ್ರ ಹೆಚ್ಚಾಗುತ್ತಿದೆಯೇ ವಿನಾ ನೌಕರರುಗಳು ಕೆಲಸ ಮಾಡುವುದು ಕಡಿಮೆಯಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಕೈಗಾರಿಕೆಗಳಲ್ಲಿ ಯಾವ ರೀತಿ ಕೆಲಸಕ್ಕೆ ತಕ್ಕ ಸಂಬಳ ಕೊಡುತ್ತಿದ್ದಾರೋ ಅದೇ ರೀತಿ ಇಲ್ಲೂ ಕೂಡ ಕೆಲಸ ಮಾಡುವವರಿಗೇ ಹೆಚ್ಚು ಸಂಬಳ ಕೊಟ್ಟರೆ ಸರಿಯಾಗಿರುತ್ತದೋ ಏನೋ ? ನಾವು ಕೆಲವು ಆಫೀಸುಗಳಲ್ಲಿ ನೋಡುವಾಗ ನೌಕರರು ಅಟೆಂಡೆನ್ಸ್‌ಗೆ ರುಜು ಹಾಕಿ ಆ ನಂತರ ಹೋಟೆಲ್‌ಗಳಲ್ಲಿ ಹೋಗಿ ಕಾಫಿ ಕುಡಿಯುತ್ತ ಹರಟೆ ಹೊಡೆಯುವುದನ್ನು ನೋಡುತ್ತಿರುತ್ತೇವೆ. ಹೀಗೆ ಇರುವುದರಿಂದ ಯಾವ ಆಫೀಸಿನಲ್ಲಾಗಲೀ ಸಂಬಳಕ್ಕೆ ತಕ್ಕಂತೆ ಕೆಲಸಗಳು ನಡೆಯುತ್ತಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ನೆನಪಿಗೆ ಬರುತ್ತದೆ. ನಮ್ಮ ಬಡಾವಣೆಯಲ್ಲಿ ಡಾಕ್ಟರ್ ಬಿ. ಕೆ. ನಾರಾಯಣ

(ಶ್ರೀ ಟಿ. ಆರ್. ಶಾಮಣ್ಣ)

ರಾವ್ ಎನ್ನುವವರಿದ್ದರು. ಇವರು ಪ್ರಸಿದ್ಧ ವೈದ್ಯರಾಗಿದ್ದರು. ಒಂದು ಸಾರಿ ಇವರು ನನಗೆ ಅವರ ಹುಡುಗನಿಗೆ ಪಾಠ ಹೇಳಲು ಒಬ್ಬರು ಟೀಚರನ್ನು ಗೊತ್ತುಮಾಡಬೇಕೆಂದು ಹೇಳಿದರು. ಅವ ರಂತೆ ಪಾಠ ಹೇಳಲು ನಾನು ಒಬ್ಬರು ಟೀಚರನ್ನು ಗೊತ್ತು ಮಾಡಿಕೊಟ್ಟೆ. ಮೊದಲು ಆ ಮೇಷ್ಟ್ರ ರಿಗೆ ತಿಂಗಳಿಗೆ ಆಗ 25 ರೂಪಾಯಿ ಕೊಡುವುದಾಗಿ ಗೊತ್ತು ಮಾಡಲಾಗಿತ್ತು. ಅನಂತರ ಆ ಟೀಚರು ಸರಿಯಾಗಿ ಬರುತ್ತಿಲ್ಲ ಎಂದು ಒಂದು ಸಾರಿ ಹೇಳಿದರು. ಆ ನಂತರ ಕೆಲ ಕಾಲಾನಂತರ ಅದೇ ಮೇಷ್ಟರಿಗೆ ತಿಂಗಳಿಗೆ 30 ರೂಪಾಯಿ ಕೊಡುತ್ತೇನೆ ಮತ್ತು ಅವರು ಪ್ರತಿನಿತ್ಯವೂ ಪಾಠಕ್ಕೆ ಬರಬೇಕು ಎಂದು ಹೇಳಿದರು ಮತ್ತು ಯಾವ ದಿನ ಪಾಠಕ್ಕೆ ಬರುವುದಿಲ್ಲವೋ ಅಂತಹ ದಿನಕ್ಕೆ ಮೂರು ರೂಪಾಯಿಗಳು ಹಿಡಿಯುತ್ತೇನೆ ಇಲ್ಲದಿದ್ದರೆ ನಿತ್ಯ ಬರುವುದಾಗಿದ್ದರೆ ದಿನವೂ ಮೂರು ರೂಪಾಯಿಗಳಂತೆ ಕೊಡುತ್ತೇನೆ ಎಂದು ಹೇಳಿದರು. ಆದಾದ ಕೆಲ ದಿನಗಳಾದ ನಂತರ ನಾನು ಒಂದು ಸಲ ಡಾಕ್ಟರು ನಾರಾಯಣರಾಯರನ್ನು ಕೇಳಿದಾಗ ಅವರು ಈಚೆಗೆ ಅವರು ಮಾಡಿದ ಬದಲಾವಣೆಯಿಂದ ಅವರ ಹುಡುಗನಿಗೆ ಸರಿಯಾಗಿ ಪಾಠ ಸಿಗಲು ಅನುಕೂಲವಾಯಿತು ಎಂದು ಹೇಳಿದರು. ಇದನ್ನು ನೋಡಿದರೆ ಕೆಲಸಕ್ಕೆ ತಕ್ಕ ಸಂಬಳ ಎನ್ನುವಂತಾಯಿತು. ಯಾರು ಸರ ಕಾರದ ಕೆಲಸಗಳನ್ನು ಚೆನ್ನಾಗಿ ಮಾಡುತ್ತಾರೆಯೋ ಅವರಿಗೆ ಹೆಚ್ಚು ವೇತನ ಕೊಟ್ಟು ಯಾರು ಕೆಲಸ ಗಳನ್ನು ಸರಿಯಾಗಿ ಮಾಡುವುದಿಲ್ಲವೋ ಅಂತಹವರಿಗೆ ವೇತನವನ್ನು ಖೋತಾ ಮಾಡಬಹುದು, ಅಲ್ಲದೆ ಈಚೆಗೆ ಬರೀ ಆಫೀಸರುಗಳ ಸಂಖ್ಯೆಯೇ ಸರಕಾರದ ಎಲ್ಲ ಕಡೆಗಳಲ್ಲೂ ಹೆಚ್ಚಾಗಿರುವುದು, ಕಂಡು ಬರುತ್ತಿದೆ. ಇದರಿಂದಾಗಿ ಸರಕಾರದ ನೌಕರರುಗಳಿಗೆ ಕೆಲಸ ಮಾಡುವುದರಲ್ಲೂ ತೊಂದರೆಗಳಾಗು ತ್ತಿವೆ. ಎಲ್ಲ ಮೀರಿ ಇಂದು ಆಫೀಸರುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇನ್ನು ಮುಂದಾದರೂ ಆಫೀಸರುಗಳ ಸಂಖ್ಯೆಯನ್ನು ಹೆಚ್ಚು ಮಾಡಬಾರದು, ಆಫೀಸರುಗಳು ಏನೂ ಕೆಲಸ ಮಾಡುವುದಿಲ್ಲ, ಇವರ ಕೈ ಕೆಳಗಿನ ನೌಕರರುಗಳೇ ಹೆಚ್ಚು ಕೆಲಸ ಮಾಡುವವರು. ಇಂದು ಬ್ಯಾಂಕುಗಳಲ್ಲಿ ಆಫೀಸರುಗಳು ಯಾವ ರೀತಿ ಕೆಲಸ ಮಾಡುತ್ತಾರೆ ಎಂದರೆ ಅವರು ರಾತ್ರಿ 12 ಗಂಟೆಯವರೆಗೂ ಕೆಲಸ ಮಾಡುತ್ತಾರೆ. ಇವರು ಕೆಲಸ ಮಾಡುತ್ತಿದ್ದಾರಲ್ಲ ಎಂದು ಅಲ್ಲಿರುವ ನೌಕರರುಗಳು ಕೂಡ ಅವರ ಜೊತೆ ಕೆಲಸ ಮಾಡುತ್ತಿರುತ್ತಾರೆ. ಆದರೆ ಸರಕಾರದಲ್ಲಿ ಈ ರೀತಿ ಕೆಲಸಗಳಾಗುತ್ತಿಲ್ಲ. ದಿನೇ ದಿನೇ ಜಾಸ್ತಿಯಾಗುತ್ತಿರುವ ಆಫೀಸರುಗಳ ಸಂಖ್ಯೆಯನ್ನು ತಡೆಗಟ್ಟುವುದು ಅಗತ್ಯ. ನಾವು ಗಳು ದಿನೇ ದಿನೇ ನೋಡುತ್ತಿದ್ದೇವೆ, ಜಾಯಿಂಟು ಡೈರೆಕ್ಟರುಗಳು, ಡೈರೆಕ್ಟರುಗಳು, ಸ್ಪೆಷಲ್ ಆಫೀಸರುಗಳು ಎಂದು ಇತಿ ಮಿತಿಯಿಲ್ಲದೆ ನೇಮಕಗಳಾಗುತ್ತಿವೆ. ಇದರಿಂದ ಸರಿಯಾಗಿ ಕೆಲಸ ಮಾಡದ ಸರಕಾರ ಇಂತಹ ಆಫೀಸರುಗಳ ಮೇಲೆ ಬರೆ ಎಳೆಯುವ ಕ್ರಮ ತೆಗೆದುಕೊಂಡರೆ ಆಗ ಸರಕಾರದ ಕೆಲಸಗಳು ಸರಿಹೋಗಬಹುದು. ಇನ್ನು ಎಲ್ಲಿ ನೋಡಿದರೆ ಅಲ್ಲಿ ಲಂಚದ ಹಾವಳಿ ಬಹು ಹೆಚ್ಚಾಗಿರುತ್ತದೆ. ಲಂಚವಿಲ್ಲದೆ ಯಾವ ಕಚೇರಿಯಲ್ಲಾಗಲಿ ಅಲ್ಲಿರುವ ಪೇಪರು ಮುಂದಕ್ಕೆ ಹೋಗುವುದೇ ಇಲ್ಲ. ಇದಕ್ಕಾಗಿ ಸರಕಾರ ಇಂತಿಂಥಹ ಕೆಲಸಗಳು ಇಷ್ಟೇ ದಿನದಲ್ಲಿ ಮುಗಿಯ ಬೇಕು ಎಂದು ಕಟ್ಟುನಿಟ್ಟಾದ ಕ್ರಮ ಜಾರಿಗೆ ತರಲು ತೀರ್ಮಾನ ತೆಗೆದುಕೊಂಡರೆ ಆಗ ಸ್ವಲ್ಪ ಅನುಕೂಲ ಜನತೆಗೆ ಸಿಗಬಹುದು. ಇದನ್ನು ಸರಕಾರ ವಿಚಾರ ಮಾಡಬೇಕು ಅನೇಕ ನೌಕರರು ಗಳು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರೂ ಅವರಿಗೆ ಸರಿಯಾದ ಉತ್ತೇಜನ ಸಿಗುತ್ತಿಲ್ಲ. ಇದಕ್ಕೆ ಅವರಿಗೆ ಸರಿಯಾದ ಗಾಡ್ ಫಾದರ್‌ಗಳು ಇರುವುದಿಲ್ಲ. ಕೆಲಸ ಮಾಡದೇ ಇರತಕ್ಕವರು ಬಹಳ ಹೆಚ್ಚಾಗಿದ್ದಾರೆ, ಇದಕ್ಕಾಗಿ ಕೆಲಸಕ್ಕೆ ತಕ್ಕ ಸಂಬಳ ಕೊಡಬೇಕು ಎಂದು ಸರಕಾರ ಏರ್ಪಾಡು ಮಾಡಿದರೆ ಆಗ ಸರಕಾರದ ಕೆಲಸಗಳು ಚೆನ್ನಾಗಿ ಆಗಬಹುದು. ಇದರ ಬಗ್ಗೆ ಸೂಕ್ತವಾದ ಎಚ್ಚರಿಕೆ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ತೀವ್ರವಾಗಿ ತಕ್ಕ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಈ ವರ್ಷದ ಬಡ್ಜೆಟ್ಟಿನಲ್ಲಿ ಓಲ್ಡ್ ಏಜ್ ಪೆನ್‌ಷನರ್ಸ್‌ಗಳಿಗೆ ಇದುವರೆಗೆ 25 ರೂಪಾಯಿ ಕೊಡು ತಿದ್ದರು. ಆಮೇಲೆ 30 ರೂಪಾಯಿನಂತೆ ಮಾಡಿದರು. ಇದನ್ನು ಈಗ 40 ರೂಪಾಯಿಗಳವರೆಗೆ ಹೆಚ್ಚು ಮಾಡಿದ್ದಾರೆ. ಇದು ಸಂತೋಷದ ವಿಚಾರ. ಆದರೆ ಇದರಲ್ಲಿ ಅನೇಕ ಶಕ್ತಿಹೀನರಾದವರು ಈಚೆಗೆ ರಿಟೈರು ಆಗಿದ್ದರೂ ಅವರ ಪೆನ್‌ಷನ್ ಪೇಪರುಗಳು ಬೇಗ ಇತ್ಯರ್ಥವಾಗದೆ ಬಹಳ ನಿಧಾನವಾಗುತ್ತಿದೆ. ಹೀಗಾಗಿ ನೂರಾರು ಪೆನ್‌ಷನ್ ಪೇಪರುಗಳು ಇನ್ನೂ ಇತ್ಯರ್ಥವಾಗಿಲ್ಲ. ಇದನ್ನು ತಡವಾಗದಂತೆ ಬೇಗ ಇತ್ಯರ್ಥ ಮಾಡಬೇಕೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಸರಕಾರದವರೇನೋ ಇಂದು ಕೆಲಸ ಮಾಡುವ ನೌಕರರುಗಳಿಗೆ ಸಂಬಳಸಾರಿಗೆಗಳನ್ನು ಹೆಚ್ಚು ಮಾಡಿದ್ದಾರೆ? ಆದರೆ ಅವರ ಗಮನ ಸರಕಾರದಲ್ಲಿ ದುಡಿದಿರುವ ಹಾಗೂ ರಿಟೈರಾಗಿರುವ ಪೆನ್‌ಷನರುಗಳ ಬಗ್ಗೆ ಏಕೆ ಗಮನ ಹರಿಸಲಿಲ್ಲ ಎಂದು ಕೇಳಬೇಕಾಗಿದೆ. ಇಂದು ಅವರಿಗೆ ಏರು

ತ್ತಿರುವ ಬೆಲೆಗಳಿಂದಾಗಿ ಅವರು ಜೀವನ ಮಾಡುವುದೇ ಕಷ್ಟವಾಗಿದೆ. ಅವರಿಗೇನಾದರೂ ಅನುಕೂಲ ಮಾಡಿಕೊಟ್ಟರೆ ಚೆನ್ನಾಗಿತ್ತು. ಇಂತಹ ಪೆನ್ಷನರುಗಳು ಬೇರೆ ಕಡೆಗಳಲ್ಲಿ ಹಾಗೂ ಕೆಲವು ಕೈಗಾರಿಕೆಗಳಲ್ಲಿ ಕೆಲಸ ಮಾಡಬೇಕಾದ ಸಂದರ್ಭ ಬಂದಿದೆ, ಇವರು ಜೀವನ ಮಾಡಲು ಕಷ್ಟವಾಗಿದೆ ಮತ್ತು ಯದ್ವಾ ತದ್ವಾ ಬೆಲೆಗಳು ಗಗನಕ್ಕೇರುತ್ತಿವೆ, ಇದರಿಂದಾಗಿ ಇಂತಹ ಪೆನ್ಷನರುಗಳ ಸ್ಥಿತಿ ತುಂಬಾ ಶೋಚನೀಯವಾಗಿದೆ. ಇದರ ಬಗ್ಗೆ ಸರಕಾರ ಗಮನ ಕೊಡದೇ ಇರುವುದು ತುಂಬಾ ಶೋಚನೀಯವಾದ ವಿಚಾರ. ನೌಕರರುಗಳು ಹೆಚ್ಚು ಸಂಬಳ ಕೇಳುತ್ತಿಲ್ಲ. ಆದರೆ ಸರಕಾರದವರು ಏರುತ್ತಿರುವ ದವಸಗಳ ಬೆಲೆಗಳನ್ನು ಇಳಿಸಲು ತಕ್ಕ ಕ್ರಮ ತೆಗೆದುಕೊಂಡಿದ್ದರೆ ಇಷ್ಟು ಹೆಚ್ಚು ಸಂಬಳ ಕೊಡಬೇಕಾದ ಅಗತ್ಯವೇ ಬರುತ್ತಿರಲಿಲ್ಲ. ಹೆಚ್ಚು ಸಂಬಳ ಕೊಡುವುದರಿಂದ ವರ್ತಕರುಗಳು ದವಸಗಳ ಬೆಲೆಗಳನ್ನು ಏರಿಸುತ್ತಾರೆ. ಇದರಿಂದಾಗಿ ಈ ಸಮಸ್ಯೆ ಬಗೆಹರಿಯುವುದಿಲ್ಲ. ಆದುದರಿಂದ ಕೇಂದ್ರ ಸರಕಾರದವರು ಹಾಗೂ ರಾಜ್ಯ ಸರಕಾರದವರು ಕೂಡಿ ಬೆಲೆಗಳನ್ನು ಏರಿಸಲು ತಕ್ಕ ಕ್ರಮ ತೆಗೆದುಕೊಂಡರೆ ಬೆಲೆಗಳ ಏರಿಕೆಯನ್ನು ತಡೆಗಟ್ಟಲು ಅನುಕೂಲವಾಗುತ್ತದೆ.

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಸದಸ್ಯರು ಬೆಲೆ ಏರಿಕೆ ತಡೆಗಟ್ಟಲು ರಚನಾತ್ಮಕವಾದ ಸಲಹೆಗಳನ್ನು ಇಲ್ಲಿ ತಿಳಿಸಬಹುದಲ್ಲವೇ ?

ಶ್ರೀ ಟಿ. ಆರ್. ಶಾಮಣ್ಣ.—ಒಂದು ಕಡೆ ತೆರಿಗೆ ಹೆಚ್ಚು ಮಾಡುವುದರಿಂದ ಬೆಲೆಗಳು ಏರುತ್ತಿವೆ. ಆದುದರಿಂದ ತೆರಿಗೆಯನ್ನು ಆದಷ್ಟು ಹತೋಟಿಯಲ್ಲಿಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಎರಡನೆಯದಾಗಿ ಅತ್ಯಾವಶ್ಯಕ ವಸ್ತುಗಳ ತಯಾರಿಕೆ ಮತ್ತು ವಿತರಣೆಯನ್ನು ಮಾಡುವಾಗ ಹಿಡಿತವಲ್ಲಿ ಇಟ್ಟುಕೊಳ್ಳಬೇಕು. ಲಾಭ ಮಾಡತಕ್ಕಂತಹ ಲಾಭಕೋರರು ಯಾರು ಇದ್ದಾರೋ ಅವರಿಗೆ ಸರಿಯಾದ ಶಿಕ್ಷೆ ವಿಧಿಸಬೇಕು, ಈ ಕೆಲಸವನ್ನು ಸರ್ಕಾರದವರು ಸಮರ್ಪಕವಾಗಿ ಮಾಡುತ್ತಿಲ್ಲ. ಬೆಲೆಗಳ ಏರಿಕೆಗೆ ಸರ್ಕಾರದವರು ಸೂಕ್ತ ಮಾರ್ಗವನ್ನು ಕಂಡುಹಿಡಿದು ಕಡಿಮೆಯಾಗುವಂತೆ ನೋಡಿಕೊಳ್ಳಬೇಕೇ ಹೊರತು ಅದರ ತಪ್ಪನ್ನು ಬೇರೆಯವರ ಮೇಲೆ ಹಾಕುವುದು ಸರಿಯಲ್ಲ. ಈ ವಿಚಾರದಲ್ಲಿ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರ ಒಂದುಕಡೆ ಕೂತು ಸೂಕ್ತ ಕಾರ್ಯಕ್ರಮ ಕೈಕೊಳ್ಳದೇ ಹೋದರೆ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಆಡಳಿತ ಕುಸಿದುಬೀಳಬಹುದು. ಆದಕಾರಣ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಈ ಸಮಯದಲ್ಲಿ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಭತ್ತದ ಮೇಲೆ ತೆರಿಗೆಯನ್ನು ಮಾನ್ಯ ಅರ್ಥಸಚಿವರು ತೆಗೆದುಹಾಕಿದ್ದಾರೆ. ಆದರೆ ಅದನ್ನು ವರ್ತಕರು ದುರುಪಯೋಗ ಮಾಡಿಕೊಂಡು ಆ ಒಂದು ಹೊರೆಯನ್ನು ಜನರ ಮೇಲೆಯೇ ಹಾಕದಂತೆ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವರ್ಷ ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಕಠಿಣವಾಗಿರುವುದರಿಂದ ಆ ಬಗ್ಗೆ ಎಚ್ಚರಿಕೆಯನ್ನು ತೆಗೆದುಕೊಳ್ಳದೇ ಹೋದರೆ ಮುಂದಿನ ವರ್ಷ ಇನ್ನೂ ಕಷ್ಟಪಡಬೇಕಾಗುತ್ತದೆ.

ಹೋದ ವರ್ಷ ವಿದ್ಯಾಭ್ಯಾಸಕ್ಕೆ 61 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ ಈ ವರ್ಷ 67 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ಸಂತೋಷದ ಸಂಗತಿ. 1966–67ರಲ್ಲಿ ಈ ಬಾಬಿಗೆ 28 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ ಈ ಸಾಲಿನಲ್ಲಿ 67 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಕಳೆದ 8 ವರ್ಷಗಳಲ್ಲಿ ವಿದ್ಯಾಭ್ಯಾಸಕ್ಕೆ ಒಂದಕ್ಕೆ ಎರಡರಷ್ಟು ಹೆಚ್ಚು ಹಣವನ್ನು ಒದಗಿಸಿರುವುದು ಉತ್ತಮವಾದಂಥ ಮಾರ್ಗವೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ಶೋಚನೀಯ ವಿಚಾರವೆಂದರೆ ವಿದ್ಯಾಭ್ಯಾಸಕ್ಕೆ ಹಣ ಹೆಚ್ಚು ಒದಗಿಸುತ್ತಿದ್ದರೂ ಸಹ ವಿದ್ಯಾಭ್ಯಾಸದ ಕ್ವಾಲಿಟಿ ಮಾತ್ರ ಹೆಚ್ಚದೆ ನಶಿಸಿ ಹೋಗುತ್ತಿದೆ. ವಿದ್ಯಾಭ್ಯಾಸದ ಮಟ್ಟ, ಅದರ ಕ್ವಾಲಿಟಿ ಹೆಚ್ಚದೆ ಹೋದರೆ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುವ ಹಣದಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಆದಕಾರಣ ಈ ಬಗ್ಗೆ ಸರ್ಕಾರದವರು ಒಂದು ರಚನಾತ್ಮಕವಾದ ಕಾರ್ಯಕ್ರಮವನ್ನು ಇಟ್ಟುಕೊಂಡು, ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚು ಮಾಡುವ ಬಗ್ಗೆ ಗಮನ ಕೊಡಬೇಕಲ್ಲದೆ ವರ್ಷದಿಂದ ವರ್ಷಕ್ಕೆ ಎಷ್ಟು ಅಚೀವ್ ಆಗಿದೆ ಎಂಬುದನ್ನು ಸಹ ನೋಡಬೇಕು. ಪ್ರಯೋಜನಕಾರಿಯಾದಂತಹ ವಿದ್ಯಾಭ್ಯಾಸವನ್ನು ನಾವು ಕೊಡದೇ ಹೋದರೆ ಮುಂದೆ ನಾವು ಕಷ್ಟಪಡಬೇಕಾಗುತ್ತದೆ.

Education must be not only useful, but purposeful, and at the same time quality education must be imparted to the students.

(ಶ್ರೀ ಟಿ. ಆರ್. ಶಾಮಣ್ಣ)

ಇನ್ನು ಮೆಡಿಕಲ್‌ಗೆ ಹೋದ ವರ್ಷ 10·30 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ ಈ ವರ್ಷ 11·68 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇನ್ನೂ ಜಾಸ್ತಿ ಒದಗಿಸಿದ್ದರೆ ಚೆನ್ನಾಗಿರುತ್ತಿತ್ತು. ಈಗ ಜನರಿಗೆ ಸತ್ವವಿಲ್ಲದ ಆಹಾರ ಸಿಗುತ್ತಿರುವುದರಿಂದ ಹೆಚ್ಚಾಗಿ ಕಾಯಿಲೆ ಬೀಳುತ್ತಿದ್ದಾರೆ. ಜನರಿಗೆ ಸರಿಯಾಗಿ ಆರೋಗ್ಯ ಇಲ್ಲದೆ ಕ್ಷೀಣದಿಶೆಗೆ ಹೋಗುತ್ತಿರುವ ಕಾಲದಲ್ಲಿ ಆರೋಗ್ಯಕ್ಕಾಗಿ ಹೆಚ್ಚು ಹಣವನ್ನು ಒದಗಿಸಿದ್ದರೆ ಚೆನ್ನಾಗಿರುತ್ತಿತ್ತು. ಈಗ ಕೇಂದ್ರದಿಂದ ಬೇರೆ ಕುಟುಂಬ ಯೋಜನೆಗಾಗಿ ಹಣ ಬರುತ್ತದೆ. ಆದಕಾರಣ ಜನರಿಗೆ ಹೆಚ್ಚು ಹೆಚ್ಚು ಔಷಧಗಳನ್ನು ಒದಗಿಸುವುದಕ್ಕೆ ಮತ್ತು ಎಲ್ಲ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ಸಂತೋಷದ ಸಂಗತಿ ಎಂದರೆ, ಕೇಂದ್ರದವರು ವರ್ಷೇ ವರ್ಷೇ ತೆರಿಗೆಗಳನ್ನು ಹೆಚ್ಚಿಸುತ್ತಿರುವ ಕಾಲದಲ್ಲಿ ರಾಜ್ಯ ಸರ್ಕಾರದವರು ಯಾವ ಹೊಸ ತೆರಿಗೆಗಳನ್ನು ಹಾಕದಿರುವುದು. ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರುವುದೇನೆಂದರೆ ಸರ್ಕಾರಕ್ಕೆ ಹಣ ಬೇಕಾಗಿರುವ ಕಾಲದಲ್ಲಿ ಹೆಚ್ಚು ತೆರಿಗೆಯನ್ನು ಹಾಕುವುದಕ್ಕೆ ಬದಲು ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಹಣವನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಅನೇಕ ಸಂದರ್ಭಗಳಲ್ಲಿ ಸರ್ಕಾರಕ್ಕೆ ಬರಬೇಕಾದ ಹಣ ಬರದೆ ಮಧ್ಯದಲ್ಲಿಯೇ ಸೋರಿಹೋಗುತ್ತಿದೆ. ಬುಡದಿಂದ ಮೇಲಿನವರೆಗೆ ಲಂಚವಿರುವುದರಿಂದ ಸರ್ಕಾರಕ್ಕೆ ಬರುವ ಆದಾಯ ತಪ್ಪಿಹೋಗುತ್ತಿದೆ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಿಂದ, ಸೇಲ್ಸ್ ಟ್ಯಾಕ್ಸ್‌ನಿಂದ ಮತ್ತು ಎಕ್ಸೈಜ್‌ನಿಂದ ಎಷ್ಟು ವರಮಾನ ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ. ಕಳ್ಳಭಟ್ಟಿಯಿಂದ ರಾಜ್ಯದ ವರಮಾನ ಕಡಿಮೆಯಾಗಿದೆ. ಬೆಂಗಳೂರು ನಗರದಲ್ಲಿಯೇ 500 ಕಳ್ಳಭಟ್ಟಿ ಕೇಂದ್ರಗಳಿವೆ. ಇದರಿಂದ ಜನರ ಆರೋಗ್ಯ ಕೆಡುತ್ತಿರುವುದಲ್ಲದೆ, ಸರ್ಕಾರಕ್ಕೆ ಬರುವ ಆದಾಯವೂ ಖೋತಾ ಆಗುತ್ತಿದೆ. ಆದ್ದರಿಂದ ಇದನ್ನು ಮುಟ್ಟುಗೋಲು ಹಾಕಬೇಕು. ಈ ಕಳ್ಳಭಟ್ಟಿ ಕೇಂದ್ರಗಳು ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿರುವುದಕ್ಕೆ ಪೋಲೀಸಿನವರು ಸಹಾಯ ಮಾಡುತ್ತಿರುವುದೇ ಕಾರಣ. ಇಲ್ಲದಿದ್ದರೆ ಅವರು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಪೋಲೀಸರ ಬಗ್ಗೆ ಸಾಕಷ್ಟು ಗಮನ ಕೊಡದೇ ಹೋದರೆ ಕಳ್ಳಭಟ್ಟಿ ವ್ಯಾಪಾರ ಇದೇ ರೀತಿ ನಡೆದುಕೊಂಡು ಹೋಗುತ್ತಿರುತ್ತದೆ ಮತ್ತು ಸರ್ಕಾರಕ್ಕೆ ಬರುವ ಆದಾಯ ಕಡಿಮೆಯಾಗುತ್ತದೆ. ಇದರ ಜೊತೆಗೆ ಇದನ್ನು ಕುಡಿದು ಸಾಯುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಬಡವರ ಆರೋಗ್ಯದ ದೃಷ್ಟಿಯಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುವ ದೃಷ್ಟಿಯಿಂದ ಇದರ ಬಗ್ಗೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಆ ರೀತಿ ತೆಗೆದುಕೊಳ್ಳುವುದರಿಂದ ಜನರ ನೈತಿಕ ಮಟ್ಟವೂ ಜಾಸ್ತಿಯಾಗುತ್ತದೆ. ಮಾನ್ಯ ಚೆನ್ನಬಸಪ್ಪನವರು ಗೃಹಮಂತ್ರಿಗಳಾಗಿದ್ದಾಗ ಕಳ್ಳಭಟ್ಟಿಯ ಮೇಲೆ ದಾಳಿ ನಡೆಸುತ್ತಿದ್ದರು. ಅದೇ ರೀತಿ ಈಗಲೂ ದಾಳಿ ನಡೆಸಬೇಕೆಂದು ಒತ್ತಿ ಹೇಳುತ್ತೇನೆ.

ಇಂದು ಬೆಂಗಳೂರು ನಗರದಲ್ಲಿ ಕ್ಲಬ್‌ಗಳ ಹಾವಳಿ ವಿಪರೀತವಾಗಿದೆ. ನಗರದ ಪ್ರತಿ ಮೂಲೆ ಮೂಲೆಯಲ್ಲಿಯೂ ಕ್ಲಬ್‌ಗಳು ನಡೆಯುತ್ತಿವೆ. ಈ ಕ್ಲಬ್‌ಗಳನ್ನು ನಡೆಸುವವರು ಪೋಲೀಸ್ ಇನ್ಸ್‌ಪೆಕ್ಟರಿಗೆ ಸಾವಿರದಿಂದ ಎರಡು ಸಾವಿರ ರೂಪಾಯಿಗಳವರೆಗೆ ಮಾಮೂಲಿ ಕೊಡುತ್ತಿರುತ್ತಾರೆ. ಈ ಕ್ಲಬ್‌ಗಳಲ್ಲಿ ಕೆಲವು ಪುಡಾರಿಗಳು ಇರುತ್ತಾರೆ. ಅವರು ಈ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಸಾಕುತ್ತಿದ್ದಾರೆ ಅಲ್ಲದೆ, ತಮಗೆ ಬೇಡವೆನಿಸಿದರೆ ವರ್ಗವನ್ನು ಸಹ ಮಾಡಿಸುತ್ತಾರೆ. ಈ ಕ್ಲಬ್‌ಗಳನ್ನು ಸರ್ಕಾರದವರು ಮುಟ್ಟುಗೋಲು ಹಾಕದೇ ಹೋದರೆ ಮನೆಗಳು ಹಾಳಾಗಿ ಹೋಗುತ್ತವೆ. ಈ ಕ್ಲಬ್‌ಗಳನ್ನು ನಡೆಸುವವರು ಕೆಲವು ಪುಂಡರನ್ನು ಸಾಕಿಕೊಂಡಿರುತ್ತಾರೆ. ಅವರ ಸಹಾಯದಿಂದ ಏನು ಬೇಕಾದರೂ ಮಾಡುತ್ತಾರೆ. ಪೋಲೀಸರು ಸಹ ಇವರಿಗೆ ಸಹಾಯ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಕೆಲವು ಕ್ಲಬ್‌ಗಳಲ್ಲಿ ಪಾಪ್ಯುಲರ್ ಮಿನಿಸ್ಟ್ರಿ ಎಂದು ಕೆಲವು ಮಂತ್ರಿಗಳ ಫೋಟೋವನ್ನು ಹಾಕಿದ್ದಾರೆ. ಪತ್ರಿಕೆಯಲ್ಲಿ ಪ್ರಿಂಟ್ ಆಗಿರುವ ಫೋಟೋವನ್ನೇ ಹಾಕಿದ್ದಾರೆ. ಒಬ್ಬ ಕ್ಲಬ್ ಓನರ್ ಮುಖ್ಯಮಂತ್ರಿಗಳಿಗೆ ಒಂದು ದೊಡ್ಡ ಪಾರ್ಟಿಯನ್ನೇ ಕೊಟ್ಟ. ಇಂದು ಪೋಲೀಸ್ ಸ್ಟೇಷನ್‌ಗಳಲ್ಲಿಯೂ ಸಹ ಮಂತ್ರಿಗಳ ಫೋಟೋ ಸಹ ಹಾಕಿದ್ದಾರೆ ಜೊತೆಗೆ ಕೈದಿಗಳ ಫೋಟೋ ಸಹ ಹಾಕಿದ್ದಾರ.

ಶ್ರೀ ಎಂ. ಎಸ್. ಕೃಷ್ಣನ್.—ಬಾರ್‌ಗಳಲ್ಲಿ ಇಂದಿರಾಗಾಂಧಿಯವರ ಫೋಟೋ ಹಾಕಿರಬೇಕಾದರೆ ಕ್ಲಬ್‌ಗಳಲ್ಲಿ ಮಂತ್ರಿಗಳ ಫೋಟೋ ಏತಕ್ಕೆ ಹಾಕಬಾರದು ?

ಶ್ರೀ ವಾಟಾಳ್ ನಾಗರಾಜ್.—ಮಹಾತ್ಮ ಗಾಂಧೀಜಿಯವರನ್ನು ಪ್ರೈಯುವವರೇ ಪಾಪ್ಯುಲರ್ ಮಿನಿಸ್ಟ್ರಿಯಲ್ಲಿ ಮಂತ್ರಿಗಳಾಗಿರಬೇಕಾದರೆ ಇಂದಿರಾಗಾಂಧಿಯವರ ಪರಿಸ್ಥಿತಿ ಏನಾಗಬೇಕು ಎಂಬುದನ್ನು ಮಾನ್ಯ ಅಧ್ಯಕ್ಷರೇ ಹೇಳಬೇಕು ?

Mr. DEPUTY SPEAKER.—Please do not expcet any reply from me on hypcthetical issues raised at the spur of the moment.

ಶ್ರೀ ವಾಟಾಳ್ ನಾಗರಾಜ್.—ತಾವು ಉತ್ತರಕೊಡುವುದಕ್ಕಾಗುವುದಿಲ್ಲವೆಂದರೆ, ಮಾನ್ಯ ಚೆನ್ನಬಸಪ್ಪನವರು ಉತ್ತರ ಕೊಡಲಿ. ಏಕೆಂದರೆ ಅವರು ಶಕ್ತ್ಯ, ನಿಷ್ಠೆ, ಮತ್ತು ಧರ್ಮದಿಂದ ಇರುವವರಾಗಿದ್ದಾರೆ. ನಾನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರನ್ನು ಕೇಳುತ್ತೇನೆ. ಕ್ಲಬ್ಬುಗಳಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಫೋಟೋ ಮತ್ತು ನಮ್ಮ ರಾಜ್ಯದ ಮಂತ್ರಿಗಳ ಫೋಟೋವನ್ನು ಇಟ್ಟುಕೊಳ್ಳಬಾರದೇ ?

Sri H. M. CHANNABASAPPA —It is open to anybody to have any photo in his house including the photo of Sri Vatal Nagaraj. I willfurther state that I would request some of the shops and bars to keep the photo of Sri Vatal Nagaraj.

Sri M. S. KRISHNAN.—Do you pass a general order to the effect that the photos of Sri Vatal Nagaraj should hung in the shops ?

Mr. DEPUTY SPEAKER.—We must take the proceedings of the House a little more seriously. Interruptions are tolerable once in a way but the members should not go on dilating upon them in a humourous way.

ಶ್ರೀ ಟಿ. ಆರ್. ಶಾಮಣ್ಣ.—ಕ್ಲಬ್ಬುಗಳ ಕಾಟವನ್ನು ತಪ್ಪಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಮತ್ತು ಬಡ್ಜೆಟ್ಟಿನಲ್ಲಿ ಹೆಚ್ಚು ಭಾಗ ಬರಗಾಲದ ಬಗ್ಗೆ ಹೇಳಿದ್ದಾರೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ಖರ್ಚು ಮಾಡತಕ್ಕ ಪ್ರತಿಯೊಂದು ಕಾಸೂ ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕು. ಮತ್ತು ಈ ಬರಗಾಲ ಉತ್ತರ ಕರ್ನಾಟಕ ಮಾತ್ರವಲ್ಲದೆ ಹಳೆಯ ಮೈಸೂರು ಪ್ರದೇಶಗಳಾದ ತುಮಕೂರು, ಬೆಂಗಳೂರು, ಕೋಲಾರ, ಚಿತ್ರದುರ್ಗ ಮುಂತಾದ ಪ್ರದೇಶಗಳಲ್ಲಿಯೂ ಸಹ ಪೂರ್ತಿ ಕ್ಷಾಮ ಪೀಡಿತವಾಗಿರುವ ಪ್ರದೇಶಗಳು ಇವೆ, ಅವರಿಗೂ ಸಾಕಷ್ಟು ಅನುಕೂಲ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ. ಈಗ ಬರಗಾಲ ಪೀಡಿತ ಪ್ರದೇಶಗಳಲ್ಲಿ ಅನೇಕ ರೈತರು ತಮ್ಮಲ್ಲಿ ಇದ್ದಂತಹ ಹಸು, ದನಕರುಗಳು ದುಡ್ಡು ಕಾಸು ಎಲ್ಲವನ್ನೂ ಕಳೆದುಕೊಂಡಿದ್ದಾರೆ. ಆದ್ದರಿಂದ ಮಳೆ ಬಂದಾಗ ಅವರಿಗೆ ಬೇಕಾದಂತಹ ಸೌಲಭ್ಯವನ್ನು ಒದಗಿಸದಿದ್ದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಆ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ಅವರು ಜಮೀನನ್ನು ಉಳುವುದಕ್ಕೆ ಬೇಕಾದ ಸೌಲಭ್ಯ, ಬಿತ್ತನೆಗೆ ಬೇಕಾದ ಬೀಜ ಗೊಬ್ಬರ ಇವುಗಳನ್ನು ಅವರಿಗೆ ಒದಗಿಸದಿದ್ದರೆ ಅವರು ವ್ಯವಸಾಯ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅವರಿಗೆ ಬೇಕಾದ ಸೌಲಭ್ಯವನ್ನು ಒದಗಿಸುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈ ವರ್ಷದ ಆಯವ್ಯಯದಲ್ಲಿ ರೆವಿನ್ಯೂ ಎಕ್ಸ್‌ಪೆಂಡಿಚರ್ ಬಹಳ ಕಷ್ಟಕರವಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆದ್ದರಿಂದ ಮಾನ್ಯ ಅರ್ಥ ಸಚಿವರು ಆದಷ್ಟೂ ವರಮಾನವನ್ನು ಹೆಚ್ಚಿಸುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಕೈಗೊಳ್ಳಬೇಕು. ಇದರ ಜೊತೆಗೆ ಕೇಂದ್ರಸರ್ಕಾರದಿಂದ ಯಾವ ಯಾವ ರೀತಿ ಹಣಸಹಾಯವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಸಾಕಷ್ಟು ಗಮನವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ಗೆ ಖರ್ಚನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರದ ಆಡಳಿತ ದಕ್ಷತೆಯಿಂದ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಜನಗಳಿಗೆ ಸೌಕರ್ಯವನ್ನು ಒದಗಿಸುವ ಕಡೆ ಗಮನ ಕೊಟ್ಟು ಆ ಬಗ್ಗೆ ಮಂತ್ರಿಮಂಡಲದವರು ಸಾಕಷ್ಟು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಯೆಂಕಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯಮುಂದೆ ಮಂಡಿಸಿರತಕ್ಕ 1973-74 ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ಮೊದಲನೆಯದಾಗಿ ಇವೊತ್ತು ಸರ್ಕಾರದವರು ಬರಗಾಲ ಪೀಡಿತ ಪ್ರದೇಶಗಳನ್ನು ಗಮನಕ್ಕೆ ತೆಗೆದುಕೊಂಡು ಅಲ್ಲಿ ಮಾಡಿರತಕ್ಕ ಕೆಲಸಕಾರ್ಯಗಳು ಮತ್ತು ವ್ಯವಸ್ಥೆಯನ್ನು ನಾನು ಪೂರ್ಣವಾಗಿ ಸ್ವಾಗತಿಸುತ್ತೇನೆ ಈಗ ಸರ್ಕಾರದವರು ಕೈಗೊಂಡಿರತಕ್ಕ ಪ್ರಯತ್ನಗಳಿಂದಾಗಿ ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದರೂ ಮುಂದೆ ಕೆಲವು ಭಾಗಗಳಲ್ಲಿ ಪರಿಸ್ಥಿತಿ ಹದಗೆಡುವ ಸಂದರ್ಭ ಬರಬಹುದು ಎಂದು ಕಾಣುತ್ತದೆ. ಹಿಂದಿನ ಸರ್ಕಾರದ ತಾತ್ಸಾರದ ಭಾವನೆಯಿಂದ ಈ ಬರಗಾಲವನ್ನು ಎದುರಿಸುವುದಕ್ಕೆ ಸಾಧ್ಯವಾಗಲಿಲ್ಲ. ಅದೇ ರೀತಿ ನಮ್ಮ ಸರ್ಕಾರವು ಮಾಡಬಾರದು. ಹಂತಹಂತವಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಈ ಅಭಾವ ಪರಿಸ್ಥಿತಿ ಇರತಕ್ಕ ಪ್ರದೇಶಗಳಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಬಿಜಾಪುರ, ಬೀದರ್, ಗುಲ್ಬರ್ಗ, ರಾಯಚೂರು, ಬೆಳಗಾಂ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕೆಲವು ಪ್ರದೇಶಗಳಲ್ಲಿ ಸರ್ಕಾರದವರು ಮಾಡಿರತಕ್ಕ ಕಾರ್ಯವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಮಾಡಿದ್ದರೆ ಸಂತೋಷವಾಗುತ್ತಿತ್ತು. ಇದೇ ರೀತಿ ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ಮಾಡಬೇಕಾಗಿರತಕ್ಕ ಕೆಲಸಗಳನ್ನು ತ್ವರಿತವಾಗಿ ಮಾಡಬೇಕು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಜನವಸತಿ ಕಾರ್ಯಕ್ರಮಕ್ಕೆ ಸಂಬಂಧಪಟ್ಟಹಾಗೆ ಸರ್ಕಾರದವರು ಹಾಕಿಕೊಂಡಿರತಕ್ಕ ಯೋಜನೆಯ ಬಗ್ಗೆ ಹಣವನ್ನು ಒದಗಿಸಿರತಕ್ಕ ವಿಷಯವನ್ನು ಮಾನ್ಯ ಹಣಕಾಸಿನ ಸಚಿವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ 1972-73 ರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಭೂಹೀನರಾದ ಬಡಜನರಿಗೆ ಸುಮಾರು 2.5 ಲಕ್ಷ ಮನೆ ನಿವೇಶನಗಳನ್ನು ಹಂಚಲಾಗಿತ್ತು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಒಂದು ವಿಷಯವನ್ನು ಹೇಳುತ್ತೇನೆ. ಇಂದಿನ ದಿವಸದವರೆಗೆ ಸರ್ಕಾರದವರು ಬಡಜನಗಳಿಗೆ ಹಂಚಿಕೆ ಮಾಡಿರತಕ್ಕ ನಿವೇಶನಗಳು ಪೂರ್ಣವಾಗಿ ಅವರ ವಶಕ್ಕೆ ಹೋಗಿಲ್ಲ. ಕಾರಣವೇನೆಂದರೆ ಅಲ್ಲಿರತಕ್ಕ ಅಧಿಕಾರಿಗಳ ವರ್ತನೆ ಮತ್ತು ಮನೋಭಾವನೆಯೇ ಕಾರಣ ಎಂದು ನಾನು ನಂಬಿದ್ದೇನೆ. ಆದ್ದರಿಂದ ಸರ್ಕಾರದವರು ನಿವೇಶಗಳನ್ನು ಹಂಚತಕ್ಕ ರೀತಿಯಲ್ಲಿ ತ್ವರಿತವಾಗಿ ಕೆಲಸ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಪ್ರಸಕ್ತ ವರ್ಷದಲ್ಲಿ ಮನೆಗಳನ್ನು ಕಟ್ಟಿಸುವ ಕಾರ್ಯಕ್ರಮಕ್ಕೆ 5 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಇದರಲ್ಲಿ 25 ಸಾವಿರ ಮನೆಗಳನ್ನು ಕಟ್ಟಿಸುತ್ತೇವೆ ಎಂದು ಹೇಳಿದ್ದಾರೆ. ಈ 25 ಸಾವಿರ ಮನೆಗಳನ್ನು ಕಟ್ಟಿದರೆ ಈ ಕಾರ್ಯಕ್ರಮದಲ್ಲಿ ಒಂದು ಹಳ್ಳಿಗೆ ಒಂದು ಮನೆ ಬರಬಹುದು ಎಂದು ಕಾಣುತ್ತದೆ. ಆದ್ದರಿಂದ ಮನೆಗಳನ್ನು ಕಟ್ಟಿಸುವ ಕಾರ್ಯಕ್ರಮಕ್ಕೆ 5 ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಸಾಲುವುದಿಲ್ಲ. ಇದನ್ನು ಹೆಚ್ಚು ಮಾಡಬೇಕು. ಇದಕ್ಕೆ ಕಾರಣವೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮಧ್ಯಮವರ್ಗದ ಜನ ಮತ್ತು ಹಿಂದುಳಿದ ವರ್ಗದ ಜನ, ಕೂಲಿಗಾರರು ಬಹಳ ಕಷ್ಟದಿಂದ ನರಳುತ್ತಿದ್ದಾರೆ. ಅವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕಾದರೆ ಈಗ ಈ ಕಾರ್ಯಕ್ರಮಕ್ಕೆ ಒದಗಿಸಿರುವ ಹಣವನ್ನು ಎರಡು ಪಟ್ಟು ಮಾಡಬೇಕು, ಪ್ರತಿವರ್ಷ ಪ್ರತಿಯೊಂದು ಹಳ್ಳಿಯಲ್ಲಿಯೂ 5 ಮನೆಗಳನ್ನಾದರೂ ಕಟ್ಟಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈ ಕಾರ್ಯಕ್ರಮದ ಬಗ್ಗೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಚುನಾವಣಾ ಘೋಷಣೆಯಲ್ಲಿ ಹೇಳಿದಂತಹ ಈ ಒಂದು ಕಾರ್ಯವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ ಎಂದು ಶ್ಲಾಘನೆ ಮಾಡಿದ್ದಾರೆ. ಅದೇರೀತಿ ಸರ್ಕಾರದವರು ಇದನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು, ಮಾನ್ಯ ಅರ್ಥ ಮಂತ್ರಿಗಳು ಈ ಮನೆಗಳನ್ನು ಕಟ್ಟುವ ಕಾರ್ಯಕ್ರಮಕ್ಕೆ 10 ಕೋಟಿ ರೂಪಾಯಿಗಳನ್ನು ಒದಗಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಹಾಗೆ ಯೋಜನೆಗಳನ್ನು ಹಾಕಿಕೊಂಡು ಅದಕ್ಕೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕೆಂದಿದ್ದಾರೆ ಎನ್ನುವ ವಿಚಾರವನ್ನು, ಮತ್ತು ಯಾವ ಯಾವ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದಿದ್ದಾರೆ ಎಂಬುದನ್ನು ಆಯವ್ಯಯ ಪತ್ರದಲ್ಲಿ ಕೊಟ್ಟಿದ್ದಾರೆ. ಆದರೆ ಈ ಯೋಜನೆಗಳನ್ನು ಕೆಲವು ಉಪಯುಕ್ತವಾದ ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಆದ್ದರಿಂದ ಈಗ ಸರ್ಕಾರದವರು ಏನು ನೀರಾವರಿ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಇದಕ್ಕಿಂತ ಹೆಚ್ಚಿನ ರೀತಿಯಲ್ಲಿ ನೀರಾವರಿ ಯೋಜನೆಗಳ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ನಾನು ಈ ಸಂಧರ್ಭದಲ್ಲಿ ಹೇಳುಬಯಸುತ್ತೇನೆ. ಇದರಲ್ಲಿ ಮಲೆನಾಡಿನಲ್ಲಿ

ಮಾಡತಕ್ಕ ಕೆಲವು ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ರತಕ್ಕ ಕುಮುದ್ವತಿಯ ಬಗ್ಗೆ ಸಾಕಷ್ಟು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೂ ಅದರ ಬಗ್ಗೆ ನಿಧಾನವಾದ ಕಾರ್ಯಕ್ರಮ ನಡೆದಿದೆ. ಮಲೆನಾಡಿನ ಕಲವು ಪ್ರದೇಶಗಳಲ್ಲಿ ರತಕ್ಕ ಕೆರೆಗಳಲ್ಲಿ ಹೂಳು ತುಂಬಿದೆ. ಅಂತಹ ಪ್ರದೇಶಗಳ ಬಗ್ಗೆ ಹೆಚ್ಚಿನ ಕ್ರಮ ತೆಗೆದುಕೊಂಡು ಅವುಗಳ ಅಭಿವೃದ್ಧಿಯ ವಿಚಾರದಲ್ಲಿ ಬಜೆಟ್ಟಿನಲ್ಲಿ ಹಣವನ್ನು ಮೀಸಲಾಗಿಟ್ಟು ಆ ಒಂದು ಐಟಂನ್ನು ಅವರ ಕಾರ್ಯಕ್ರಮದಲ್ಲಿ ಸೇರಿಸಬೇಕಾಗಿತ್ತು. ಅರ್ಥಮಂತ್ರಿಗಳು ಯಾವ ಕಾರಣದಿಂದ ಅದನ್ನು ಕೈಬಿಟ್ಟಿದಾರೋ ನನಗೆ ಅರ್ಥವಾಗುತ್ತಾ ಇಲ್ಲ. ಆದ್ದರಿಂದ ಮಲೆನಾಡು ಪ್ರದೇಶಗಳಲ್ಲಿ ರತಕ್ಕ ಕೆರೆಗಳಲ್ಲಿ ಹೂಳನ್ನು ತೆಗೆಸುವುದಕ್ಕಾಗಿ ಹೆಚ್ಚಿಗೆ ಹಣವನ್ನು ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಬೇಕು.

4.00 P.M

ಇನ್ನು ಕನಿಷ್ಟ ಅಗತ್ಯವಾದಂಥ ಕಾರ್ಯಕ್ರಮಗಳು ಅಂದರೆ, ಶಿಕ್ಷಣ ಮತ್ತು ಕುಡಿಯುವನೀರಿನ ಸೌಲಭ್ಯಗಳನ್ನು ಒದಗಿಸುವುದು. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ನನ್ನ ಕೆಲವು ಮಿತ್ರರು ಹಾಗೂ ಹಿರಿಯ ಸದಸ್ಯರು ಶಿಕ್ಷಣದ ಮಟ್ಟ ಬಹಳ ಕೆಳಮಟ್ಟದಲ್ಲಿದೆ, ಇದಕ್ಕೆ ಕಾರಣ ಶಿಕ್ಷಕರದು ಅಂದರೆ ಇದು ಅವರ ಒಬ್ಬರ ಪ್ರಶ್ನೆಯಲ್ಲ. ಇರತಕ್ಕ ಪೋಷಕವರ್ಗದವರೂ ಸಹ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಹಿಂದೆ ಒಂದು ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಸರ್ಕಾರದವರು ಕಡ್ಡಾಯ ಮಾಡಬೇಕೆಂದು ಯೋಜನೆ ಹಾಕಿದಾಗ, ಕಡ್ಡಾಯ ಶಿಕ್ಷಣ ಹೇಗಿರಬೇಕೆಂಬುದು ಶಿಕ್ಷಕರಿಗೂ ಹಾಗೂ ಪೋಷಕರಿಗೂ ಗೊತ್ತಿಲ್ಲ. ಕೆಲವು ಕಡೆಗಳಲ್ಲಿ ಕಡ್ಡಾಯ ಶಿಕ್ಷಣವೆಂದರೆ ನಾಲ್ಕನೆಯ ತರಗತಿ ವರೆಗೆ ಓದಲಿಕ್ಕೆ, ಬರೆಯಲಿಕ್ಕೆ ಬಂದರೆ ಸಾಕು, ಬರೀ ಬಜೆಟ್ಟಿನಲ್ಲಿ ಪಾಸ್ ಮಾಡತತಕ್ಕಂಥ ಒಂದು ನಿರ್ಣಯವೆಂದು ತಿಳಿದುಕೊಂಡಿದ್ದಾರೆ, ಆದ್ದರಿಂದ ಪ್ರೈಮರಿ ಶಾಲೆಯ ಹಂತದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ನರ್ಸರಿ ಶಾಲೆಯನ್ನು ಕೂಡಲೆ ಪ್ರಾರಂಭಿಸಿದರೆ ನಿಜವಾಗಿಯೂ ಶಿಕ್ಷಣಾಭಿವೃದ್ಧಿಯಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಇನ್ನು ಕುಡಿಯುವ ನೀರಿನ ಬಾವಿ ಬಗ್ಗೆ ಈ ಸರ್ಕಾರ ಪೂರ್ಣ ಭರವಸೆಯನ್ನು ಕೊಟ್ಟಿದೆ. ಆ ರೀತಿಯಾಗಿ ಭರವಸೆಯನ್ನು ಕೊಟ್ಟರೂ ಸಹ ಇದನ್ನು ಈಡೇರಿಸುವ ಕಾರ್ಯ ಏನಿದೆಯೋ ಆ ಕಾರ್ಯವನ್ನು ತಾಲ್ಲೂಕು ಮಟದಲ್ಲಿರತಕ್ಕ ಅಧಿಕಾರವರ್ಗದವರೇ ಬಹಳ ನಿಧಾನವಾದ ರೀತಿಯಲ್ಲಿ ಯಾವುದೇ ಒಂದು ಧ್ಯೇಯವಾನನ್ನು ಇಲ್ಲದಹಾಗಿ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಸರ್ಕಾರ ಅತಿ ತೀವ್ರವಾಗಿ ಕುಡಿಯುವ ನೀರಿನ ಬಾವಿಗಳ ನಿರ್ಮಾಣದ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಉದ್ಯಮಗಳ ಬಗ್ಗೆ ಹೇಳುವುದಾದರೆ, ಮಾನ್ಯ ಅರ್ಥಸಚಿವರು ಮೈಸೂರು ಐರನ್ ಆಂಡ್ ಸ್ಟೀಲ್, ಲಿಮಿಟೆಡ್, ಭಧ್ರಾವತಿ, ಇದರ ಉತ್ಪಾದನೆ ಬಹಳವಾಗಿದೆಯೆಂದು ಶ್ಲಾಘನೆ ಮಾಡಿದ್ದಾರೆ. ಅದು ಒಳ್ಳೆಯದು. ಇಲ್ಲಿ ರೈತರಿಗೆ ಬೇಕಾಗುವ ಉಪಕರಣಗಳು ಮತ್ತು ಸಣ್ಣ ಕೆಲಸಗಾರರಿಗೆ ಬೇಕಾದಂಥ ಉಪಕರಣಗಳು ಅಲ್ಲಿ ದೊರೆಯುತ್ತಾ ಇಲ್ಲ. ಇದಲ್ಲದೆ ಆರ್ಖಾನೆಯಲ್ಲಿ ಕೆಲಸಗಾರರಲ್ಲಿ ಹೆಚ್ಚಿನ ರೀತ್ಯ ಒಂದು ತಾರತಮ್ಯವನ್ನು ಮಾಡುತ್ತಿದ್ದಾರೆ. ಈ ರೀತಿ ಮಾಡುವುದಕ್ಕೆ ಕಾರಣವೇನೆಂದರೆ, ಅಲ್ಲಿ ಯಾವುದಾದರೂ ಒಂದು ನೌಕರಿಗೆ ಒಬ್ಬರನ್ನು ನೇಮಕಮಾಡಬೇಕಾದರೂ, ಅಥವಾ ಒಬ್ಬ ನೌಕರನಿಗೆ ಒಂದು ಬಡ್ತಿ ಮುಂತಾದ ಸೌಕರ್ಯಗಳನ್ನು ಕೊಡಬೇಕೆಂದರೆ, ಅದರ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಇದೆಯೋ ಇಲ್ಲವೇ ಎಂಬ ಬಗ್ಗೆ ಒಂದು ಸಂಶಯ ಬಂದಿದೆ. ಆದ್ದರಿಂದ ಅಲ್ಲಿ ಇನ್ನು ಮುಂದಾದರೂ ಇವೆಲ್ಲವನ್ನೂ ಸರಿಯಾದ ರೀತಿಯಲ್ಲಿ ಯಾವ ಒಂದು ತಾರತಮ್ಯ ಇಲ್ಲದೆ ನಡೆಸಿಕೊಂಡು ಹೋಗುವ ರೀತಿಯಲ್ಲಿ ಸರ್ಕಾರ ಅವರಿಗೆ ಸೂಕ್ತ ತಿಳುವಳಿಕೆಯನ್ನೂ ಮತ್ತು ಸೂಚನೆಯನ್ನೂ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ವೈದ್ಯಕೀಯ ವಿಷಯದಲ್ಲಿ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಇನ್ನು ಮುಂದೆ ಪ್ರತಿಯೊಂದು ತಾಲ್ಲೂಕು ಮತ್ತು ಗ್ರಾಮದ ಮಟ್ಟದಲ್ಲಿ ರತಕ್ಕ ಆರೋಗ್ಯ ಕೇಂದ್ರಗಳನ್ನು ತಾಲ್ಲೂಕು ಬೋರ್ಡ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಿ ಸರ್ಕಾರದವರೇ ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ. ಇದನ್ನು ನಾನು ನನ್ನ ತುಂಬುಹೃದಯದಿಂದ ಸ್ವಾಗತಿಸುತ್ತೇನೆ. ಹಾಗೂ ವಂದಿಸುತ್ತೇನೆ. ಇದರ ಜೊತೆಯಲ್ಲಿ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಪ್ರತಿಯೊಂದು ಹೆಲ್ತ್ ಯೂನಿಟ್ಟಿನಲ್ಲಿ ಐದೈದು ಹಾಸಿಗೆಗಳು

(ಶ್ರೀ ಕೆ. ಯಂಕಪ್ಪ)

ಇರತಕ್ಕ ವ್ಯವಸ್ಥೆಯನ್ನು ಈ ವರ್ಷ ಮಾಡಬೇಕು. ಹಾಗೆ ಮಾಡಿದರೆ ನಮ್ಮ ಹಳ್ಳಿಯ ಜನರಿಗೆ ಬಹಳವಾಗಿ ಅನುಕೂಲವಾಗುತ್ತದೆ. ಬಡ ಕೂಲಿಗಾರರಿಗೂ ಅನುಕೂಲ ವಾಗುತ್ತದೆ. ಇವರ ಜೊತೆಯಲ್ಲಿ ಕೊಡತಕ್ಕ ಔಷಧಿಗಳಿಗೆ ಸುಮಾರು ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಒಂದು ವರ್ಷಕ್ಕೆ ಮಾತ್ರ ಕೊಟ್ಟರೆ ಏನೇನು ಸಾಲದು. ಏಕೆಂದರೆ, ನಾನು ತಿಳಿದಿರುವ ಹಾಗೆ ಈಗ ಅನೇಕ ಔಷಧಿಗಳ ಬೆಲೆ ವಿಪರೀತವಾಗಿ ಆಗಿದೆ. ಕೇವಲ ಎರಡೂವರೆ ಸಾವಿರ ರೂಪಾಯಿಗಳಷ್ಟು ಔಷಧಿ ಕೇವಲ ಒಂದು ತಿಂಗಳಿಗೇ ಅಥವಾ ಒಂದೂವರೆ ತಿಂಗಳಿಗೆ ಮಾತ್ರ ಆಗುತ್ತದೆ. ಉಳಿದ ಹತ್ತೂವರೆ ತಿಂಗಳು ಯಾವ ರೀತಿಯಲ್ಲಿ ಔಷಧಿಗಳನ್ನು ಕೊಡಬೇಕು ? ಆಗ ಆಸ್ಪತ್ರೆಯ ಬಾಗಿಲನ್ನು ಮುಚ್ಚಬೇಕಾದ ಪರಿಸ್ಥಿತಿ ಒದಗಿಬರುತ್ತದೆ. ಈ ವಿಚಾರದಲ್ಲಿ ಮಾನ್ಯ ಆರ್ಥಿಕ ಸಚಿವರನ್ನು ಕೇಳಿದಾಗ ಅದನ್ನು ಮಾಡಿಕೊಡುತ್ತೇನೆಂದು ಹೇಳಿದರು. ಆದರೆ ಈ ಸಂದರ್ಭದಲ್ಲಿ ಇದನ್ನು ಪ್ರಸ್ತಾಪ ಮಾಡಲಿಲ್ಲ. ಆದ್ದರಿಂದ ದಯಮಾಡಿ ಇದನ್ನು 5 ಸಾವಿರ ರೂಪಾಯಿಗಳವರೆಗಾದರೂ ಹೆಚ್ಚಿಸಬೇಕು. ಪ್ರತಿಯೊಂದು ಹೆಲ್ತ್ ಯೂನಿಟ್ಟಿನಲ್ಲಿಯೂ ಐದ್ಹತ್ತು ಹಾಸಿಗೆಗಳು ಇರುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಸಮಾಜ ಕಲ್ಯಾಣದ ವಿಷಯ. ಇದರಲ್ಲಿ 15 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೂ ಈಗ ಅದನ್ನು 2 ಕೋಟಿ ರೂಪಾಯಿಗಳವರೆಗೂ ಹೆಚ್ಚಿಸಿದ್ದಾರೆ. ಆದರೂ ಇದು ಬಹಳ ಕಡಿಮೆ. ಈ ಎರಡು ಕೋಟಿ ರೂಪಾಯಿಗಳಲ್ಲಿ ಯಾವರೀತಿಯಾದಂಥ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ನಾನು ಇವತ್ತು ಆರ್ಥಿಕ ಸಚಿವರನ್ನು ಕೇಳಬೇಕಾಗಿದೆ. ಏಕೆಂದರೆ ಸಮಾಜ ಕಲ್ಯಾಣದಲ್ಲಿ ಹಲವಾರು ರೀತಿಯಾದಂಥ ವ್ಯವಸ್ಥೆಯನ್ನು ಹಿಂದುಳಿದ ವಂಗಡಗಳವರಿಗೆ ಮಾಡಬೇಕಾಗಿದೆ. ತಾಲ್ಲೂಕು ಬೋರ್ಡ್ ಮಂಡಲಿ ಸೇಕಡ 18 ರಷ್ಟು ಭಾಗವನ್ನು ಅಂದರೆ ಅವರ ವರಮಾನದಲ್ಲಿ ಕೇವಲ 20-30 ಸಾವಿರ ರೂಪಾಯಿಗಳನ್ನು ಖರ್ಚುಮಾಡಬಹುದು. ಇದರಲ್ಲಿ ವಿದ್ಯೆ ಕಲಿಸುವ ಬಗ್ಗೆ ಹೆಚ್ಚಿಗೆ ಆದ್ಯತೆ ಕೊಡಬೇಕು. ಆದ್ದರಿಂದ ಈ ಬಾಬಿನಲ್ಲಿ ಇನ್ನೂ ಎರಡೂವರೆ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಪ್ರೊವೈಡ್ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದಿಂದ ಕೊಡತಕ್ಕ ಸವಲತ್ತುಗಳು ಹರಿಜನ ಗಿರಿಜನರಿಗೆ ಸಾಕಷ್ಟು ಸುಲಭವಾಗಿ ತಲುಪುವ ವ್ಯವಸ್ಥೆ ಆಗಬೇಕು

ಇನ್ನೂ ಗ್ರಾಮಾಂತರ ನೀರು ಸರಬರಾಜು ಯೋಜನೆ. ಹಳ್ಳಿಗಳಲ್ಲಿ ಸುಮಾರಾಗಿ ಪಂಚಾಯಿತಿಗಳು ಸರಿಯಾದ ರೀತಿಯಿಂದ ಕೆಲಸಮಾಡುತ್ತಾ ಇಲ್ಲ. ಹಣವೇ ಇಲ್ಲದೇ ಇರತಕ್ಕ ಕೆಲವು ಪಂಚಾಯಿತಿಗಳೂ ಸಹ ಇವೆ. ಅಲ್ಲಿರತಕ್ಕವರಿಗೆ ವಿಲೇಜ್ ಅಕೌಂಟೆಂಟ್ಸ್ ಎಂಬುದಾಗಿ ಕರೆಯುತ್ತಾರೆ. ಅವರೂ ಸಹ ಸರಿಯಾದ ರೀತಿಯಲ್ಲಿ ಗ್ರಾಮಪಂಚಾಯಿತಿಗಳನ್ನು ನೋಡಿಕೊಳ್ಳದೆ, ಅಲ್ಲಿ ವಸೂಲಾಗತಕ್ಕ ಹಣವೂ ಸರಿಯಾಗಿ ಬಾರದೇ ಇರುವುದರಿಂದ ಆ ಊರಿನ ಜನತೆಗೆ ನೀರು ಕೊಡುವುದಕ್ಕೂ ಬಹಳ ಕಷ್ಟವಾಗುತ್ತಿದೆ. ಮಾನ್ಯ ಶ್ರೀ ಮಲ್ಲಿಕಾರ್ಜುನಸ್ವಾಮಿಯವರನ್ನು ಇವತ್ತು ಬೆಳಿಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದಕ್ಕೆ ಅತಿ ತೀವ್ರತರವಾದ ರೀತಿಯಲ್ಲಿ ಉತ್ತರಕೊಟ್ಟರು ಪಂಚಾಯಿತಿಯಿಂದ ಬರತಕ್ಕ ಆದಾಯವೇನಿದೆ ಅದನ್ನು ನಿಮ್ಮ ಯಂತ್ರದಿಂದಲೇ ಸರಿಯಾಗಿ ಪ್ರತಿವರ್ಷವೂ ವಸೂಲು ಮಾಡುವಂತೆ ಏರ್ಪಾಡು ಮಾಡಬೇಕು. ಪಂಚಾಯಿತಿಯವರು ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ಅನುವು ಮಾಡಿಕೊಡಬೇಕು. ಸೇಕಡ 10ರಷ್ಟು ವರಮಾನ ಕೊಡುವುದಕ್ಕೆ ಆಗದೇ ಇದ್ದರೆ ಜನತೆಗೆ ನೀರು ಸಪ್ಲೈ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೀರಿ. ಅದಕ್ಕೆ ನನ್ನ ಒಂದು ಸಲಹೆಯೇನೆಂದರೆ, ಯಾವ ಅಶಕ್ತ ಗ್ರಾಮಪಂಚಾಯಿತಿಗಳಿಯೋ ಅಂತಹವುಗಳಿಗೆ ತಾವೇ ಬಾವಿಗಳನ್ನು ತೆಗೆಸಿಕೊಡುವುದಕ್ಕೆ ಪ್ರಯತ್ನಮಾಡಬೇಕು. ಅಷ್ಟು ಅಲ್ಲದೆ ಸೇಕಡ 10 ರಷ್ಟು ವರಮಾನ ಕೊಡಬೇಕೆಂದು ಏನು ಮಾಡಿದ್ದೀರಿ ಇದನ್ನು ಹಿಂದುಳಿದ ವಂಗಡಗಳು ಇರುವ ಗ್ರಾಮಗಳಿಗೆ ಸೇರಿದಂತಹ ಪ್ರದೇಶಗಳಿಗೆ ಪೂರ್ಣವಾಗಿ ವಿನಾಯಿತಿ ಕೊಡಬೇಕು. ನ್ಯಾಷನಲ್ ರೂರಲ್ ವಾಟರ್ ಸಪ್ಲೈಯವರು ಕೇಳುವಂತಹ ಸೇಕಡ 10 ರಷ್ಟು ವರಮಾನವನ್ನು ಅಲ್ಲಿಯೂ ಸಹ ತೆಗೆದುಕೊಳ್ಳದೆ ಇರುವ ಹಾಗೆ ಮಾಡಬೇಕು.

ಇನ್ನು ಕನ್ನಡ ಭಾಷಾಭಿವೃದ್ಧಿಗೆ 13 ಲಕ್ಷ ರೂಪಾಯಿಗಳನ್ನು ಅರ್ಥ ಸಚಿವರು ಬಜೆಟ್ಟಿನಲ್ಲಿ ಪ್ರೊವೈಡ್ ಮಾಡಲಾಗಿದೆಯೆಂದು ಹೇಳಿದರು. ನಾನು ಹೇಳುವುದೇನೆಂದರೆ, ಇನ್ನೂ ಹೆಚ್ಚಿಗೆ ಈ ಬಾಬಿನಲ್ಲಿ ಹಣವನ್ನೊದಗಿಸಿ ಆದಷ್ಟು ಶೀಘ್ರದಲ್ಲಿ ಕನ್ನಡ ಭಾಷಾಭಿವೃದ್ಧಿಯನ್ನು ಮಾಡಬೇಕೆಂದು ಸಲಹೆಮಾಡಲು ನಾನು ಅರ್ಥಸಚಿವರಲ್ಲಿ ಭಿನ್ನವಿಸಿಕೊಳ್ಳುತ್ತೇನೆ. 13 ಲಕ್ಷ ರೂಪಾಯಿಗಳು ಕೇವಲ ಕನ್ನಡ ಟೈಪ್‌ರೈಟರುಗಳು ಮತ್ತು ಇತರೇ ಸಲಕರಣೆಗಳನ್ನು ತೆಗೆದುಕೊಳ್ಳಲು ಸಾಕಾಗುವುದಿಲ್ಲ. ಆದ್ದರಿಂದ ಈ ಬಾಬಿನಲ್ಲಿ ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸಿ ಅತಿ ಶೀಘ್ರದಲ್ಲಿಯೇ ಇದಕ್ಕೆ ತಕ್ಕ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿಶೇಷವಾಗಿ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಬಡ್ಜೆಟ್ಟಿನಲ್ಲಿ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಬಡ್ಜೆಟ್ಟಿನಲ್ಲಿ ಬಹಳ ಕಡಿಮೆ ಹಣವನ್ನು ಒದಗಿಸಿದ್ದಾರೆ. ಇದೇ ರೀತಿ ಮಲೆನಾಡಿನ ಬಗ್ಗೆ ಕಡಿಮೆ ಪ್ರಮಾಣದಲ್ಲಿ ಹಣವನ್ನು ಒದಗಿಸಿದರೆ ಮಲೆನಾಡಿನ ಅಭಿವೃದ್ಧಿ ಆಗುವುದಿಲ್ಲ. ಮಲೆನಾಡಿನ ಜನ ಅಭಿವೃದ್ಧಿಗೆ ಬರಬೇಕಾದರೆ, ಮಲೆನಾಡು ಪ್ರದೇಶ ಅಭಿವೃದ್ಧಿಯಾಗಬೇಕು. ಅದ್ದರಿಂದ ಮಲೆನಾಡಿನಲ್ಲಿ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು. ಲೋಕೋಪಯೋಗಿ ಶಾಖೆಯ ಮಂತ್ರಿಗಳು ಮಲೆನಾಡಿನಲ್ಲಿರತಕ್ಕ ರಸ್ತೆಗಳನ್ನೂ, ಕೆರೆಗಳನ್ನೂ, ಸೇತುವೆಗಳನ್ನೂ ಮಾಡತಕ್ಕ ಕೆಲಸಗಳನ್ನು ತೆಗೆದುಕೊಳ್ಳದೇ ಹೋದರೆ ಮಲೆನಾಡಿನ ಜನ ಅಂತರಿಕ್ಷದಲ್ಲಿ ಓಡಾಡಬೇಕಾಗುತ್ತದೆ. ಇಂಥಾ ಒಂದು ಪರಿಸ್ಥಿತಿ ಇರುವಾಗ ಸರ್ಕಾರದವರು ಮಲೆನಾಡಿನ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕು. ಯಾವ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೆಲಸಕಾರ್ಯಗಳು ಆಗಿವೆ ಅಲ್ಲಿ ಕೆಲಸಗಳನ್ನು ಸ್ಥಗಿತ ಮಾಡಿ ಎಲ್ಲಿ ಕಡಿಮೆ ಕೆಲಸಗಳು ಆಗಿವೆ ಅಲ್ಲಿಗೆ ಹೆಚ್ಚಿನ ಹಣವನ್ನು ಕೊಟ್ಟು ಎಲ್ಲಾ ಪ್ರದೇಶಗಳನ್ನು ಸರಿಸಮಾನ ಮಾಡುವ ಹಾಗೆ ಆಯವ್ಯಯ ಪತ್ರದಲ್ಲಿ ಹಣವನ್ನು ಒದಗಿಸಿದರೆ ಪ್ರತಿಯೊಂದು ಜಿಲ್ಲೆಯ ಜನತೆಗೂ ಅನುಕೂಲ ದೊರೆಯುತ್ತದೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ). ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಈ ಸಭೆಯಲ್ಲಿ ಮಂಡಿಸಿರತಕ್ಕ ಸಮಾಜವಾದದ ಆಯವ್ಯಯ ಪತ್ರದ ಬಗ್ಗೆ ಇವೊತ್ತು ನನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ನಾನು ನಿಂತಿದ್ದೇನೆ. ಈ ಸಮಾಜವಾದದ ಆಯವ್ಯಯ ಹೇಗಿದೆ ಎಂದರೆ 'ಬಚ್ಚಲ ನೀರು ತಿಳಿ ಇದ್ದರೇನು? ಸಲ್ಲದಾ ಹೊನ್ನು ಮತ್ತೆಯಲ್ಲಿದ್ದರೇನು? ಆಕಾಶದ ಮಾವಿನಫಲವೆಂದರೇನು? ಕೊಯ್ಯಲಿಲ್ಲಾ ಮೆಲ್ಲಲಿಲ್ಲಾ! ಇಂತಿಪ್ಪುದಯ್ಯಾ ಇಂದಿರಾ ಅರಸು ವಾದ. ಬಚ್ಚಲ ನೀರು ಎಷ್ಟು ತಿಳಿ ಇದ್ದರೂ ಕೂಡ ಅದನ್ನು ಕುಡಿಯುವುದಕ್ಕೆ ಯಾರು ಇಷ್ಟಪಡುತ್ತಾರೆ? ಸಲ್ಲದಾ ಹೊನ್ನು ಎಂದರೆ ಕೌಂಟರ್‌ಫೀಟ್ ನೋಟ್ಸ್ ಎಷ್ಟು ಇದ್ದರೂ ಏನು ಪ್ರಯೋಜನ? ಆಕಾಶದಲ್ಲಿ ಮಾವಿನ ಹಣ್ಣು ಎಷ್ಟು ಇದ್ದರೆ ತಾನೆ ಏನು ಪ್ರಯೋಜನ? ಅದನ್ನು ಕೊಯ್ದು ತಿನ್ನುವುದಕ್ಕೆ ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಮಾನ್ಯ ಅರ್ಥಸಚಿವರಾದ ಶ್ರೀಮಾನ್ ಘೋರ್ಪಡೆಯವರು ಮಂಡಿಸಿರತಕ್ಕ ಆಯವ್ಯಯದಲ್ಲಿ ಜನತೆಗೆ ತೋರಿಸಿರುವ ಆಶೋತ್ತರಗಳನ್ನು ಪ್ರತಿಬಿಂಬಿಸುವ ಬಡ್ಜೆಟ್ಟಿನ ಮಾದರಿಯಲ್ಲವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಹೌಸಿಂಗ್ ಬೋರ್ಡಿನಲ್ಲಿ 5 ಕೋಟಿ ರೂಪಾಯಿಗಳನ್ನು ತೊಡಗಿಸಿ ಮನೆ ಇಲ್ಲದೇ ಇರುವವರಿಗೆ ಮನೆಗಳನ್ನು ಒದಗಿಸುವುದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ, ಮಂತ್ರಿಗಳು ಚುನಾವಣೆಯ ಸಂದರ್ಭದಲ್ಲಿ ಜನಗಳಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದರೋ ಆ ಆಶ್ವಾಸನೆಗಳನ್ನು ಈಡೇರಿಸತಕ್ಕ ದಿಶೆಯಲ್ಲಿ ಸರ್ಕಾರದವರು ಅಡಿ ಇಡುತ್ತಿದ್ದಾರೆ ಎನ್ನತಕ್ಕಂಥಾ ಅಭಿಪ್ರಾಯವನ್ನು ಆ ಕಡೆ ಇರುವ ಕೆಲವು ಗೆಳೆಯರು ವ್ಯಕ್ತಪಡಿಸಿದರು. ಈ ಸಭೆ ಪ್ರಾರಂಭ ಆದಾಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ನಾವು ಯಾರಿಗೂ ಮುಫತ್ತಾಗಿ ಮನೆಗಳನ್ನು ಕಟ್ಟಿಸಿಕೊಡುವುದಿಲ್ಲ, ಯಾರಿಗೆ ಮನೆಯನ್ನು ಕಟ್ಟಬೇಕೋ ಅವರು ತಮ್ಮ ಭಾಗದ ಹಣವನ್ನು ಕೊಟ್ಟು ಅದರ ಜೊತೆಗೆ ಸ್ಥಳೀಯ ಸಂಸ್ಥೆಗಳು, ತಾಲ್ಲೂಕು ಅಭಿವೃದ್ಧಿ ಮಂಡಲಿಗಳು, ಗ್ರಾಮ ಪಂಚಾಯಿತಿಗಳು ಇದರಲ್ಲಿ ಭಾಗವಹಿಸಬೇಕು, ಅದರಲ್ಲಿ ಅವರ ಪಾತ್ರ ಇರಬೇಕು, ಅಂಥಾ ಒಂದು ಯೋಜನೆಯನ್ನು ಅಳವಡಿಸುವುದಕ್ಕೆ ನಾವು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ನಾನಾದರೂ ಯೋಚನೆ ಮಾಡುವುದಾದರೆ 5 ಕೋಟಿ ರೂಪಾಯಿಗಳಲ್ಲಿ ಮನೆ ಇಲ್ಲದೇ ಇರುವವರಿಗೆ ಮನೆಯನ್ನು ಒದಗಿಸತಕ್ಕ ಯೋಜನೆ ಏನಿದೆ ಇದನ್ನು ಆಕಾಶದಲ್ಲಿರುವ ಮಾವಿನ ಹಣ್ಣಿಗೆ ಹೋಲಿಸಿದರೆ ತಪ್ಪಾಗುವುದಿಲ್ಲ. ಮಾನ್ಯ ಹಣಕಾಸಿನ ಸಚಿವರಾದ ಶ್ರೀಮಾನ್ ಘೋರ್ಪಡೆಯವರು ನಿಜವಾಗಿಯೂ ಕೂಡ ಉತ್ತಮವಾದ ಆಡಳಿತಗಾರರು. ಆದರೆ ಅದನ್ನು ಕಾರ್ಯಗತ ಮಾಡತಕ್ಕವರು ಅಧಿಕಾರಿಗಳು. ಅಧಿಕಾರಿಗಳ ಹಂತದಲ್ಲಿ ಆ ಕೆಲಸವಾಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಬಂದಿದೆ. ಮೊನ್ನೆ ಈ ಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಶ್ರೀಮಾನ್ ಬೈರೇಗೌಡರು ಕೇಳಿದ ಪ್ರಶ್ನೆಗೆ ಮಾನ್ಯ ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು ಉತ್ತರ ಕೊಡುತ್ತಾ ಕೋಲಾರ ಜಿಲ್ಲೆಯಲ್ಲಿ ಹರಿಜನ ಗಿರಿಜನರಿಗಾಗಿ ಕಟ್ಟಿಸಿದ 100 ಮನೆಗಳ ಪೈಕಿ 60 ಮನೆಗಳು ಬಿದ್ದು ಹೋಗಿವೆ ಎಂದು ಹೇಳಿದರು. ಇದು ನಿಜವಾಗಿಯೂ ಹಾಸ್ಯಾಸ್ಪದವಾದ ವಿಷಯ.

ಉಪಾಧ್ಯಕ್ಷರು.—ಆ ಮನೆಗಳನ್ನು ಯಾವಾಗ ಕಟ್ಟಿದ್ದು, ಯಾವ ಹಳ್ಳಿಯಲ್ಲಿ ಕಟ್ಟಿದ್ದರು, ಎಷ್ಟು ಮನೆಗಳು ಬಿದ್ದುಹೋಗಿವೆ ಎನ್ನುವ ಮಾಹಿತಿಯನ್ನು ಮಾನ್ಯ ಸದಸ್ಯರು ಕೊಡಬೇಕು.

ಶ್ರೀ ಸಿ. ಬೈರೇಗೌಡ.—ಮೊನ್ನೆ ಮಂತ್ರಿಗಳು ಏನು ಉತ್ತರವನ್ನು ಕೊಟ್ಟಿದ್ದಾರೆಯೋ ಅದನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಈ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಸಮಾಜವಾದದ ಹಾದಿಯಲ್ಲಿ ಮಾನ್ಯ ಅರ್ಥ ಸಚಿವರು ಯಾವ ಗುರಿಯನ್ನು ಸಾಧಿಸಬೇಕೆಂದು ಅಪೇಕ್ಷಿಸುತ್ತಾರೆಯೋ ಅದಕ್ಕೆ ಇಮ್ಮಡಿಯಾದ ಆಶೆ ನನಗೆ ಇದೆ. ಜನಗಳು ನೆಮ್ಮದಿಯಿಂದ ಬಾಳುವೆಯನ್ನು ಮಾಡಬೇಕು, ಸುಖಜೀವನವನ್ನು ನಡೆಸಬೇಕು ಎಂಬುದು ಎಲ್ಲರ ಆಶೆ. ಈ ದೃಷ್ಟಿಯಿಂದ ಈಗ ಸರ್ಕಾರದವರು 5 ಲಕ್ಷ ರೂಪಾಯಿಗಳ ಗೃಹನಿರ್ಮಾಣ ಯೋಜನೆಯನ್ನೇನು ಹಾಕಿಕೊಂಡಿದ್ದಾರೆ ಇದು ಕನ್ನಡಿಯ ಗಂಟು ಆಗಬಾರದು ಎಂದು ಜನ ನಿರೀಕ್ಷೆ ಮಾಡುತ್ತಾರೆ. ಈ ಯೋಜನೆ ಫಲಕಾರಿಯಾಗುವ ಯೋಜನೆ ಆಗಬೇಕು. ಕೃಷ್ಣಾ ಮೇಲ್ದಂಡೆಯ ನೀರಾವರಿ ಯೋಜನೆಯಲ್ಲಿ, ಬರಗಾಲ ನಿವಾರಣಾ ಯೋಜನೆಯ ಸಂಬಂಧದಲ್ಲಿ ಸರ್ಕಾರ ವೆಚ್ಚ ಮಾಡಿದ ಹಣದಲ್ಲಿ ಅಧಿಕಾರಿಗಳಿಂದ ದುರುಪಯೋಗವಾಗಿದೆ ಎನ್ನತಕ್ಕಂಥಾದ್ದು ಮನವರಿಕೆಯಾಗಿದೆ. ಆ ಕಡೆಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಈ ಗೃಹನಿರ್ಮಾಣ ಯೋಜನೆ ಆ ರೀತಿ ಆಗಬಾರದು. ಹಾಗೆ ಗಂಟು ಹೊಡೆಯುವುದಕ್ಕೆ ಬದಲು ಆ ಯೋಜನೆಯನ್ನೇ ಕಿತ್ತುಹಾಕಿ ಬಿಡಿ ಎಂದು ಹೇಳುತ್ತೇನೆ. ನಾನು ಒಂದು ಮಾತನ್ನು ತಮಗೆಲ್ಲರಿಗೂ ಸ್ಪಷ್ಟವಾಗಿ ಹೇಳುತ್ತಿದ್ದೇನೆ ಸಮತಾವಾದ ಸಮಾಜದಲ್ಲಿ ಇದೊಂದು ಬಹಳ ಉತ್ತಮವಾದ ಯೋಜನೆ. ಇದನ್ನು ಯಾವರೀತಿ ಮುಂದುವರಿಸಿದರೆ ಇಡೀ ಸಮಾಜಕ್ಕೆಲ್ಲಾ ಕಲ್ಯಾಣವಾಗುತ್ತದೆ ಅನ್ನುವುದನ್ನು ಚಿಂತೆ ಮಾಡಿ ಎಂದು ನಾನು ತಮಗೆ ಹೇಳುತ್ತಿದ್ದೇನೆ. ಅದೇನೋ ಹೇಳುತ್ತಾರಲ್ಲ 'ಆರು ಕೊಟ್ಟನಾದರೂ ಹಾರೆ ಎಂದರೆ ಧೀರ ನಿನಯ್ಯ ಎಂದು ಹೇಳಬೇಕು' ಅನ್ನುವಂತೆ ನಾನು ಊದತಕ್ಕ ಶಂಖವನ್ನು ಊದುತ್ತಿದ್ದೇನೆ. ನಿಮಗೆ ಇಷ್ಟವಿದ್ದರೆ ಕೇಳಿ, ಇಷ್ಟವಿಲ್ಲದಿದ್ದರೆ ಬಿಡಿ. ಈ ಒಂದು ಯೋಜನೆ ಖಂಡಿತವಾಗಿಯೂ ಗ್ರಾಮಾಂತರ ಪ್ರದೇಶದ ಜನರಿಗೆ ಗೃಹದ ಕೊರತೆಯನ್ನು ನೀಗತಕ್ಕಂಥ ಒಂದು ಒಳ್ಳೆಯ ಯೋಜನೆಯಾಗಿದೆ. ಇದಕ್ಕೆ ಸರ್ಕಾರದವರು ತೆಗೆದಿಟ್ಟಿರತಕ್ಕ 5 ಕೋಟಿ ರೂಪಾಯಿ ಏನೇನೂ ಸಾಲದು. ನಾನಾಗಲೇ ಹೇಳಿದಂತೆ ಇದೊಂದು ಉತ್ತಮ ಯೋಜನೆ. ಇದರ ಮೂಲಕ ನಿಮಗೆ ದೇಶದಲ್ಲಿರತಕ್ಕ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಳ್ಳುವುದಕ್ಕೆ ಒಂದು ರಾಜಮಾರ್ಗ. ಇಂಥ ಯೋಜನೆಯಲ್ಲಿ ಹೆಚ್ಚು ಹಣವನ್ನು ತೊಡಗಿಸಿ ಎಂದು ನಾನು ತಮಗೆ ಕಿವಿಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ 5 ಕೋಟಿ ರೂಪಾಯಿ ಇಟ್ಟರೆ ಇದರಲ್ಲಿ ನೀವು ಯಾವ ಹಳ್ಳಿಗೆ ಯಾವ ತಾಲ್ಲೂಕಿಗೆ ಎಂದು ಹಣವನ್ನು ಕೊಡುತ್ತೀರಾ? ಅಥವಾ ನಿಮ್ಮ ಉದ್ದೇಶ ಈ ದಿವಸ ನಿಮ್ಮ ಅಭ್ಯರ್ಥಿಗಳು ಎಲ್ಲಿ ಚುನಾವಣೆಗೆ ನಿಂತು ಗೆದ್ದು ಬಂದಿದ್ದಾರೋ ಅಂಥ ಕ್ಷೇತ್ರಗಳಿಗೆ ಮಾತ್ರ ಈ ಬಾಬಿನಲ್ಲಿ ಹಣವನ್ನು ಒದಗಿಸಬೇಕೆಂದಿದ್ದೀರೋ ಅಥವಾ ನಿಮ್ಮ ಹಿಂದೆ ಯಾರು ಬಾಲಬಡಿದುಕೊಂಡು ತಿರುಗಾಡುತ್ತಿದ್ದಾರೆ ಅಂಥವರಿಗೆ ಅಥವಾ ಅವರು ಹೇಳಿದವರಿಗೆ ಮಾತ್ರ ಹಣವನ್ನು ಒದಗಿಸುತ್ತೀರೋ ಯಾವುದೂ ಗೊತ್ತಾಗುವುದಿಲ್ಲ. ಆದರೆ ಮಾನ್ಯ ಘೋರ್ಪಡೆಯವರು ಸ್ವಭಾವತಃ ಅಂತಹ ವ್ಯಕ್ತಿಗಳಲ್ಲ. ಆದರೂ ಅವರನ್ನು ಹಿಂದಕ್ಕೆ ಮುಂದಕ್ಕೆ ಎಳೆಯತಕ್ಕಂಥ ಅದೃಶ್ಯ ವ್ಯಕ್ತಿಗಳು ಆ ಪಕ್ಷದಲ್ಲಿದ್ದಾರೆ. ಅವರ ಪಕ್ಷದಲ್ಲಿ ಯಾರು ಅಂಥಾ ವ್ಯಕ್ತಿಗಳು ಎಂಬುದು ಆ ಪಕ್ಷದ ವಿಫ್ ಆಗಿರತಕ್ಕ ಶ್ರೀ ಸೂರ್ಯನಾರಾಯಣಗೌಡರಿಗೂ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಆರ್ಥಿಕ ಸಚಿವರಿಗೂ ಚೆನ್ನಾಗಿ ಗೊತ್ತಾಗಿದೆ ಎಂದು ನಮಗೆಲ್ಲರಿಗೂ ಚೆನ್ನಾಗಿ ಮನದಟ್ಟಾಗಿದೆ.

ಇನ್ನು ರಾಜ್ಯದ ನೀರಾವರಿ ಯೋಜನೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆದರೆ ರಾಜ್ಯದ ಕೆಲವು ಭಾಗಗಳಲ್ಲಿ ದೈವದತ್ತವಾದ ನೀರಾವರಿ ಸೌಲಭ್ಯಗಳಿದ್ದರೆ, ಇನ್ನು ಕೆಲವಕ್ಕೆ ಅಂಥಾ ಸೌಲಭ್ಯಗಳು ಇರುವುದಿಲ್ಲ. ಹಾಗೆ ಒಂದು ದೈವದತ್ತವಾದ ನೀರಾವರಿ ಸೌಲಭ್ಯಗಳು ಇಲ್ಲದಿರತಕ್ಕಂಥ ಸ್ಥಳಗಳು ಎಂದರೆ ಉದಾಹರಣೆಗೆ ಹೇಳುವುದಾದರೆ ಚನ್ನರಾಯಪಟ್ಟಣ ಮತ್ತು ನಮ್ಮ ಅರಸೀಕೆರೆ ತಾಲ್ಲೂಕುಗಳು. ಅಲ್ಲಿ ವರ್ಷದಲ್ಲಿ 18 ಇಂಚ್ ಕೂಡ ಮಳೆಯಾಗುವುದಿಲ್ಲ. ಬಾವಿಗಳನ್ನು ತೋಡಿದರೆ 300 400 ಅಡಿ ತೆಗೆದರೂ ನೀರು ಸಿಕ್ಕುವುದಿಲ್ಲ. ಇಂಥಾ ಸ್ಥಳಗಳಿಗೆ ನೀರಾವರಿ ಸೌಲಭ್ಯಗಳ ಅಗತ್ಯ ಬಹಳವಾಗಿರುತ್ತದೆ; ಎಂಬ ಅಂಶವನ್ನು ನಾನು ಸರ್ಕಾರದವರ ಗಮನಕ್ಕೆ ಬಹಳ ಕಳಕಳಿಯಿಂದ ತರುತ್ತಿದ್ದೇನೆ. ಆದರೆ ದುರ್ದೈವದಿಂದ ಇಲ್ಲಿಯತನಕ ಬಂದಿರತಕ್ಕ ಮಂತ್ರಿಗಳಲ್ಲಿ ಯಾರೊಬ್ಬರೂ ಇಂಥಾ ಒಂದು ದುರ್ದೈವದ ಜಾಗಕ್ಕೆ ಸೇರಿದವರು ಮಂತ್ರಿಗಳಾಗಿ ಬಂದಿಲ್ಲ. ಬಂದಿದ್ದರೆ ಅವರಿಗೆ ಇದರ ಕಷ್ಟ ಗೊತ್ತಾಗುತ್ತಿತ್ತು. ಅಪ್ಪಿತಪ್ಪಿ ಬಂದಿರತಕ್ಕವರೆಲ್ಲಾ ನೀರಾವರಿ ಸೌಲಭ್ಯಗಳಿದ್ದ ಜಾಗದಿಂದ ಬಂದವರೇ ಮಂತ್ರಿಗಳಾಗಿ

ದ್ದಾರೆ. ಹಾಗೊಂದುವೇಳೆ ಮಳೆಬಾರದ ಜಾಗದಿಂದ ಬಂದಿದ್ದರೆ ಅವರು ತಮ್ಮ ಒಂದು ಕ್ಷೇತ್ರದ ಕ್ಷೇಮವೇನೋ ಅಷ್ಟಕ್ಕೆ ಮಾತ್ರ ಅವರು ಗಮನಕೊಟ್ಟು ಇನ್ನುಳಿದ ಪ್ರದೇಶಕ್ಕೆ ಅವರು ಮನಸ್ಸನ್ನೇಕೆ ಹರಿಸಲಲ್ಲ. ಆದರೆ ಈ ದಿವಸ ಆಡಳಿತಪಕ್ಷದವರು ಹೇಳುತ್ತಿರುವ ಅವರ ಒಂದು ಸಮಾಜವಾದ ಏನಿದೆ ಅದರಲ್ಲಿ ಇಡೀ ಸಮಗ್ರ ದೇಶದ ಜನತೆ ಈ ಸಮಾಜವಾದದ ಸವಿಯನ್ನು ಉಣ್ಣುವುದಕ್ಕೆ ಅವಕಾಶ ವಾಗುವಂತೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಗಮನ ಹರಿಸಬೇಕಾಗಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಒಟ್ಟಿನಲ್ಲಿ ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತಿರುವು ದೇನೆಂದರೆ ರಾಜ್ಯದಲ್ಲಿ ಎಲ್ಲೆಲ್ಲಿ ನೀರಾವರಿ ಸೌಲಭ್ಯಗಳು ಇರುವುದಿಲ್ಲವೋ ಅಂಥ ಜಾಗಗಳಿಗೆ ಹೆಚ್ಚಿನ ಮಾನ್ಯತೆಯನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹಿಂದೆ ಇದ್ದಂಥ ರಾಜ ಮಹಾರಾಜರುಗಳ ಕಾಲದಲ್ಲಿ ಪ್ರಜೆಗಳ ಕ್ಷೇಮಕ್ಕಾಗಿ ಅಂದರೆ ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕುಗಳಿಗೆ ನೀರನ್ನು ಒದಗಿಸತಕ್ಕ ಉದ್ದೇಶದಿಂದ ಯಗಚೀ ನದಿ ನೀರನ್ನು ತರುವುದಕ್ಕೆ ಸಾಕಷ್ಟು ಸರ್ವೆ ಮತ್ತು ಅಂದಾಜುಗಳೆಲ್ಲಾ ಆಗಿದ್ದವು. ಆದರೆ ನಮ್ಮ ದುರಾದೃಷ್ಟ ದಿಂದ ಪ್ರಜಾಪ್ರಭುತ್ವ ಆಡಳಿತ ಜಾರಿಗೆ ಬಂದ ದೆಶೆಯಿಂದ ಅವುಗಳೆಲ್ಲಾ ಮೂಲೆಗೆ ಬೀಳಬೇಕಾಗಿ ಬಂದಿತು. ಇತ್ತೀಚೆಗೂ ಕೂಡ ಈ ಸರ್ಕಾರಗಳೂ ಬಂದನಂತರ ಇಂಥಾ ಯೋಜನೆಗಳ ಅನೇಕ ಸರ್ವೆ ಕಾರ್ಯಗಳು ನಡೆದಿದ್ದರೂ ಅವು ಮೂಲೆಗೆ ಬಿದ್ದಿರುವುದು ತುಂಬಾ ವಿಷಾದಕರವಾದ ಸಂಗತಿ. ಹಾಗೂ ಬಹಳ ಚಿಂತಾಜನಕವಾದಂಥ ವಿಷಯ ಇದು. ಆದರೆ ಈಗಲಾದರೂ ಈ ತಾಲ್ಲೂಕಿಗೆ ನೀರಾವರಿ ಸೌಲಭ್ಯಗಳನ್ನು ಖಂಡಿತ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಪ್ರಜಾ ಪ್ರಭುತ್ವ ಯಶಸ್ವಿಯಾಗಬೇಕಾಗಿದ್ದರೆ ಸ್ಥಳೀಯ ಸಂಸ್ಥೆಗಳು ಅಭಿವೃದ್ಧಿಯಾಗಬೇಕು. ಅಂದರೆ ಗ್ರಾಮಪಂಚಾಯಿತಿಗಳೂ, ತಾಲ್ಲೂಕ್ ಬೋರ್ಡುಗಳೂ ಮತ್ತು ತಾಲ್ಲೂಕ್ ಅಭಿವೃದ್ಧಿ ಮಂಡಲಿ ಗಳೂ ಯಶಸ್ವಿಯಾಗಿ ಕೆಲಸಮಾಡುವುದಕ್ಕೆ ಅವು ನವಚೈತನ್ಯ ಗಳಿಸಬೇಕು. ಆದರೆ ಆ ಸಂಸ್ಥೆ ಗಳನ್ನು ಮುಂದಕ್ಕೆ ತಾರದೆ ಇಲ್ಲಿ ಬರೀ ಈ ಒಂದು ಕ್ಯಾಬಿನೆಟ್ಟಿನಿಂದ ರಾಜ್ಯದ ಅಭಿವೃದ್ಧಿಯನ್ನು ಸಾಧಿಸುತ್ತೇವೆಂದರೆ ಅದು ಖಂಡಿತಾ ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಅಂಶ ಮನ ಮನೆಗೂ ಮುಟ್ಟಬೇಕು ಅಂದರೆ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಚೈತನ್ಯಪೂರ್ಣವಾಗಬೇಕು. ಈ ದಿವಸ ನಾನು ಕೂಡ ಒಂದು ಅಭಿವೃದ್ಧಿ ಮಂಡಲಿಗೆ ಸದಸ್ಯನಾಗಿದ್ದೇನೆ. ಆದರೆ ಅಲ್ಲಿ ನಡೆಯು ತಕ್ಕ ವಿಷಯಗಳನ್ನು ಹೇಳಬೇಕೆಂದರೆ ಬಹಳ ಸಂಕಟವಾಗುತ್ತದೆ. ನಾವು ಎಷ್ಟೇ ಮೆಹನತ್ತು ಮಾಡಿದರೂ ನಾವು ಕಳುಹಿಸತಕ್ಕ ಅನೇಕ ಫೈಲುಗಳು ಜಿಲ್ಲಾಧಿಕಾರಿಗಳ ಆಫೀಸಿನಲ್ಲಿ ಕೊಳೆತು ಬಿದ್ದಿವೆ. ಇನ್ನು ಕೆಲವು ಸಬ್‌ಡಿವಿಜನ್ ಮಟ್ಟದಲ್ಲಿ ಅಲ್ಲಿ ಕೊಳೆಯುತ್ತ ಬಿದ್ದಿವೆ. ಹಾಗೂ ಹೀಗೂ ತೂಗಾಡುತ್ತ ರಾಜ್ಯ ಮಟ್ಟದ ಸೆಕ್ರೆಟೇರಿಯಟ್ಟಿಗೆ ಬಂದಾಗ ಅವು ಯಾವ ಮೂಲೆಯಲ್ಲಿ ಬಿದ್ದು ಹೋಗುತ್ತವೋ ಅದು ಗೊತ್ತಾಗುವುದೇ ಕಷ್ಟ. ಆದುದರಿಂದ ನಮ್ಮಲ್ಲಿ ಈ ಪ್ರಜಾರಾಜ್ಯ ಮತ್ತು ಪ್ರಜಾಡಳಿತ ಯಶಸ್ವಿಯಾಗಬೇಕಾಗಿದ್ದರೆ ಮೊದಲು ಸರ್ಕಾರದವರು ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿ ಬಲಪಡಿಸಬೇಕು. ಆಗಲೇ ರಾಜ್ಯದಲ್ಲಿ ಪ್ರಜಾಪ್ರಭುತ್ವ ಹಬ್ಬುವುದಕ್ಕೆ ಸಾಧ್ಯ ವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಒಂದು ಮಾತು. ಸರ್ಕಾರದವರು ರಾಜ್ಯದಲ್ಲಿ ಭೂಸುಧಾ ರಣೆಯ ಬಗ್ಗೆ ಏನು ಚಿಂತೆ ಹರಿಸಿದ್ದಾರೆಂಬುದೇ ತಿಳಿಯುತ್ತಿಲ್ಲ. ಬೇಸಾಯ ಅಂದರೆ–ನೀಸಾಯ, ನಿಮ್ಮಪ್ಪಸಾಯ, ನಿಮ್ಮ ಮನೆಮಕ್ಕಳೆಲ್ಲಾಸಾಯ ಎಂದು ಈ ವ್ಯವಸಾಯದಲ್ಲಿ ಯಾರು ಎಷ್ಟು ಕಷ್ಟಪಟ್ಟರೂ ಮುಂದಕ್ಕೆ ಬರುವುದಕ್ಕಾಗುವುದಿಲ್ಲ. ಆದರೆ ಈ ದಿವಸ ತಜ್ಞರು ಆಧುನಿಕ ರೀತಿಯಲ್ಲಿ ಬೇಸಾಯ ಮಾಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆಲ್ಲಾ ಟ್ರ್ಯಾಕ್ಟರ್, ಟ್ರೈಲರ್ ಮತ್ತು ಟಿಲ್ಲರುಗಳು ಬೇಕು. ಆದರೆ ಈ ದಿವಸ ಸರ್ಕಾರದವರು ಸೂಚಿಸತಕ್ಕ ಭೂಮಿತಿಯಲ್ಲಿ ಇಂಥ ಆಧುನಿಕ ಯಂತ್ರೋಪಕರಣಗಳನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ರೈತರ ಆರ್ಥಿಕ ಜೀವನವನ್ನು ಹೇಗೆ ಉತ್ತಮಪಡಿಸಬೇಕು ಎಂಬುದನ್ನು ಇವರಿನ್ನೂ ಕಂಡುಹಿಡಿದಿಲ್ಲ.

4–30 P. M.

ಒಬ್ಬ ರೈತ ಭೂ ಅಭಿವೃದ್ಧಿ ಬ್ಯಾಂಕಿನ ಮೂಲಕ ಅಥವಾ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಟ್ರ್ಯಾಕ್ಟರ್ ಮುಂತಾದ ಉಪಕರಣ ಕೊಳ್ಳಬೇಕಾದರೆ ಆ ಬ್ಯಾಂಕಿಗೆ ಅಥವ ಕಾರ್ಪೊ ರೇಷನ್ನಿಗೆ ತನ್ನ ಜಮೀನನ್ನು ಡೀಡು ಮಾಡಬೇಕು. 10 ಎಕರೆ ಡೀಡು ಮಾಡಿದರೆ ಟ್ರ್ಯಾಕ್ಟರು ಸಿಕ್ಕುವುದಿಲ್ಲ. ಇದನ್ನು ಯೋಚನೆ ಮಾಡಿದ್ದೀರಾ ? 10 ಎಕರೆ ಇರುವವರು ಯಾವ ರೀತಿ ಟ್ರ್ಯಾಕ್ಟರು ಪಡೆಯಬೇಕು ? ಆಧುನಿಕ ಉಪಕರಣಗಳನ್ನುಪಯೋಗಿಸಿ ವ್ಯವಸಾಯ ಮಾಡಬೇಕು ಎಂದು ಹೇಳುವರು. ಹಾಗೆ ಮಾಡಲು ಬಡ ರೈತರಿಗೆ ಶಕ್ತಿ ಎಲ್ಲಿಂದ ಬರಬೇಕು ? ದೇಶದ

(ಶ್ರೀ ಎಚ್. ಎಸ್. ಸಿದ್ದಪ್ಪ)

ಉತ್ಪತ್ತಿ ಹೆಚ್ಚಬೇಕು, ವ್ಯವಸಾಯಾಭಿವೃದ್ಧಿಯಾಗಬೇಕು ರೈತರ ಆರ್ಥಿಕ ಸ್ಥಿತಿ ಉತ್ತಮವಾಗಬೇಕು ಎಂದು ಹೇಳುವಾಗ ಕಡಿಮೆ ಜಮೀನಿರುವವರು ಹೇಗೆ ಮಾಡಬೇಕು, ಯಾವ ರೀತಿ ತಾಂತ್ರಿಕ ಅನುಕೂಲ ಪಡೆಯಬೇಕು ಎಂಬುದನ್ನು ಯೋಚಿಸಿ ಅದಕ್ಕೆ ಅನುಕೂಲವಾಗುವಂತೆ ಒಂದು ಸಮಗ್ರ ಯೋಜನೆ ತಯಾರಿಸಬೇಕು. ಇದರ ಬಗ್ಗೆ ಆಗ್ರಹಪೂರ್ವಕವಾಗಿ ಮನವಿ ಸಲ್ಲಿಸುತ್ತೇನೆ. ಒಬ್ಬ ವ್ಯವಸಾಯದ ಇಲಾಖೆ ಅಧಿಕಾರಿ ತಾಲ್ಲೂಕಿಗೆ ಅಥವ ಬೇರೆ ಕಡೆಗೆ ಬರುವುದಾದರೆ ವ್ಯವಸಾಯದ ಇಲಾಖೆ ಅಧಿಕಾರಿಗಳ ಒಂದು ಸೈನ್ಯ ಹಾಜರಾಗಿರುವುದು. ಗೊಬ್ಬರಕ್ಕೆ ಸಂಬಂಧಪಟ್ಟ ಗೆಜೆಟೆಡ್ ಆಫೀಸರು, ಬೀಜಕ್ಕೆ ಸಂಬಂಧಪಟ್ಟ ಗೆಜೆಟೆಡ್ ಅಧಿಕಾರಿ, ಪ್ಲಾಂಟ್ ಪ್ರೊಟೆಕ್ಷನ್ನಿಗೆ ಸಂಬಂಧಪಟ್ಟ ಗೆಜೆಟೆಡ್ ಅಧಿಕಾರಿ ಹೀಗೆ ಸುಮಾರು 12 ಜನ ಅಧಿಕಾರಿಗಳು ಇರುತ್ತಾರೆ. ಈ ದಿನ ಹೆಬ್ಬಾಳದಲ್ಲ ಅಥವಾ ಬೇರೆ ಕಡೆ ಫಾರಂ ಮಾಡಿರುತ್ತಾರೆ, ಅಲ್ಲಿ ಬೀಜವನ್ನು ಎರಡು ಕುಂಟೆಯಲ್ಲಿ ಬೆಳೆಯುವರು, ಅದಕ್ಕೆ ಖರ್ಚೆಷ್ಟು ಎಂದು ಹೇಳುವುದಿಲ್ಲ. ಬಂದು ನೋಡಿ ಎಂದು ಹೇಳಿ ರೈತರಿಗೆ ಅದನ್ನು ತೋರಿಸುವರು. ಎರಡು ಕುಂಟೆಯಲ್ಲಿ ಬೆಳೆದುದನ್ನು ನೋಡಿ ಒಂದು ಎಕರಗೆ ಎಷ್ಟು ಬೆಳೆಯುವುದು, ನೂರು ಎಕರೆಗೆಷ್ಟು ಬೆಳೆಯುವುದು ಎಂದು ಲೆಕ್ಕ ಹಾಕಿ ಪ್ರಿಂಟುಮಾಡಿ ದೇಶಕ್ಕೆ ತಿಳಿಸುವರು. ಹೀಗೆ ಮಾಡಿದರೆ ಎಷ್ಟು ಜಾಸ್ತಿ ಉತ್ಪತ್ತಿಯಾಗುವುದೆಂದು ಹೇಳುವರು. ಆದರೆ ರೈತ ಹಾಗೆ ಬೆಳೆಯಲು ಹೇಗೆ ಸಾಧ್ಯ ? ಅವನಿಗೆ ಹಣ, ಮೆಷೀನರಿ ಅನುಕೂಲವಿರುವುದಿಲ್ಲ. ಅಲ್ಲದೆ ವ್ಯವಸಾಯದ ಇಲಾಖೆ ಅಧಿಕಾರಿ ಕರೆದುಕೊಂಡು ಹೋಗಿ ಸಲಹೆ ಪಡೆಯಲು 50 ರೂಪಾಯಿ ಅವನು ಖರ್ಚುಮಾಡಬೇಕು. ಯಾವುದೇ ವ್ಯವಸಾಯ ಇಲಾಖೆ ಅಧಿಕಾರಿಯಾಗಲಿ ಸ್ವತಃ ತಾನೇ ಭೂಮಿಯ ಬಳಿಗೆ ಬರುವುದಿಲ್ಲ. ರೈತ ಕರೆದುಕೊಂಡು ಹೋಗಿ ಸಮಾರಂಭ ಏರ್ಪಡಿಸಬೇಕು, ಹಾಗೆ ಮಾಡಿದರೆ ಅಧಿಕಾರಿ ಬರುವರು. ಬಂದು ಭಾಷಣ ಮಾಡಿ ವಾಪಸು ಹೋಗುವರು. ವ್ಯವಸಾಯದ ಪರಿಸ್ಥಿತಿ ಹೇಗಿದೆ. ಈ ಪರಿಸ್ಥಿತಿಯನ್ನು ಉತ್ತಮಪಡಿಸಲು ಸರಕಾರ ಇನ್ನೂ ಹಣ ಒದಗಿಸಿಲ್ಲ, ಹೆಚ್ಚು ಆಸಕ್ತಿ ವಹಿಸಿಲ್ಲ. ಇರುವ ಹಣವನ್ನಾದರೂ ಸದ್ವಿನಿಯೋಗ ಮಾಡಿ ತಮ್ಮ ಜೀವನವನ್ನೇ ವ್ಯವಸಾಯದಲ್ಲಿ ತೊಡಗಿಸಿರುವ ರೈತರ ಜೀವನ ಉತ್ತಮಪಡಿಸಲು ದೃಷ್ಟಿಹರಿಸಬೇಕು.

ಉದ್ಯೋಗ. ಶ್ರೀ ಘೋರ್ಪಡೆಯವರ ಆರ್ಥಿಕ ಚಿಂತನೆಯ ಭಾಷಣದಲ್ಲಿ ಇದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕಳೆದ ಅಧಿವೇಶನದಲ್ಲಿ ಮಾನ್ಯ ಅಜೀಜ್‌ಸೇಟ್‌ರವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಹೇಳಿದ್ದರು. ತಾಲ್ಲೂಕು ಮಟ್ಟದಲ್ಲಿ ಒಂದೊಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಸ್ ತೆರೆಯುತ್ತೇವೆ. ಹಣ ಅದಕ್ಕೆ ಒದಗಿಸುತ್ತೇವೆ. ನಿರುದ್ಯೋಗ ಸಮಸ್ಯೆ ಪರಿಹಾರ ಮಾಡುತ್ತೇವೆ. ಇದಕ್ಕೆ ತೀವ್ರ ಗಮನ ಕೊಡುತ್ತೇವೆ ಎಂದು ಹೇಳಿದ್ದರು. ಈ ಸಾರಿ ಅದರ ಬಗ್ಗೆ ಬಜೆಟ್ಟಿನಲ್ಲಿ ಅವಕಾಶ ಮಾಡುವರು ಎಂದು ನಾನು ನಿರೀಕ್ಷಿಸಿದ್ದೆ. ಅದಕ್ಕೆ ಹಾಗೆ ಮಾಡಿಲ್ಲ. ಕೆಲವು ಕಡೆ ನೂರು ಮೈಲಿಗಳವರೆಗೆ ಹೋಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ಹೆಸರು ರಿಜಿಸ್ಟರು ಮಾಡಬೇಕಾದ ಸಂದರ್ಭವಿದೆ. ವೃತ್ತಿಯಿಲ್ಲದೆ ಅಹಾರವಿಲ್ಲದೆ ಇರುವವರಿಗೆ ಅಷ್ಟು ದೂರ ಹೋಗಿಬರಲು ಸಾಧ್ಯವೇ ? ಒಂದು ವೇಳೆ ಹೋಗಿ ಹೆಸರು ರಿಜಿಸ್ಟರ್ ಮಾಡಿಸಿದರೂ ಬೇಕಾದವರಿಗೆ ಒಂದು ಉದ್ಯೋಗ ಸಿಕ್ಕುತ್ತಿಲ್ಲ. ಕಾರಣ ಬೇಕಾದವರಿಗೆ ಅಧಿಕಾರಿಯ ಸೂಚನೆ ಪ್ರಕಾರ ಕೊಡುವರು. ಯಾರಿಗೆ ಕೊಡಬೇಕೆಂದು ಮೊದಲೇ ತೀರ್ಮಾನ ಮಾಡಿಕೊಂಡಿರುವರು. ಇದು ಸರಿಯಲ್ಲ. ದಯವಿಟ್ಟು ಯಾರಿಗೆ ವೃತ್ತಿಯಿಲ್ಲ, ಹೊಟ್ಟೆಗಿಲ್ಲ ಅವರಿಗೆ ನ್ಯಾಯವಾಗಿ ವೃತ್ತಿ ಸಿಕ್ಕುವಹಾಗೆ ವ್ಯವಸ್ಥೆ ಮಾಡಬೇಕು, ಕಳೆದ ಅಧಿವೇಶನದಲ್ಲಿ ಒಂದು ವಿಷಯ ಪ್ರಸ್ತಾಪಮಾಡಿದ್ದೆ. ಇಂದು ಹೆಣ್ಣುಮಕ್ಕಳ ಪರಿಸ್ಥಿತಿಯೇನಾಗಿದೆ ಎಂಬುದನ್ನು ನೋಡಬೇಕು. ಅವರ ಶೀಲಭಂಗವಾಗುತ್ತಿದೆ. ಇದನ್ನು ಸರಕಾರ ಬಹಳ ಕಳಕಳಿಯಿಂದ ಯೋಚನೆ ಮಾಡಿ ಸೂಕ್ತ ಕ್ರಮ ಅದನ್ನು ತಡೆಗಟ್ಟಲು ತೆಗೆದುಕೊಳ್ಳಬೇಕು. ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಟ್ಟಿದ್ದೇವೆ. ಮಹತ್ತರ ಸ್ಥಾನ ಕೊಟ್ಟಿದ್ದೇವೆ ಎಂದು ದೊಡ್ಡ ಭಾಷಣ ಮಾಡುತ್ತಾರೆ. ಆದರೆ ಅವರ ಸ್ಥಿತಿ ನೋಡಿದರ ರಾಷ್ಟ್ರದಲ್ಲಿ ಚಿಂತಾಜನಕವಾಗಿದೆ. ಶ್ರೀಮಂತರ ಬಗ್ಗೆ ಚಿಂತೆಮಾಡಬೇಕಾಗಿಲ್ಲ, ಬಡಹೆಣ್ಣುಮಕ್ಕಳು ಕಾರ್ಖಾನೆಗಳಲ್ಲಿ ಹೊಟ್ಟೆಪಾಡಿಗಾಗಿ ಅಲ್ಪ ಸಂಬಳಕ್ಕೆ ದುಡಿಯುತ್ತಿದ್ದಾರೆ. ಆದರೆ ಅವರ ಜೀವನ ಸುಗಮವಾಗಿದೆಯೇ ? ಸಂಜೆ 6 ಗಂಟೆಗೆ ನೆಲಮಂಗಲಕ್ಕೆ ಹತ್ತು ಮೈಲಿ ವೇಗದಲ್ಲಿ ಕಾರಿನಲ್ಲಿ ಹೋದರೆ ವಿಷಯ ಗೊತ್ತಾಗುವುದು. ಹೆಣ್ಣುಮಕ್ಕಳಿಗೆ ವಿಶೇಷ ಸೌಲಭ್ಯ ಕಲ್ಪಿಸಬೇಕು. ಅವರಿಗಾಗಿ ಪ್ರತ್ಯೇಕ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಪ್ರತಿಯೊಂದು ತಾಲ್ಲೂಕಿನಲ್ಲೂ ತೆರೆಯಬೇಕು.

ಇವರಿಗೆ ಹುದ್ದೆಯನ್ನು ಅವೇಲೆ ಕೊಡುತ್ತಾರೆ. ನಾನು ನಿಮಗೆ ಹೇಳುತ್ತೇನೆ. ಗಂಡು ಮಕ್ಕಳಿಗೆ ಮಾಡಬೇಕು ಎಂದು ಹೇಳುವುದಿಲ್ಲ. ಅವರು ರೈಲ್ವೆ ಸ್ಟೇಷನ್‌ನಲ್ಲಿ, ಬಸ್‌ಸ್ಟ್ಯಾಂಡಿನಲ್ಲಿ,

ಲೆಜಿಸ್ಲೇಚರ್ ಹೋಂನಲ್ಲಿ ಮಾನ್ಯ ಗುಂಡೂರಾಯರ ಮುಂದೆ ಕೂಲಿ ಮಾಡಿ ಹೊಟ್ಟೆ ಹೊರೆಯುತ್ತಾರೆ ಆದರೆ ಹೆಣ್ಣು ಮಕ್ಕಳು ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಅವರಿಗೆ ಸೌಜನ್ಯ ಶೀಲ ಸೃಷ್ಟಿ ನಿಯಮ ಇದೆ. ಮೈ ಬೆವರು ಸುರಿಸುವುದಕ್ಕೆ ಅವರು ತಯಾರು ಇದ್ದರೂ ಕೂಡ ಶೀಲಕ್ಕೆ ಭಂಗ ಬಾರದಂತೆ ದುಡಿಮೆ ಮಾಡಬೇಕಾಗುತ್ತದೆ. ಆ ದುಡಿಮೆಗೆ ಅವಕಾಶಗಳನ್ನು ಮಾಡಲಿ, ನಿಮ್ಮ ಸರ್ಕಾರ ಹೆಣ್ಣು ಮಕ್ಕಳ ಅಭಿಮಾನವನ್ನು ಬೆಳೆಸಿಕೊಳ್ಳಲಿ ಎಂದು ಈ ಸಮಯದಲ್ಲಿ ಹೇಳಬಯಸು ತ್ತೇನೆ.

ಇನ್ನು ಆಹಾರದ ವಿತರಣೆಯ ಬಗ್ಗೆ ಹೇಳುತ್ತೇನೆ, ಬ್ಲಾಕ್ ಮಾರ್ಕೆಟ್ ವ್ಯಾಪಾರ, ಕಳ್ಳ ತನದ ವ್ಯಾಪಾರ ಎಷ್ಟು ಓಪನ್ ಆಗಿ ನಡೆಯುತ್ತಿದೆ ಎಂದರೆ, ಅದಕ್ಕೆ ಜನರು ಕಾರಣರು ಎಂದು ಹೇಳುವುದು ಸರಿಯಲ್ಲ. ಇದರಲ್ಲಿ ಅಧಿಕಾರಿಗಳ ಪಾತ್ರ ಮಹತ್ತರವಾಗಿದೆ. ಉದಾಹರಣೆಗೆ, ನಿನ್ನೆ ತಾನೆ ನನಗೆ ಒಂದು ಕಾಗದ ಪೋಸ್ಟಿನಲ್ಲಿ ಬಂದಿದೆ. ಅದನ್ನು ತೋರಿಸುತ್ತೇನೆ. ಇದು ನಿಮ್ಮ ಅಧಿಕಾರಿಗಳು ಮಾಡಿ ಕಳುಹಿಸಿರತಕ್ಕದ್ದು. ಇದನ್ನು ಇಲ್ಲಿ ಓದಿ ಅನ್ನಪೂರ್ಣೇಶ್ವರಿ ಇ. ವಾ. ವಾಜ್ ಅವರಿಗೆ ತಲುಪಿಸುತ್ತೇನೆ. ಇದು ಅಫಿಷಿಯಲ್ ನೋಟಿಫಿಕೇಷನ್ ಬೈ ದಿ ತಹಸೀಲ್ದಾರ್. ತಹಸೀಲ್ದಾರ್ ಅವರು ಅಲಾಟ್ ಮಾಡಿ, ಜಿಲ್ಲಾಧಿಕಾರಿಗಳಿಗೆ ಕಾಪಿಯನ್ನು ಕಳುಹಿಸಿದ್ದಾರೆ. ಪ್ರತ್ಯೇಕವಾಗಿ ಶಾಸಕರಿಗೂ ಒಂದು ಕಾಪಿ ಹೋಗಿದೆ. ಇವರಿಗೆ ನಿಮ್ಮ ಭಯ ಎಷ್ಟು ಇದೆಯೆಂದರೆ, ಅದರಲ್ಲಿರುವ ಒಂದು ವಾಕ್ಯವನ್ನು ಓದುತ್ತೇನೆ. ಫುಡ್ ಗ್ರೇನ್ಸ್ ಅನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಅವರು ಇಷ್ಟು ಧೈರ್ಯದಿಂದ ಬರೆದಿದ್ದಾರೆ.

> Foodgrains may be lifted on the permits issued......before 23-3-73 and no room should be given for their proper distribution.

ಇದರಲ್ಲಿ ಟೈಪ್ ಮಿಸ್ಟೇಕ್ ಎನ್ನುವುದು ಸ್ವಲ್ಪ ಇದೆ. ನಾನು ಅದರ ಬಗ್ಗೆ ಹೇಳುತ್ತಾ ಇಲ್ಲ, ಏನು ಆಹಾರದ ವಿತರಣೆಯಾಗುತ್ತದೆ. ಅದರ ಬಗ್ಗೆ ತೀವ್ರ ಗಮನವನ್ನು ತಾವು ಹರಿಸಬೇಕೆಂದು ಹೇಳು ತ್ತೇನೆ. ತಾವು ಹಾಸನಕ್ಕೆ ಬಂದಾಗ ನಮ್ಮ ಜಿಲ್ಲೆಯ ಎಲ್ಲಾ ಶಾಸಕರು ಸೇರಿ, ನಮ್ಮ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ಕೂಲಂಕುಷವಾಗಿ ವಿವರಿಸಿದ್ದೇವೆ. ಆದರೆ "no room should be given for their proper distribution" ಎನ್ನುವುದು ಟೈಪಿಂಗ್ ಮಿಸ್ಟೇಕ್ ಅಲ್ಲ. ತಾವು ಮಾನ್ಯ ಬಸವಲಿಂಗಪ್ಪನವರ ಹಾಗೆ ಗುಮಾಸ್ತ ಬರೆದ ನಾನು ಸೈನು ಹಾಕಿದೆ ಎನ್ನುವ ಹಾಗೆ ಹೇಳಬೇಡಿ ಅಧಿಕಾರಿಗಳು ಒಂದು ದಿವಸಕ್ಕೆ 18 ಗಂಟೆ ನಿದ್ದೆ ಮಾಡುವವರು ಇದ್ದಾರೆ. ಇವರ ಬಗ್ಗೆ ನಿಗವಹಿಸಿ. you must pull them up.

ನಿಮ್ಮ ಯೋಜನೆಗಳು ಫಲಕಾರಿಯಾಗಬೇಕಾದರೆ, ಈ ಕಡೆ ಕೂತವರು ಕ್ರಿಟಿಸೈಸ್ ಮಾಡುವುದು ಬೇಡ. ಉತ್ತಮ ಕೆಲಸ ನಡೆಯಬೇಕು ಎನ್ನುವುದಾದರೆ, ನಿಮ್ಮ ಅಧಿಕಾರಿಗಳನ್ನು ಎಚ್ಚರಗೊಳಿಸಿ ಎಂದು ನಾನು ಹೇಳುತ್ತೇನೆ. ಸೆಕ್ರೆಟರಿಯೇಟ್ ಮಟ್ಟದಲ್ಲಿ ಮಂತ್ರಿಗಳಿಂದ ಒಂದು ಕಾಗದ ಹೋದರೆ, ಸಂಬಂಧಪಟ್ಟ ಸೆಕ್ರೆಟರಿಯೇಟ್ ಬಿಡಬೇಕಾದರೆ 3—4 ತಿಂಗಳು ಬೇಕಾ ಗುತ್ತದೆ. ಉತ್ತಮ ಆಡಳಿತವನ್ನು ನಡೆಸುವ ದೃಷ್ಟಿಯಿಂದ ಹೇಳುತ್ತೇನೆ. ಈ ರೀತಿ ಕಾಗದ ಪತ್ರಗಳು ತಡವಾಗುವುದು ಬೇಡ. ತಕ್ಷಣ ಸರಿಯಾದ ಕ್ರಮ ತೆಗೆದುಕೊಂಡು ಕೆಲಸಮಾಡಬೇಕು. ಆಹಾರದ ಬಗ್ಗೆ ನಾನು ಹೆಚ್ಚು ಹೇಳಬಯಸುವುದಿಲ್ಲ. ಪಕ್ಷಾತೀತವಾಗ ಆಹಾರದ ವಿತರಣೆ ನಡೆಯುತ್ತಿದೆ. ಈ ಬಗ್ಗೆ ತಾವು ತೀವ್ರ ಗಮನ ಹರಿಸಬೇಕು. ಏತಕ್ಕೆ ಇಪತ್ತನದಿವಸ ಆಡಳಿತ ಸರಿಯಾಗಿ ನಡೆಯುತ್ತಿಲ್ಲ ಎಂದು ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ನೀವು ಏನು ಮಾಡಿದ್ದೀರಿ ಎಂದರೆ ಎಲ್ಲಾ ಇಲಾಖೆಗೂ ಒಬ್ಬ ಐ.ಎ.ಎಸ್. ಆಫೀಸರ್ ಅನ್ನು ನೇಮಕ ಮಾಡಿದ್ದೀರಿ. ಉದಾ ಹರಣೆಗೆ ಭದ್ರಾವತಿ ಕಬ್ಬಿಣ ಕಾರ್ಖಾನೆಗೆ ಆಫೀಸರನ್ನು ನೇಮಕ ಮಾಡುವಾಗ ಅವರು ಮೆಟಲರ್ಜಿ ಯಲ್ಲಿ ಎಕ್ಸ್‌ಪರ್ಟ್ ಇರಬೇಕು ಅಲ್ಲಿ ನಡೆಯತಕ್ಕ ಉದ್ಯಮದ ಬಗ್ಗೆ ಅವರಿಗೆ ಸಾಕಷ್ಟು ಮಾಹಿತಿ ಇರಬೇಕು. ಅದು ಬಿಟ್ಟು ಅಲ್ಲಿಗೆ ಒಬ್ಬ ಐ. ಎ. ಎಸ್. ಆಫೀಸರನ್ನು ಹಾಕಿದರೆ ಆತನಿಗೆ ಇದರ ಬಗ್ಗೆ ಏನು ಗೊತ್ತಿರುವುದು ? ಆರೋಗ್ಯ ಇಲಾಖೆಗೆ ಇವರನ್ನು ನೇಮಕ ಮಾಡುವಾಗ, ಜನಾ ರೋಗ್ಯ ಅಭ್ಯಾಸ ಮಾಡಿ ಚೆನ್ನಾಗಿ ಕಲಿತಿರುವ ಪರಿಣಿತರನ್ನು ಹಾಕಿದ್ದಾರೆ. ಆದರೆ ವ್ಯವಸಾಯ ಮತ್ತು ಆಹಾರದ ಇಲಾಖೆಗೆ ಪರಿಣತರನ್ನು ಹಾಕಿಲ್ಲ. ಇದು ಸರಿಯಲ್ಲ. ಇಲಾಖೆಗೆ ಅಧಿಕಾರಿ ಗಳನ್ನು ನೇಮಿಸುವಾಗ, ಆಯಾ ಇಲಾಖೆಯ ಕೆಲಸಕಾರ್ಯಗಳ ಬಗ್ಗೆ ಅವನಿಗೆ ಮಾಹಿತಿ ಇದೆಯೋ ಎಂದು ನೋಡಬೇಕು, ಮಾಹಿತಿ ಇಲ್ಲದೆ ಇರುವವರನ್ನು ಹಾಕಿದರೆ, ಯಾರು ಹೋಗಿ ಏನು ಕೇಳಿದರೂ ಸಹ, ನೋಡುತ್ತೇನೆ ಎಂದು ಹೇಳುತ್ತಾನೆ. ಟಪಾಲ್ ಲೆವೆಲ್‌ನಲ್ಲಿ ಕಾಗದಕ್ಕೆ, ಇಷ್ಟನೆ ಸೆಕ್ಷನ್ ಪ್ರಕಾರ ಇದನ್ನು ಮಾಡು, ಇಲ್ಲಾ ಬಿಡು, ಎಂದು ಆಜ್ಞೆ ಮಾಡುವವರು ಒಬ್ಬರು

(ಶ್ರೀ ಎಚ್. ಎಸ್. ಸಿದ್ದಪ್ಪ)

ಅಧಿಕಾರಿಗಳು ಇದ್ದಾರೆಯೇ ? ಬರೀ ಪುಟ್ ಅಪ್, ಬ್ರಿಂಗ್ ಅಪ್, ಡಿಸ್ಕಸ್ ಎಂದರೆ ಏತಕ್ಕೆ ಇದು ? ಈ ರೀತಿಯಾಗಿ ತಿಂಗಳಗಟ್ಟಲೆ ಕಾಗದ ಪತ್ರಗಳು ಸುತ್ತುತ್ತಾ ಇರುತ್ತವೆ. ಇದು ಸರಿಯಲ್ಲ. ಆಯಾ ಇಲಾಖೆಗೆ ನೇಮಿಸತಕ್ಕ ಅಧಿಕಾರಿಗಳಿಗೆ ಆ ಇಲಾಖೆಯಲ್ಲಿ ಸಾಕಷ್ಟು ಮಾಹಿತಿ ಇರಬೇಕು. ಮಾಹಿತಿ ಇಲ್ಲದ ಅಧಿಕಾರಿಗಳನ್ನು ನೇಮಿಸತಕ್ಕ ಪ್ರಯತ್ನ ಮಾಡಬೇಡಿ. ಇಲ್ಲದೆ ಹೋದರೆ ಮಾಹಿತಿಯನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕ ವ್ಯವಸ್ಥೆಯನ್ನು ಆಡಳಿತದಲ್ಲಿ ತರಬೇಕು.

ಅಧ್ಯಕ್ಷರು ಕೊಟ್ಟಿರತಕ್ಕ ಅವಧಿಯ ಮಿತಿಯನ್ನು ಮೀರುವುದಕ್ಕೆ ನನಗೆ ಇಚ್ಛೆ ಇಲ್ಲದೆ ಹೋದರೂ ಸರ್ಕಾರದ ಗಮನವನ್ನು ಪ್ರಮುಖವಾದ ವಿಷಯದ ಬಗ್ಗೆ ಸೆಳೆಯಬೇಕೆಂಬ ಉದ್ದೇಶ್ಯದಿಂದ ಸಮಯ ಯಾಚನೆ ಮಾಡುತ್ತೇನೆ. ಅವಕಾಶ ಕೊಡದೆ ಹೋದರೆ ಕೂತುಕೊಳ್ಳುತ್ತೇನೆ. ಸಹಕಾರದ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಸಹಕಾರ ಇಲಾಖೆ ಏನಾಗಿದೆ ? ಸಾರೋದ್ಧಾರವಾಗಿ ಅದು ಮುಳುಗುವುದು ಬೇಡ. ಬಹುಶೇಕ ನಮ್ಮ ಸರ್ಕಾರದಲ್ಲಿ ಇರುವ ಇಲಾಖೆಗಳಲ್ಲಿ ಮಹಾಪಾಪದ ಇಲಾಖೆ ಎಂದರೆ ಸಹಕಾರ ಇಲಾಖೆ. ಕಳೆದ 25 ವರ್ಷಗಳಲ್ಲಿ ನಾನು ಸಹಕಾರ ಸಂಘಗಳಲ್ಲಿ ಸೇವೆ ಮಾಡಿದ್ದೇನೆ. ನಾನು ನಿಮಗೆ ಹೇಳುತ್ತೇನೆ. ನಿಮ್ಮ ಯೋಜನೆ ಏನು ಇದೆ ಈ ಸಹಕಾರ ಯೋಜನೆ ಬಗ್ಗೆ ಏನು ಕಳಕಳಿ ಇದೆ ಅದನ್ನು ಸ್ವಾಗತಿಸುತ್ತೇನೆ. ಆದರೆ ಭೂ ಅಭಿವೃದ್ಧಿ ಬ್ಯಾಂಕ್ ಕೆಲಸಮಾಡುತ್ತಾ ಇದೆ. ಅದು ಎಪೆಕ್ಸ್ ಇನ್‌ಸ್ಟಿಟ್ಯೂಷನ್, ಸಾಕಷ್ಟು ಸೇವೆ ಸಲ್ಲಿಸುತ್ತಾ ಇದೆ. ಅದಕ್ಕೆ ಒಬ್ಬ ಐ.ಎ.ಎಸ್. ಆಫೀಸರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹಾಕುತ್ತೀರಿ. ಇದರಲ್ಲಿ ಏನು ಅರ್ಥ ಇದೆ ? ಅವರಿಗೆ ಏನು ಗೊತ್ತಿರುತ್ತದೆ ? ಸಹಕಾರ ಸಂಘಗಳಲ್ಲಿ ಒಬ್ಬ ಗುಮಾಸ್ತನನ್ನು ನೇಮಿಸಿಕೊಳ್ಳುವುದಕ್ಕೆ ಜೆ.ಡಿ.ಸಿ. ಟ್ರೈನಿಂಗ್ ಆಗಬೇಕೆಂದು ನಿಬಂಧನೆಯನ್ನು ಮಾಡುತ್ತೀರಿ ? ಆದರೆ ಯಾವ ಅನುಭವ ಇಲ್ಲದೆ ಇರುವವರು ಐ.ಎ.ಎಸ್. ಆಫೀಸರನ್ನು ಅಲ್ಲಿ ಹಾಕುತ್ತೀರಿ. ಇವೊತ್ತು ನಿಮ್ಮ ಇಲಾಖೆ, ಕೈವಾಡ ಈ ಸಹಕಾರ ಸಂಘಗಳಲ್ಲಿ ಕಡಿಮೆಯಾಗಬೇಕು. ಇದು ಸಾರ್ವಜನಿಕ ಕ್ಷೇತ್ರ. ಇದರಲ್ಲಿ ನಿಮ್ಮ ಇಲಾಖೆ ಅಧಿಕಾರಿಗಳ ಕೈವಾಡ ಕಡಿಮೆಯಾಗಬೇಕು, ಸಹಕಾರದ ತತ್ವ ಬೆಳೆಯಬೇಕು, ಅದರಿಂದ ಜನತೆಗೆ ಪ್ರಯೋಜನವಾಗಬೇಕು ಎಂದರೆ ಅಧಿಕಾರಿಗಳ ಹಸ್ತಕ್ಷೇಪ ಕಡಿಮೆ ಮಾಡುವುದಕ್ಕೆ ಯೋಚನೆ ಮಾಡಬೇಕು ಎಂದು ಕಳಕಳಿಯಿಂದ ಮನವಿಮಾಡುತ್ತೇನೆ.

ಇವೊತ್ತು ಈ ಬಗ್ಗೆ ನೀವು ಗಮನ ಹರಿಸುವುದಾದರೆ ಸನ್ಮಾನ್ಯ ಅಧ್ಯಕ್ಷರೇ ಈ ಸರ್ಕಾರವನ್ನು ನಾನು ನನ್ನ ಭಾಷಣ ಮುಕ್ತಾಯ ಮಾಡತಕ್ಕಹಂತದಲ್ಲಿ ಒಂದು ಸಲಹೆಯನ್ನು ಅವರಿಗೆ ಹೇಳುತ್ತೇನೆ. "ಕಮಲಕ್ಕೆ ಸೂರ್ಯನದೇ ಚಿಂತೆ, ಚಕ್ರವಾಕಕ್ಕೆ ಚಂದ್ರಮ್ಮನ ಚಿಂತೆ, ನಮಗೆ ಸದಾ ಕನ್ನಡ ಜನತೆಯ ಚಿಂತೆ, ಆದರೆ ನಿಮಗೆ ಅಧಿಕಾರ ಚಿಂತೆ, ಇಂತಪ್ಪ ಸನ್ನಿವೇಶದಲ್ಲಿ ಬಡ ಜನರ ಚಿಂತೆ ನಿಮಗೆಲ್ಲಪ್ಪಾ". ಹೀಗೆ ಸಮಾಜವಾದದ ಆರ್ಥಿಕ ನೀತಿ ಎನ್ನತಕ್ಕದ್ದು ಇದೆ. ಅದನ್ನು ಯಶಸ್ವಿಯಾಗಿ ಆಳಿಸಬೇಕು ಆ ಬಗ್ಗೆ ಶ್ರಮಿಸಬೇಕು. ನಿಮ್ಮ ಅಧಿಕಾರಿಗಳು ನಿದ್ರೆ ಮಾಡುವುದನ್ನು ತಪ್ಪಿಸಿ ಅವರು ನಿಮ್ಮ ಯೋಜನೆ ಎಷ್ಟು ಗುರುತರವಾಗಿದೆ, ನಾಗಾಲೋಟದಲ್ಲಿ ಓಡುತ್ತಿದೆ ಅದನ್ನು ಊರ್ಜಿತ ಮಾಡುವುದಕ್ಕೆ ಅಧಿಕಾರಿಗಳನ್ನು ತರಬೇತಿ ಮಾಡಿ ನಿಮ್ಮ ಯೋಜನೆ ಕೈಗೂಡುವುದಕ್ಕೆ ಗಮನವನ್ನು ಹರಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು).—ಸಭಾಧ್ಯಕ್ಷರೇ, ಅರ್ಥಸಚಿವರು ಮಂಡಿಸಿದಂತ 1973–74ನೇ ಸಾಲಿನ ಆಯವ್ಯಯ ಪತ್ರವನ್ನು ಸಂಪೂರ್ಣವಾಗಿ ಮತ್ತು ಮನಃಪೂರ್ವಕವಾಗಿ ಅನುಮೋದಿಸುತ್ತಾ ಕೆಲವೊಂದು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಪಕ್ಷಪಾತವಿಲ್ಲದೆ ನಮ್ಮ ಸಚಿವರನ್ನು ನಾವು ಅಭಿನಂದಿಸಬೇಕಾಗುತ್ತದೆ ಬಹಳ ಚಾಣಾಕ್ಷತನದಿಂದ ಆಯವ್ಯಯ ಮಂಡಿಸಿದ್ದಾರೆ. ಕಳೆದ ಒಂದು ದಿವಸದಿಂದ ಕೂಡ ಬುಡ ಆಧಾರವಿಲ್ಲದೆ ವಿರೋಧಪಕ್ಷದವರು ಮಾತನಾಡಿದ್ದನ್ನು ಕೇಳುತ್ತಾ ಇದ್ದೆನು, ಅವರು ಕೂಡ ಒಪ್ಪುತ್ತಾರೆಂದು ಭಾವಿಸುತ್ತೇನೆ. ಅವರಿಗೂ ಕೂಡ ಟೀಕೆಮಾಡಲಿಕ್ಕೆ ಸಾಕಷ್ಟು ಆಹಾರ ದೊರಕಲಿಲ್ಲ ಎಂದು ನನ್ನ ಭಾವನೆ. ಟೀಕೆಗಾಗಿ ಕೆಲವೊಮ್ಮೆ ಟೀಕಿಸುವ ಮನೋವೃತ್ತಿ ಅವರಿಗೆ ಇದೆ. ಈ ದೃಷ್ಟಿಯಿಂದ ಕೆಲವು ವಿಚಾರಗಳನ್ನು ಟೀಕಿಸುವ ಧೈರ್ಯವನ್ನು ಅವರು ಮಾಡಿರಬಹುದೇ ವಿನಃ ಆಯವ್ಯಯ ಪತ್ರದಲ್ಲಿ ಟೀಕಿಸಲಿಕ್ಕೆ ಸಾಕಷ್ಟು ಅವಕಾಶ ದೊರಕಲಿಲ್ಲ ಎನ್ನುವುದನ್ನು ನಾವು ಒಪ್ಪಲೇಬೇಕಾಗುತ್ತದೆ. ಶ್ರೀಮಾನ್ ತಿಮ್ಮಪ್ಪನವರು ಮಾತನಾಡುತ್ತಾ ಕೆಲವು ವಿಚಾರಗಳನ್ನು

ಹೇಳಿದರು. ಈ ಜನತೆಗೆ ಈ ಒಂದು ವರ್ಷದ ಈ ಆಯವ್ಯಯ ಪತ್ರವನ್ನು ಕಂಡು ಬಹಳ ಆಸಕ್ತಿಯಿಂದ ತಮ್ಮ ಮುಂದಿನ ಜೀವನದ ಯೋಜನೆ ಯಾವ ರೀತಿಯಲ್ಲಿ ಸುಗಮ ಆದೀತು ಎಂದು ಬಹಳ ಆತುರ ತೋರಿಸುತ್ತಿದ್ದಾರೆ. ಇದರಲ್ಲಿ ಅವರಿಗೆ ಸಾಕಷ್ಟು ಅವಕಾಶ ದೊರಕಲಿಲ್ಲ ಎನ್ನುವುದನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಘೋಷಣೆಯಲ್ಲೂ ಕೂಡ ಅಸಮಾನತೆ ಹೋಗಬೇಕು, ಉಳುವವನೇ ಹೊಲದ ಒಡೆಯ ಆಗಬೇಕು, ಎನ್ನುವುದು. ಉದ್ಯೋಗಾವಕಾಶದ ದಿಶೆಯಲ್ಲಿ ಕಾರ್ಯೋನ್ಮುಖರಾಗಿಲ್ಲವೆಂದು ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಬಹುಶಃ ಒಂದು ವಿಚಾರವನ್ನು ಹೇಳಿದರೆ ಉತ್ಪ್ರೇಕ್ಷೆ ಎಂದು ಭಾವಿಸುವುದಿಲ್ಲವೆಂದು ಭಾವಿಸಿದ್ದೇನೆ. ಅಸಮಾನತೆ ನೀಗಿಸಲಿಕ್ಕೆ ಯೋಗ್ಯ ಮಾರ್ಗದರ್ಶನವನ್ನು ಈಗಾಗಲೇ ಮಾಡಿದ್ದಾರೆ. ಆ ದಿಶೆಯಲ್ಲಿ ಕಾರ್ಯೋನ್ಮುಖರಾಗಿದ್ದಾರೆಂದು ಒಪ್ಪುತ್ತಾರೆ ಎಂದು ತಿಳಿದಿದ್ದೇನೆ. ಭೂಮಿತಿ ಚರ್ಚೆಯಾಗಿರುವುದು, ಇನ್ನು ನಗರಗಳ ಆಸ್ತಿ ಮಿತಿ ಜಾರಿಗೆ ಬಂದಾಗ ಅಸಮಾನತೆ ಹೋಗಲಾಡಿಸುವುದಕ್ಕೆ ಹೆಜ್ಜೆ ಇಟ್ಟಿದ್ದಾರೆ. ಉಳುವವನೇ ಭೂಮಿ ಒಡೆಯ ಎನ್ನುವುದಕ್ಕೆ ಭೂ ಮಸೂದೆ ಜಾರಿಗೆ ಬಂದಾಗ ಉಳುವವನಿಗೆ ಖಂಡಿತ ನೆಲ ಸಿಕ್ಕುತ್ತದೆ. ಅಸಮಾನತೆ ಹೋಗಲಾಡಿಸುವುದಕ್ಕೆ ಮಾರ್ಗವಾಗುತ್ತದೆ ಎಂದು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಕೆಲವೊಂದು ವಿಚಾರ ಹೇಳಬೇಕಾಗುತ್ತದೆ. ತಿಮ್ಮಪ್ಪನವರು ಹೇಳಿದ್ದನ್ನು ವಿರೋಧಪಕ್ಷದವರು ಹೇಳುತ್ತಾರೆ. ಆ ವಿಚಾರವನ್ನು ನಾವು ಒಪ್ಪಲಿಕ್ಕೆ ಬೇಕಾಗುತ್ತದೆ ಅಸಮಾನತೆ ಹೋಗಲಾಡಿಸುವ ವಿಚಾರದಲ್ಲಿ ಉತ್ಪನ್ನದ ಮೇಲೆ ಮಿತಿಯನ್ನು ಹೇರಬೇಕಾಗುತ್ತದೆ. ಭೂಮಿತಿ ಮತ್ತು ನಗರದ ಆಸ್ತಿಮಿತಿಯಿಂದಲೇ ಅಸಮಾನತೆ ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಉತ್ಪನ್ನದ ಮೇಲೆ ಮಿತಿಯನ್ನು ಹೇರಬೇಕಾಗುತ್ತದೆ. ಕನಿಷ್ಟ ಮಿತಿಯನ್ನು ಹೇರಬೇಕಾಗುತ್ತದೆ. ಈ ದಿಶೆಯಲ್ಲಿ ಸೂಕ್ತ ಕಾರ್ಯಕ್ರಮವನ್ನು ನಿರೂಪಿಸಿಕೊಳ್ಳಬೇಕಾಗುತ್ತದೆಂದು ಒಪ್ಪುತ್ತೇನೆ. ಕನಿಷ್ಠ ಸೌಕರ್ಯಗಳು ಈ ವಿಚಾರದಲ್ಲಿ ಮಾತನಾಡುವಾಗ ನಾವು ಸಾಕಾದಷ್ಟು ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆಂದು ಮುಂಗಡ ಪತ್ರವನ್ನು ಅಭ್ಯಾಸ ಮಾಡಿದಲ್ಲಿ ಅವರು ಒಪ್ಪಿಕೊಳ್ಳುತ್ತಾರೆ. ಕನಿಷ್ಠ ಸೌಕರ್ಯಗಳು ಯಾವುದು ಮುಖ್ಯವಾದುವು ಅನ್ನ, ಬಟ್ಟೆ, ವಿದ್ಯೆ ಮತ್ತು ವೈದ್ಯಕೀಯ ಸವಲತ್ತು ಇವೆಲ್ಲವೂ ಮನುಷ್ಯನಿಗೆ ಕನಿಷ್ಠ ದೊರಕಬೇಕು. ಈ ಕಾರ್ಯಕ್ರಮವನ್ನು ನಾವೆಲ್ಲರೂ ಒಪ್ಪಿಕೊಳ್ಳುವ ವಿಚಾರ. ಇದರಲ್ಲಿ ಆಹಾರದ ವಿಚಾರ ಹೆಚ್ಚಿಗೆ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ಸಂದರ್ಭಬಂದಾಗ ಕೆಲವೊಂದು ವಿಚಾರ ಮಾತನಾಡುತ್ತೇನೆ.

ವಸತಿ ಸೌಕರ್ಯ ಬಗ್ಗೆ ಮಿತ್ರರು ಮಾತನಾಡಿದ್ದಾರೆ. ಮಾತನಾಡುವಾಗ 5 ಕೋಟಿ ರೂಪಾಯಿ ಮೀಸಲಾಗಿಟ್ಟಿದೆ. ಗೃಹನಿರ್ಮಾಣಕ್ಕೆ ಏನು ಒದಗಿಸಿದೆ ಅದರ ವಿಚಾರವಾಗಿ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಸಿದ್ದಪ್ಪನವರು ಅದಕ್ಕೆ ಕಾರಣ ಕಾಣುತ್ತಾ ಇಲ್ಲ. 5 ಕೋಟಿ ರೂಪಾಯಿ ಯೋಜನೆ ಪ್ರಥಮ ಹಂತವಾಗಿ ಸರ್ಕಾರ ತೆಗೆದುಕೊಂಡಿದೆಯೇ ಹೊರತು 5 ಕೋಟಿ ರೂಪಾಯಿನಲ್ಲಿ ರಾಜ್ಯದ ಎಲ್ಲಾ ಸೌಕರ್ಯ ನಿರ್ಮಾಣ ಮಾಡುತ್ತೇವೆಂದು ವ್ಯಕ್ತಪಡಿಸಲಿಲ್ಲ. ಇರುವ ನಮ್ಮ ಸಂಪನ್ಮೂಲಗಳಲ್ಲಿ 5 ಕೋಟಿ ರೂಪಾಯಿ ಬಂಡವಾಳವನ್ನು ವಸತಿ ನಿರ್ಮಾಣ ಕಾರ್ಯಕ್ಕಾಗಿ ತೆಗೆದು ಇಟ್ಟಿದ್ದಾರೆ. ಎಲ್ಲರೂ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ವೈದ್ಯಕೀಯ ಸೌಲತ್ತು ವಿಚಾರವಾಗಿ ಕೆಲವೊಂದು ವಿಚಾರ ನನ್ನ ಸ್ನೇಹಿತರು ಮಾತನಾಡಿದರು ಅಲ್ಲೂ ಕೂಡ ಅಸಮಾನತೆ ಕಾಣುತ್ತಾ ಇದೆ. ರಾಜ್ಯರಾಜ್ಯದಲ್ಲಿನ ಅಸಮಾನತೆಯನ್ನು ಹೋಗಲಾಡಿಸಲಿಕ್ಕೆ ಸೂಕ್ತಕ್ರಮ ಕೈಗೊಳ್ಳಬೇಕಾಗುತ್ತದೆ. ರಾಜ್ಯರಾಜ್ಯದಲ್ಲಿ ತಾಲ್ಲೋಕುಮಟ್ಟದಲ್ಲಿ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ರಾಜ್ಯಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ವೈದ್ಯಕೀಯ ವಿಚಾರ ಯೋಚಿಸುವುದಾದರೆ ಸಂಪನ್ಮೂಲಗಳು ಏನು ಇವೆ ವೈದ್ಯಕೀಯ ಸವಲತ್ತುಗಳನ್ನು ಉಪಯೋಗಿಸುವುದು ಕೇವಲ ನಗರದಲ್ಲಿ. ಹಳ್ಳಿಗಳಲ್ಲಿ ಅದರಲ್ಲೂ ಮಲೆನಾಡು ಪ್ರದೇಶಗಳಲ್ಲಿ. ಹೆಚ್ಚಿಗೆ ಅಭಿವೃದ್ಧಿಯಾಗುತ್ತಾ ಇಲ್ಲ ಸರ್ಕಾರದ ಧೋರಣೆ ಹಳ್ಳಿಗಳಲ್ಲಿ ಏನಾದರೂ ಆಸ್ಪತ್ರೆ ಪ್ರಾರಂಭಿಸಬೇಕಾದರೆ ಅಲ್ಲಿ ಒಂದು 15 ಸಾವಿರ ಜನಸಂಖ್ಯೆ ಇರಬೇಕು ಎನ್ನುವ ಒಂದು ಧೋರಣೆ ಇದೆ. ಮಲೆನಾಡು ಹಳ್ಳಿಗಳಲ್ಲಿ ನೋಡಲಿಕ್ಕೆ ಕೂಡ 4–6 ಹಳ್ಳಿಗಳನ್ನು ಒಟ್ಟು ಮಾಡಿದರೆ 15 ಸಾವಿರ ಜನಸಂಖ್ಯೆ ಆಗುವುದು ಅಸಾಧ್ಯ. 5–6 ಮೈಲಿ ಅಂತರ ಇರುವಾಗ ಮಲೆನಾಡು ಪ್ರದೇಶಗಳಿಗೆ ವೈದ್ಯಕೀಯ ಸವಲತ್ತು ಒದಗಿಸುವುದು ಸರ್ಕಾರದ ಕರ್ತವ್ಯ ಜನಸಂಖ್ಯೆಯ ರೂಲು ಏನು ಇದೆ ಅದನ್ನು ತೆಗೆದು ಹಾಕಬೇಕಾಗುತ್ತದೆ. ಪ್ರತಿ ಗ್ರಾಮಪಂಚಾಯಿತಿಗೆ ಕೂಡ ವೈದ್ಯಕೀಯ ಸೌಲತ್ತು ಒದಗಿಸುವ ಅತ್ಯವಶ್ಯಕವಾಗಿದೆ ಎಂದು ಭಾವಿಸುತ್ತೇನೆ.

ವಸತಿ ಗೃಹನಿರ್ಮಾಣ ಕಾರ್ಯದಲ್ಲಿ ಮಲೆನಾಡು ಪ್ರದೇಶಕ್ಕೆ ಹೆಚ್ಚಿನ ಸೌಕರ್ಯ ದೊರಕಲಿಕ್ಕೆ ತೊಂದರೆಯಾಗಿದೆ. ಅಲ್ಲಿ ಬೆಟ್ಟಕಾಡುಗಳು ಗುಂಪುಗುಂಪಾಗಿ ಇರುವುದರಿಂದ ವಸತಿ

(ಶ್ರೀ ಎ. ಜಿ. ಕೊಡಗಿ)

ನಿವೇಶನ ಕಟ್ಟುವುದಕ್ಕೆ ಸ್ವಲ್ಪ ಅನಾನುಕೂಲವಿವೆ. ಆದರೆ ಹಳ್ಳಿಗಾಡಿನ ಅದರಲ್ಲೂ ಮಲೆನಾಡಿನ ಪ್ರದೇಶಗಳಲ್ಲಿ ಎಲ್ಲಿ ವಾಸಮಾಡುತ್ತಾರೆ. ಎಲ್ಲಿ ಕೆಲಸಕಾರ್ಯಗಳು ಜರುಗುತ್ತವೆ. ಅಲ್ಲಿ ಸ್ಥಳಗಳನ್ನು ಕೊಡಬೇಕಾಗುತ್ತದೆ. 8-10 ಮೈಲಿ ಮಧ್ಯೆ ಹಳ್ಳಿಗಾಡಿನ ಪ್ರದೇಶದಲ್ಲಿ ಕೇಂದ್ರವನ್ನು ಮಾಡಿ ವಸತಿ ಸೌಕರ್ಯ ಏರ್ಪಾಡುಮಾಡಿಕೊಟ್ಟು ಗೃಹನಿರ್ಮಾಣ ಮಾಡಿದರೂ ಅದರಿಂದ ಅನೇಕರಿಗೆ ಉಪಯೋಗ ದೊರಕುತ್ತಾ ಇಲ್ಲ. ಯಾವುದೋ ಮೂಲೆಯಲ್ಲಿ ಮನೆ ಮಾಡಿಕೊಂಡಿದ್ದರೆ ಅವನಿಗೆ ಉಪಯೋಗವಾಗುವುದಿಲ್ಲ. ಆದ್ದರಿಂದ ಆತನು ಎಲ್ಲಿ ವಾಸ ಮಾಡುತ್ತಿದ್ದಾನೆಯೋ ಅಲ್ಲಿ ಅವನಿಗೆ ವಸತಿಗೆ ಅವಕಾಶಮಾಡಿಕೊಟ್ಟು, ಗೃಹ ನಿರ್ಮಿಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

5-00 P.M.

ಬರಗಾಲ ನಮ್ಮ ರಾಜ್ಯದಲ್ಲಿ ಬಂದಿದೆ. ರಾಜ್ಯದ ಸಂಪನ್ಮೂಲಗಳಲ್ಲಿ ಹೆಚ್ಚಿನ ಅಂಶ ಬರಗಾಲ ಪೀಡಿತ ಪ್ರದೇಶಗಳಿಗೆ ಒಯ್ಯುವಂಥ ಸನ್ನಿವೇಶ ಬಂದಿದೆ. ಅದಕ್ಕೆ ನಾನು ಆಕ್ಷೇಪಣೆ ಮಾಡುವುದಿಲ್ಲ. ಕಳೆದ 25 ವರ್ಷಗಳಿಂದ ಬರಗಾಲದ ಪರಿಹಾರಕ್ಕೆ ಶಾಶ್ವತವಾದ ಯಾವ ಕ್ರಮವನ್ನೂ ಕೈಗೊಂಡಿಲ್ಲ. ತಾತ್ಕಾಲಿಕವಾಗಿ ಅಲ್ಲಲ್ಲಿ ರಸ್ತೆಗಳನ್ನು ನಿರ್ಮಿಸಿ ಕೇವಲ ಉದ್ಯೋಗಾವಕಾಶವನ್ನು ಒದಗಿಸಿಕೊಟ್ಟರು. ಆದರೆ ಬರಗಾಲವನ್ನು ತಪ್ಪಿಸಲಿಕ್ಕೆ ಶಾಶ್ವತವಾದ ಯಾವ ಪರಿಹಾರ ಕಾರ್ಯವನ್ನೂ ಕೈಗೊಳ್ಳದೆ ಇದ್ದುದರಿಂದ ಈ ಹೊತ್ತು ಈ ಕಷ್ಟವನ್ನು ಅನುಭವಿಸುತ್ತಿದ್ದೇವೆ. ಇನ್ನಾದರೂ ಕೂಡ ಶಾಶ್ವತವಾದ ಪರಿಹಾರ ಕಾರ್ಯವನ್ನು ಕೈಗೊಳ್ಳಲೇ ಬೇಕಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ಕಾರ್ಯೋನ್ಮುಖವಾಗಬೇಕು. ಸರ್ಕಾರ ಈಗ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು, ಮಧ್ಯಮವರ್ಗದ ನೀರಾವರಿ ಯೋಜನೆಗಳು ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುತ್ತಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ರಾಜ್ಯದ ಇತರ ಭಾಗಗಳನ್ನು ಕೂಡ ಈ ಸಂದರ್ಭದಲ್ಲಿ ಕಡೆಗಣಿಸುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಬೊಕ್ಕಸದಿಂದ 8 ಜಿಲ್ಲೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿದ್ದಾರೆ. ಕ್ಷಾಮ ಪರಿಹಾರನಿವಾರಣೆಗಾಗಿ ಖರ್ಚು ಮಾಡುವುದಕ್ಕೆ ನಾನು ಬಹಳ ಸಂತೋಷ ವ್ಯಕ್ತಪಡಿಸುತ್ತೇನೆ. ಇನ್ನೂ ಹಿಂದುಳಿದ ಪ್ರದೇಶಗಳಲ್ಲಿಯೂ ನಮ್ಮ ಸಂಪನ್ಮೂಲಗಳನ್ನು ತೊಡಗಿಸದೆ ಇದ್ದರೆ ಅಸಮತೆಯುಂಟಾಗಲಿಕ್ಕೆ ಸಾಧ್ಯವಾಗುತ್ತದೆ. ರಾಜ್ಯದಲ್ಲಿರುವ ಯಾವತ್ತೂ ಭಾಗ ಅಭಿವೃದ್ಧಿಯಾಗುವಂತೆ ಮಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ. – ಬರಗಾಲ ಪ್ರದೇಶದಲ್ಲಿ ಖರ್ಚು ಮಾಡುತ್ತಿರುವುದು ಕೇಂದ್ರದಿಂದ ನಿರೀಕ್ಷೆ ಮಾಡಿರುವ ಹಣ. ರಾಜ್ಯದ ಬೇರೆ ಭಾಗದಲ್ಲಿ ಏನು ಖರ್ಚಾಗಬೇಕು ಅದನ್ನು ಆ ಕಡೆ ಖರ್ಚು ಮಾಡುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ವೇಳೆ ಕೇಂದ್ರ ಸರ್ಕಾರದಿಂದ ನಿರೀಕ್ಷೆ ಮಾಡಿದಂಥ ಹಣ ಬರಲಿಲ್ಲವೆಂದರೂ ಖರ್ಚುಮಾಡಬೇಕಾದ ಹಣವನ್ನು ಖರ್ಚು ಮಾಡಲೇಬೇಕು ? ಅವಾಗ ಬೇರೆ ಭಾಗಕ್ಕೆ ಒದಗಿಸಿರುವ ಹಣವನ್ನು ತೆಗೆದುಹಾಕುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ನಾವು ಬರಗಾಲ ಪ್ರದೇಶದಲ್ಲಿ ಎಷ್ಟು ಹಣ ಖರ್ಚು ಮಾಡುತ್ತೇವೆ ಅದು ಕೇಂದ್ರದಿಂದ ಬರುವುದಿಲ್ಲವೆಂದು ಮಾನ್ಯ ಸದಸ್ಯರು ಏಕೆ ನಿರೀಕ್ಷಿಸಬೇಕು ? ನಾವು ಎಷ್ಟು ಖರ್ಚು ಮಾಡುತ್ತೇವೆ ಅಷ್ಟೂ ಕೇಂದ್ರದಿಂದ ಬರುತ್ತದೆ ಎನ್ನುವ ಭರವಸೆ ಸಂಪೂರ್ಣವಾಗಿ ಸರ್ಕಾರಕ್ಕೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಬಜೆಟ್ಟಿನಲ್ಲಿರುವ ಅನೇಕ ಕಾಮಗಾರಿಗಳನ್ನು ಬೇರೆ ಕಡೆ ತೆಗೆದುಕೊಳ್ಳದೆ ಹಾಗೆಯೆ ಕೈ ಬಿಟ್ಟಿದ್ದಾರೆ.

ಶ್ರೀ ಎ. ಜಿ. ಕೊಡಗಿ.—ಅರ್ಥಮಂತ್ರಿಗಳು ಹೇಳಿದ ವಿವರಣೆ ಸಮರ್ಪಕವಾಗಿದ್ದರೂ ಕೂಡ ನಮಗೆ ಒಂದು ಆಶ್ಚರ್ಯಕ್ಕೆ ಕಾರಣವಿದೆ. ಗ್ರಾಮಾಂತರ ರಸ್ತೆ ಯೋಜನೆಯನ್ನು ಇಡೀ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿಯೂ ಕೂಡ ಕೈಕೊಂಡಿದ್ದಾರೆ. ಇದು ಬಹಳ ಸ್ತುತ್ಯವಾದ ಕಾರ್ಯ. ಹಳ್ಳಿಗಾಡಿನಲ್ಲಿ ಅಥವಾ ನಮ್ಮ ನಮ್ಮ ಕ್ಷೇತ್ರಗಳಲ್ಲಿ ತಲೆ ಎತ್ತಿಕೊಂಡು ಹೋಗುವ ಪ್ರಸಂಗವಿದ್ದರೆ ಅದು ಗ್ರಾಮಾಂತರ ರಸ್ತೆ ಯೋಜನೆ. ಅದಕ್ಕೆ ಶ್ರೀಮಾನ್ ಚನ್ನಬಸಪ್ಪನವರನ್ನು ಎಷ್ಟೊಂದು ಹೊಗಳಿದರೂ ಸಾಲದು. ಆದರೆ ಈ ಮಧ್ಯದಲ್ಲಿ ಹಣದ ಅಡಚಣೆಯಿಂದ ಆ ಕೆಲಸ ನಿಂತು ಹೋಗಿದೆ

ಎಂದು ನಮ್ಮ ಗಮನಕ್ಕೆ ಬಂದಿದೆ. ಹಳ್ಳಿಗಾಡಿನ ರಸ್ತೆ ಯೋಜನೆ ಅನೇಕ ಕಡೆಗಳಲ್ಲಿ ತೆಗೆದುಕೊಳ್ಳಬೇಕು. ಸಂಕ, ಮೋರಿ ಮುಂತಾದ ಕಾರ್ಯಕ್ರಮಗಳು ನಿಲ್ಲುವಂಥ ಪ್ರಸಂಗ ಬಂದರೆ ಬಹಳಷ್ಟು ಗೊಂದಲವುಂಟಾಗಿ ಬೇರೆ ಬೇರೆ ಜಿಲ್ಲೆಯ ಜನತೆಗೆ ಅಸಂತೋಷ ಅಥವಾ ಅಸಂತೃಪ್ತಿ ಉಂಟಾದೀತು ಎನ್ನುವ ವಿಚಾರವನ್ನು ನಾನು ಅರ್ಥ ಮಂತ್ರಿಗಳ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಕೇವಲ ಕ್ಷಾಮ ಪ್ರದೇಶಗಳಲ್ಲಿ ಮಾತ್ರ ನೀರಾವರಿ ಯೋಜನೆಗಳನ್ನು ಕೈಕೊಂಡು ಇನ್ನಿತರ ಪ್ರದೇಶಗಳಲ್ಲಿ ಕೈ ಬಿಟ್ಟರೆ ಪರಿಣಾಮ ಅಷ್ಟು ಒಳ್ಳೆಯದಾಗುವುದಿಲ್ಲ. ಹಿಂದಿನ ಸರ್ಕಾರ ಏನು ತಪ್ಪು ಮಾಡಿತೋ ಅದನ್ನು ಸರಿಪಡಿಸುವ ಜವಾಬ್ದಾರಿಯನ್ನು ನಾವು ಹೊತ್ತಿದ್ದೇವೆ. ಕಳೆದ 25 ವರ್ಷಗಳಲ್ಲಿ ಈ ಯೋಜನೆಗಳನ್ನು ಕೈಬಿಟ್ಟಿದ್ದೇ ಈಗ ಬರಗಾಲ ಬರುವುದಕ್ಕೆ ಕಾರಣ. ಬರಗಾಲ ಬಂದಿರುವ ಕಡೆ ಎಲ್ಲ ನೀರಾವರಿ ಯೋಜನೆಗಳನ್ನೂ ತೆಗೆದುಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಅದೇ ವೇಳೆಗೆ ಇತರ ಪ್ರದೇಶಗಳಲ್ಲಿನ ನೀರಾವರಿ ಯೋಜನೆಗಳನ್ನು ಕೈಬಿಟ್ಟರೆ ರಾಜ್ಯದ ಭವಿಷ್ಯಕ್ಕೆ ಮುಂದೆ ಗಂಡಾಂತರಕಾರಿ ಪರಿಣಾಮ ಬೀರಬಹುದು ಎಂದು ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಕಾದಷ್ಟು ನೀರಿನ ಅನುಕೂಲತೆಗಳಿವೆ, ನಿಮಗೆ ತೋಂದರೆ ಇಲ್ಲ. ಸಮೃದ್ಧವಾಗಿ ಬೆಳೆ ತೆಗೆದುಕೊಳ್ಳಬಹುದು ಎಂದು ಹೇಳುತ್ತಾರೆ. ನಮ್ಮ ಭಾಗದಲ್ಲಿ 120 ರಿಂದ 180 ಅಂಗುಲ ಮಳೆಯಾದರೂ, ಸಕಾಲದಲ್ಲಿ ಬಾರದ ಅಕಾಲದಲ್ಲಿ ಮಳೆ ಬಂದು ಬೆಳೆ ಹಾನಿಯಾದಂಥ ನೆರೆ ಹಾವಳಿ ತೊಂದರೆಯುಂಟು ಮಾಡಿದಂಥ ಸನ್ನಿವೇಶಗಳು ಹಲವಾರು ಇವೆ. ಪ್ರತಿ ವರ್ಷ ನಾವು ಇವನ್ನು ನೋಡುತ್ತಿದ್ದೇವೆ. ಅದನ್ನು ತಡೆಗಟ್ಟಲು ಒಂದು ಯೋಜನೆಯನ್ನು ಇದುವರೆಗೂ ತೆಗೆದುಕೊಂಡಿಲ್ಲ. ಶಾಶ್ವತವಾಗಿ ನೆರೆಹಾವಳಿಯನ್ನು ತಡೆಗಟ್ಟಲಿಕ್ಕೆ ಯೋಜನೆಯನು ಸರ್ಕಾರ ತೆಗೆದುಕೊಳ್ಳದೆ ಇದ್ದರೆ ನಮ್ಮ ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಾಣಿಸಿದಂತಾದೀತು ಎಂದು ನಾನು ಹೇಳುತ್ತೇನೆ. ನಮ್ಮ ಜಿಲ್ಲೆಯ ನದಿಗಳ ನೀರನ್ನು ಉಪಯೋಗಮಾಡಲಿಕ್ಕೆ ಯಾವ ಯೋಜನೆಗಳನ್ನು ತೆಗೆದುಕೊಂಡಿಲ್ಲ. ಎಲ್ಲ ನದಿಗಳ ನೀರನ್ನೂ ಉಪಯೋಗ ಪಡಿಸಿದರೆ ಲಕ್ಷಾಂತರ ಎಕರೆ ಭೂಮಿಯನ್ನು ಬತ್ತದ ಬೆಳೆ ಬೆಳೆಯಲಿಕ್ಕೆ ಮಾರ್ಪಡಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಇಡೀ ಮೈಸೂರು ರಾಜ್ಯದಲ್ಲಿ ಬೇಕಾದ ಆಹಾರದ ಉತ್ಪಾದನೆಯಲ್ಲಿ ಬಹುಭಾಗವನ್ನು ನಾವು ಬೆಳೆಯಲಿಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಮತ್ತು ಹೆಚ್ಚು ಆಹಾರ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃತಕ ಆಹಾರಭಾವ ನಿರ್ಮಾಣವಾಗಿದೆ. ಇದನ್ನು ಕೂಡ ಮುಂದೆಹೋಗಲಾಡಿಸುವುದಕ್ಕೆ ಅವಕಾಶವಾಗುತ್ತದೆ. 89 ಸಣ್ಣ ನೀರಾವರಿ ಯೋಜನೆಗಳು ಸರ್ಕಾರದ ಮುಂದೆ ಇವೆ. ಯಾವ ಯೋಜನೆಗೂ ಸರ್ಕಾರದ ಮಂಜೂರಾತಿ ದೊರೆಯುತ್ತಿಲ್ಲ. ಇದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ನೀರಾವರಿ ಯೋಜನೆಗಳನ್ನೂ ತೆಗೆದುಕೊಳ್ಳಲು ಅಸಾಧ್ಯವಾದ ಪರಿಸ್ಥಿತಿ ನಿರ್ಮಾಣವಾಗಿದೆ. 10 ಸಾವಿರ, 20 ಸಾವಿರ 25 ಸಾವಿರ ಅಂದಾಜಿನ ಯೋಜನೆಗಳಿಗೆ ಕೂಡ ಸರ್ಕಾರದ ಮಂಜೂರಾತಿ ದೊರಕಬೇಕಾದ ಪರಿಸ್ಥಿತಿ ಇದೆ. ಬೇರೆ ಕಾಮಗಾರಿಗಳಲ್ಲಿ ಒಂದು ಲಕ್ಷ ರೂಪಾಯಿವರೆಗೂ ಸೂಪರಿಂಟೆಂಡಿಂಗ್ ಇಂಜನಿಯರ್ ಅವರಿಗೆ ಮಂಜೂರು ಮಾಡಲು ಅಧಿಕಾರ ಇದೆ. ಕೇವಲ ಐದು ಸಾವಿರ ರೂಪಾಯಿ ಅಂದಾಜಿನ ಹೊಸ ನೀರಾವರಿ ಯೋಜನೆ ಕೈಕೊಳ್ಳಬೇಕಾದರೂ ಸರ್ಕಾರದ ಮುಂದೆ ಬಂದು ಅದಕ್ಕೆ ಮಂಜೂರಾತಿ ದೊರಕಬೇಕಾಗುತ್ತದೆ. ಇದರಿಂದ ಅನೇಕ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿಲ್ಲ.

ನಮ್ಮ ಜಿಲ್ಲೆಯಲ್ಲಿ ಒಂದು ಲಕ್ಷ ರೂಪಾಯಿ ವೆಚ್ಚದ ಹಾಲಾಡಿ ಯೋಜನೆ ಮದ್ರಾಸ್ ಸರ್ಕಾರದಲ್ಲಿದ್ದಾಗಲೇ ಇನ್‌ವೆಸ್ಟಿಗೇಷನ್ ಆಗಿ, ಹಣ ಕೂಡ ಸಾಕಷ್ಟು ವೆಚ್ಚವಾಗಿದೆ. ಅದರ ವಿಚಾರವಾಗಿ ಕಳೆದ 25 ವರ್ಷಗಳಿಂದ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಅದೇ ರೀತಿ ಬಜೂರ್ ನೀರಾವರಿ ಯೋಜನೆಯನ್ನು ಕೂಡ ಕೈಬಿಟ್ಟಿದ್ದಾರೆ. ಇದಕ್ಕೆ ಕಾರಣ ಗೊತ್ತಾಗಿಲ್ಲ. ನೀರಾವರಿ ಯೋಜನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ನೀರಿನ ಸದುಪಯೋಗ ಪಡೆಯುವುದಕ್ಕೆ ಅವಕಾಶವಿದೆ. ಕೆಲವು ನೀರಾವರಿ ಯೋಜನೆಗಳಿಗೆ ಮಂಜೂರಾತಿ ದೊರಕಬೇಕು ಮತ್ತು ಜಿಲ್ಲೆಯ ಜನರಲ್ಲಿ ಅಸಮಾಧಾನ ಆಗುವುದಕ್ಕೆ ಅವಕಾಶ ಕೊಡಬಾರದೆಂದು ಈ ಸಂಬಂಧದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಉದ್ಯೋಗಾವಕಾಶದ ವಿಚಾರವಾಗಿ ಕೇಂದ್ರ ಸರಕಾರದ ನೆರವು ನೂರು ಕೋಟಿ ರೂಪಾಯಿಗಳು ನಮ್ಮ ರಾಜ್ಯಕ್ಕೆ ಸಾಕಷ್ಟು ದೊರಕುತ್ತದೆ ಎಂಬ ಭರವಸೆ ಕೊಟ್ಟಿದ್ದಾರೆ. ಬಹಳ ಸಂತೋಷ. ಇಲ್ಲಿಯೂ ಕೂಡ ಒಂದು ಧೋರಣೆ ಕಣ್ಣಿಗೆ ಕಾಣುತ್ತಾ ಇದೆ. ಒಂದು ಲಕ್ಷದ 10 ಸಾವಿರ ರೂಪಾಯಿ ವೆಚ್ಚ ಮಾಡಿದಂತೆ ವೈದ್ಯಕೀಯ ವಿದ್ಯಾರ್ಥಿಗಳಿಗೆ 200 ರೂಪಾಯಿ, 400 ರೂಪಾಯಿ ಕೊಡುವಂಥ ಯೋಜನೆ ಸರಕಾರಕ್ಕೆ ಇದೆ. ಗ್ರಾಜುಯೇಟ್ಸ್, ನಾನ್ ಗ್ರಾಜುಯೇಟ್ಸ್ ಏನು ಇದ್ದಾರೆ ಅವರಿಗೆ ಯಾವ ತರಹದ ಉದ್ಯೋಗಾವಕಾಶವೂ ಇಲ್ಲನವರೆಗೂ ನಿರ್ಮಾಣ

(ಶ್ರೀ ಎ. ಜಿ. ಕೊಡಗಿ)

ಮಾಡಿಲ್ಲ. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುವಂತ ವೈದ್ಯಕೀಯ ಪದವೀಧರರಿಗೆ ಸ್ವಂತವಾಗಿ ಕೆಲಸ ಮಾಡಿ ಸಂಪಾದನೆ ಮಾಡುವ ಮಾರ್ಗಗಳು ಇವೆ. ಅವರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಆದರೆ ಬಡ ವರ್ಗ ಮತ್ತು ಮಧ್ಯಮ ವರ್ಗದವರಿಗೆ ಅಂಥ ಉದ್ಯೋಗಾವಕಾಶ ಕಲ್ಪಿಸಿಕೊಡುವಂಥ ಯೋಜನೆ ಇಲ್ಲಿಯವರೆಗೆ ಹಾಕಲಿಲ್ಲ. ಶೀಘ್ರವಾದ ಯೋಜನೆಗಳನ್ನು ರೂಪಿಸಿಕೊಳ್ಳುವ ಅಗತ್ಯ ಇದೆ ಎಂದು ನಾನು ಭಾವಿಸುತ್ತೇನೆ.

ಇನ್ನು ವ್ಯವಸಾಯದ ವಿಚಾರವಾಗಿ ಮಾತನಾಡುತ್ತಾ ಕೆಲವು ವಿಚಾರಗಳನ್ನು ಮಾನ್ಯ ಸಿದ್ದಪ್ಪನವರು ಸಭೆಯ ಮುಂದೆ ಇಟ್ಟಿದ್ದಾರೆ. ನಾನು ಅದನ್ನು ಪುಷ್ಟೀಕರಿಸುತ್ತೇನೆ. ವ್ಯವಸಾಯ ಈಗ ಕಡೆಗಣಿಸಲ್ಪಟ್ಟ ಉದ್ಯೋಗವಾಗಿದೆ. ರೈತ ಯಾವಾಗಲೂ ದುಡಿಯುತ್ತಾನೆ. ಬೆಲೆ ಏರಿದಾಗ ಅವನಿಗೆ ಸ್ವಲ್ಪ ಲಾಭ ಸಿಕ್ಕುತ್ತದೆ. ಆದರೆ ಕೂಡಲೇ ಸರಕಾರದವರು ಮಧ್ಯೆ ಪ್ರವೇಶ ಮಾಡಿ ಬೆಲೆ ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ. ಭತ್ತದ ಧಾರಣೆ ಏರಿದಾಗ ಅದನ್ನು ಇಳಿಸುವ ಕ್ರಮ ತೆಗೆದುಕೊಳ್ಳುತ್ತಾರೆ. ಬೆಲೆ ಕಡಿಮೆ ಆದಾಗ ಮಾತ್ರ ಕೃಷಿಕರಿಗೆ ಹೆಚ್ಚಿನ ಸವಲತ್ತು ದೊರಕಿಸಿ ಕೊಡುವ ಪ್ರಯತ್ನ ಮಾಡುವುದಿಲ್ಲ. ಅಂಥ ಸಂದರ್ಭದಲ್ಲಿ ಅವನಿಗೆ ಹೆಚ್ಚಿನ ಸವಲತ್ತು ದೊರಕುವಂತೆ ಆಗಬೇಕು ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

[MADAM SPEAKER in the Chair]

ಇನ್ನು ಉದ್ದಿಮೆಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಆಡಬೇಕೆಂದು ನನ್ನ ಇಚ್ಛೆ. ಹೆಚ್ಚಿನ ಉದ್ದಿಮೆಗಳು ಆಗುವುದು ಪಟ್ಟಣಗಳಲ್ಲಿ ಮಾತ್ರ ಪಟ್ಟಣಗಳಲ್ಲೇ ಅವು ಕೇಂದ್ರೀಕೃತವಾಗುವ ಹವ್ಯಾಸ ಬೆಳೆದು ಬಂದಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಉದ್ದಿಮೆಗಳನ್ನು ಸ್ಥಾಪಿಸುವಂತ ಒಂದು ಪದ್ಧತಿ ಅಥವಾ ಒಂದು ಧೋರಣೆಯನ್ನು ಸರಕಾರದವರು ರೂಪಿಸಿಕೊಂಡಿದ್ದಾರೆ. ಇದರಿಂದ ಬಹಳಷ್ಟು ಹಾನಿ ಇದೆ. ಆದುದರಿಂದ ಹೊಸ ಉದ್ದಿಮೆಗಳನ್ನು ಸ್ಥಾಪಿಸುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸುವ ಕಾರ್ಯಕ್ರಮವನ್ನು ತೆಗೆದುಕೊಂಡು ಗ್ರಾಮಾಂತರ ಜನರಿಗೆ ಹೆಚ್ಚಿನ ಉದ್ಯೋಗಾವಕಾಶ ನೀಡಿ, ಜನತೆಗೆ ವ್ಯಕ್ತಿ ವ್ಯಕ್ತಿಗಳಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದು ಮಾತ್ರವಲ್ಲ ಜಿಲ್ಲೆ ಜಿಲ್ಲೆ, ತಾಲ್ಲೂಕು ತಾಲ್ಲೂಕು, ಹಳ್ಳಿ ಹಳ್ಳಿಗಳಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಿ ಎಲ್ಲರಿಗೂ ಉದ್ಯೋಗಗಳು ಸಿಕ್ಕುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಸೂಚನೆಯನ್ನು ನಾನು ಪುಷ್ಟೀಕರಿಸುತ್ತೇನೆ. ಪ್ರತಿ ತಾಲ್ಲೂಕಿನಲ್ಲಿ ಹೊಸ ಉದ್ಯಮವನ್ನು ಸ್ಥಾಪಿಸಿ ಉದ್ಯೋಗಾವಕಾಶವನ್ನು ದೊರಕಿಸಿ ಕೊಡುವುದರ ಜೊತೆಗೆ ಸಂಪನ್ಮೂಲಗಳನ್ನು ಬೆಳೆಸುವುದಕ್ಕೆ ಅವಕಾಶಮಾಡಿಕೊಡಬೇಕು. ನನ್ನ ಜಿಲ್ಲೆಯ ವಿಚಾರ ಹೇಳುವುದಾದರೆ ಅದು ಹಿಂದುಳಿದಂಥ ಜಿಲ್ಲೆ. ನಮ್ಮ ಜಿಲ್ಲೆಯಲ್ಲಿ ಕಬ್ಬಿಣದ ಅದಿರು, ಅಲ್ಯೂಮಿನಿಯಂ, ಬಾಕ್ಸೈಟ್ ಆರಣ್ಯ ಸಂಪತ್ತು ಹೇರಳವಾಗಿದೆ. ಆದುದರಿಂದ ನಮ್ಮ ಜಿಲ್ಲೆಯಲ್ಲಿ ಉದ್ಯಮವನ್ನು ಸ್ಥಾಪಿಸುವುದಕ್ಕೆ ಬಹಳ ಅನುಕೂಲಗಳು ಇವೆ. ಮಂಗಳೂರು ಕೆಮಿಕಲ್ ಕಾರ್ಖಾನೆ ಸ್ಥಾಪನೆಯಾಗುತ್ತಾ ಇದೆ. ಅಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳು ಇಲ್ಲ. ನಮ್ಮ ಜಿಲ್ಲೆ ಉದ್ದಿಮೆಗಳಲ್ಲಿ ಬಹಳ ಹಿಂದುಳಿದಂಥ ಪ್ರದೇಶವಾಗಿರುವುದರಿಂದ ಅಲ್ಲಿಗೆ ಹೆಚ್ಚಿನ ಗಮನವನ್ನು ಹರಿಸುವುದು ಒಳ್ಳೆಯದು ಎಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ನೂಲಿನ ಗಿರಣಿಯನ್ನು ನಮ್ಮ ಜಿಲ್ಲೆಯಲ್ಲಿ ಸ್ಥಾಪಿಸುವುದಕ್ಕೆ ಅವಕಾಶ ಇದೆ. ನೇಕಾರರ ಇದ್ದಾರೆ. ನೂಲಿನ ಉತ್ಪಾದನೆ ಕೇಂದ್ರದಿಂದ 5—6 ಗಿರಣಿಗಳನ್ನು ಸ್ಥಾಪಿಸುವ ಯೋಜನೆ ಸರಕಾರಕ್ಕೆ ಇದೆ ಎಂದು ನನ್ನ ಗಮನಕ್ಕೆ ಬಂದಿದೆ. ಒಂದು ಗಿರಣಿಯನ್ನು ಸ್ಥಾಪಿಸುವ ಉದ್ದೇಶ ಮುಂಗಡ ಪತ್ರದಲ್ಲಿ ಕಾಣುತ್ತಿದೆ. ನಮ್ಮ ಜಿಲ್ಲೆಯಲ್ಲಿ ಒಂದು ಗಿರಣಿಯನ್ನು ಸ್ಥಾಪಿಸುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಕೊಡುತ್ತೇನೆ.

ಇನ್ನು ಕುಟುಂಬ ವೇತನದ ವಿಚಾರ. 30 ರಿಂದ 40 ರೂಪಾಯಿಗಳವರೆಗೆ ಏರಿಸಿರುವುದು ಬಹಳ ಸಂತೋಷದ ವಿಚಾರ. ಇಂಟೆಗ್ರೇಷನ್ ಆಗುವ ಮೊದಲು ನಿವೃತ್ತ ಉಪಾಧ್ಯಾಯರಿಗೆ ಯಾವ ಸವಲತ್ತೂ ದೊರಕುತ್ತಾ ಇರಲಿಲ್ಲ. ಕೆಲವರಿಗೆ ಮಾತ್ರ ಈ ಸವಲತ್ತು ಇರುವುದರಿಂದ ಮಾನ್ಯ ವಿದ್ಯಾ ಮಂತ್ರಿಗಳು ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಆದುದರಿಂದ ಉಳಿದವರಿಗೂ ಕೂಡ ಅದರ ಪ್ರಯೋಜನ ದೊರಕುವಂತಾಗಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶೇಕಡಾ 70 ಜನ ಹಳ್ಳಿಗಳಲ್ಲಿ ಇದ್ದುಕೊಂಡು ಬೇಸಾಯ ಮಾಡುವ ಮತ್ತು ಕೃಷಿ

ಕಾರರು ಇರುವಂಥ ಪ್ರದೇಶ ನಮ್ಮದು. ಅವರಿಗೂ ಕೂಡ ಆ ಸವಲತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಈಗ ಇರುವ ಯೋಜನೆ ಪ್ರಕಾರ 70 ವರ್ಷದ ನಂತರ ವೇತನ ಕೊಡುವ ಯೋಜನೆ ಇದೆ. ಅದನ್ನು 65ಕ್ಕೆ ಇಳಿಸಿ ಅವರಿಗೂ ಸಹ ಈ ವೇತನವನ್ನು ಕೊಡುವ ಯೋಜನೆ ಮಾಡಬೇಕೆಂದು ಹೇಳುತ್ತೇನೆ. ಸರಕಾರಿ ನೌಕರರಿಗೆ 58—60 ವರ್ಷ ಆದಮೇಲೆ ಅವರಿಗೆ ನಿವೃತ್ತಿ ವೇತನ ಕೊಡುವ ಯೋಜನೆ ಇದೆ. ಅದೇ ತರಹ ಇನ್ನಿತರ ರಂಗದಲ್ಲಿ ಇರುವವರಿಗೂ ಆ ಪ್ರಯೋಜನವಾಗಬೇಕೆಂದು ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ವಿಚಾರವಾಗಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟಹಾಗೆ ಹೇಳಬೇಕಾಗಿದೆ. ಸರಕಾರದ ಯೋಜನೆಯಂತೆ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಬಾವಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ಹಳ್ಳಿಯಲ್ಲಿ ಮನೆಗಳು ಒಂದು ಕಡೆ ಇಲ್ಲ. 2 ಅಥವಾ ಮೂರು ಮೈಲಿ ದೂರದಲ್ಲಿ ಇರುತ್ತವೆ. ಬಯಲು ಸೀಮೆಯಲ್ಲಿ ಇದ್ದಹಾಗೆ ಅಲ್ಲಿ ಮನೆಗಳು ಒಂದೇ ಗುಂಪಿನಲ್ಲಿ ಇಲ್ಲದೇ ಇರುವುದರಿಂದ ಅನೇಕ ಯೋಜನೆಗಳು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಅನ್ವಯಿಸದೇ ಹೋಗುತ್ತದೆ. ನಮ್ಮ ಜಿಲ್ಲೆಯಲ್ಲಿ ಒಂದು ಹಳ್ಳಿಯಲ್ಲಿ ನಾಲ್ಕಾರು ಮನೆಗಳು ಇರುವ ಪ್ರದೇಶ ಇದೆ. ಆದುದರಿಂದ ನಮ್ಮ ಜಿಲ್ಲೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ ತೆರಿಗೆ ವಿಚಾರವಾಗಿ ಮಾತನಾಡಿ ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ. ಭತ್ತದ ಮೇಲಿನ ತೆರಿಗೆಯನ್ನು ರದ್ದುಪಡಿಸುವುದರಿಂದ ಅದರ ಧಾರಣೆ ಕಡಿಮೆಯಾಗಬಹುದು ಎಂಬ ಉದ್ದೇಶದಿಂದ ಮಾಡಿದ್ದಾರೆ ಬಹಳ ಸಂತೋಷ. ಅಕ್ಕಿಯ ಮೇಲಿನ ತೆರಿಗೆ ಹಾಗೆಯೇ ಇದೆ. ಅಕ್ಕಿಯ ಮೇಲಿನ ತೆರಿಗೆಯನ್ನು ಕೂಡ ತೆಗೆದರೆ ಅಹಾರಧಾನ್ಯದ ಬೆಲೆ ಕಡಿಮೆಯಾಗಬಹುದು ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಮೀನುಗಾರಿಕೆ ಅತಿ ದೊಡ್ಡದಾದ ಉದ್ಯಮೆ. ವರ್ಷ ಒಂದಕ್ಕೆ 3 ಕೋಟಿ ವಿದೇಶಿ ವಿನಿಮಯಗಳಿಸುವ ಉದ್ಯಮೆಯಾಗಿದೆ. ಸಿಗಡಿ ಮೀನಿಗೆ ಸಿಂಗಲ್ ಪಾಯಿಂಟ್ ಎಂದು 4 ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಅದರಿಂದ ಉದ್ಯಮೆಗೆ ಬಹಳಷ್ಟು ತಡೆ ಉಂಟಾಗುತ್ತದೆಂದು ನನ್ನ ಭಾವನೆ. ಸಿಗಡಿ ಆಹಾರ ವಸ್ತು, ಇದು ಪೆರಿಶ್ಶಬಲ್ ಆರ್ಟಿಕಲ್ ಇದನ್ನು ಮೀನಿನಂತೆ ಪರಿಗಣಿಸಬೇಕೆಂದು ಅರ್ಥ ಮಂತ್ರಿಗಳ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಯಾವುದಕ್ಕೂ ಸಾಧ್ಯವಾಗದೇ ಹೋದರೆ ಈ ಉದ್ಯಮೆಗೆ ತಡೆ ಬರಬಹುದು. ನಮ್ಮ ಜಿಲ್ಲೆಯಲ್ಲಿ ಎಲ್ಲಾ ಉದ್ಯಮೆದಾರರು ಸೇರಿ ಒಂದು ನಿರ್ಣಯ ಮಾಡಿ ಅದನ್ನು ಅರ್ಥ ಮಂತ್ರಿಗಳ ಗಮನಕ್ಕೆ ತರಬೇಕೆಂದಿದ್ದಾರೆ. ಅದುದರಿಂದ ಇದರ ಮೇಲಿರುವ ತೆರಿಗೆಯನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ಬರಗಾಲದ ಸನ್ನಿವೇಶದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಆಯವ್ಯಯ ಪಟ್ಟಿಯನ್ನು ಮಂಡಿಸುವುದು ಕಷ್ಟ. ವಿರೋಧಪಕ್ಷದವರು ಟೀಕೆ ಮಾಡುವುದಕ್ಕೆ ಅವಕಾಶ ಇಲ್ಲದಂತೆ ಮಂಡಿಸಿದ ಅರ್ಥ ಸಚಿವರನ್ನು ಮನಸಾರೆ ಶ್ಲಾಘಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ಘಾಡಿ (ಹಳಿಯಾಳ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತು ಅರ್ಥ ಮಂತ್ರಿಗಳು ಮಂಡಿಸಿದ 1973–74ನೇ ಸಾಲಿನ ಬಜೆಟನ್ನು ನಾನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ. ಕೆಲವು ಸೂಚನೆಗಳನ್ನು ಕೊಡುವ ಮೊದಲು ವಿರೋಧ ಪಕ್ಷದ ಅದರಲ್ಲೂ ಕೌನ್ಸಿಲಿನ ವಿರೋಧ ಪಕ್ಷದ ನಾಯಕರು 10 ವರ್ಷದ ಪಾಪದ ಗಂಟಿನ ವಿಚಾರದಲ್ಲಿ ತಾವು ಅಧಿಕಾರಕ್ಕೆ ಬಂದಾಗ ಮತ್ತು ಅಧಿಕಾರವನ್ನು ಬಿಟ್ಟಾಗ ಅದರ ಅಂಕಿ ಅಂಶಗಳನ್ನು ಮಾರ್ಮಿಕವಾಗಿ ಕೊಟ್ಟಿದ್ದು ಕಂಡುಬರುತ್ತದೆ. ಅವರು ಹೈಸ್ಕೂಲುಗಳ ಸಂಖ್ಯೆ ಎಷ್ಟಿತ್ತು, ಕಾಲೇಜುಗಳ ಸಂಖ್ಯೆ 400 ಇತ್ತು, ಕಾಲೇಜುಗಳ ಸಂಖ್ಯೆ 500 ಇತ್ತು, ಹಾಸ್ಟಲುಗಳು ಇಷ್ಟು ಇತ್ತು, ರಸ್ತೆಗಳು, ಬಾವಿಗಳು ವಗೈರೆ ವಗೈರೆ ಇತ್ಯಾದಿ ಕೆಲಸಗಳ ಬಗ್ಗೆ ಅಂಕೆ ಸಂಖ್ಯೆಗಳನ್ನು ಕೊಟ್ಟು ಮಾತನಾಡುವಾಗ ಇದರ ಎರಡರಷ್ಟು ಇಲ್ಲವೇ ಮೂರರಷ್ಟು ಹೆಚ್ಚಾಗಿತ್ತು ಎಂದು ಹೇಳಿದರು ಮತ್ತು ಇದರ ಬಗ್ಗೆ ಒಂದು ರೀತಿಯ ಶಹಬಾಸ್‌ಗಿರಿಯನ್ನೂ ಪಡೆದುಕೊಂಡರು. ಅವರು ಅಧಿಕಾರ ಮಾಡುವಾಗ ಆಗ ಇದ್ದ ಬಡವರ ಸಂಖ್ಯೆ ಎಷ್ಟು? ಎಷ್ಟು ಜನ ಶ್ರೀಮಂತರಿದ್ದರು ? ಎಷ್ಟು ಜನ ನಿರುದ್ಯೋಗಿಗಳಿದ್ದರು? ಎಷ್ಟು ಜನ ಬಡವರಿದ್ದರು ? ಎಷ್ಟು ಜನ ವಿರೋಧಿಗಳಿದ್ದರು ? ಎಷ್ಟು ಜನ ಕಂಟ್ರಾಕ್ಟರುಗಳಿದ್ದರು ? ಎಷ್ಟು ಜನ ಬ್ಲಾಕ್‌ಮಾರ್ಕೆಟೀಯರುಗಳಿದ್ದರು ? ಎಷ್ಟು ಜನ ಲೈಸನ್ಸ್ ಪಡೆದವರಿದ್ದರು ? ಎಷ್ಟು ಟಿ. ಬಿ. ಗಳು ಹಾಗೂ ಇನ್‌ಸ್ಪೆಕ್ಷನ್ ಬಂಗಲಾಗಳು ಆಗಿದ್ದವು?

(ಶ್ರೀ ವಿ. ಎಂ. ಘಾಡಿ)

ಎಷ್ಟು ಜನ ಕುಡುಕರ ಸಂಖ್ಯೆ ಇತ್ತು? ಇವೆಲ್ಲ ವಿವರಗಳನ್ನೂ ಅವರು ಕೊಡಲಿಲ್ಲ. ಇವನ್ನು ಕೊಟ್ಟಿದ್ದರೆ ಇವರು ಮಾಡಿರುವ ಸಾಧನೆಗಳೇನು ಎನ್ನುವುದನ್ನು ವಿಚಾರ ಮಾಡಿ ಅದರ ಮೇಲೆ ಹೇಳಲಿಕ್ಕೆ ನಮಗೂ ಸಹಾಯವಾಗುತ್ತಿತ್ತು. ಪಾಪದ ಗಂಟು ಎಂದು ನಮ್ಮ ಮೇಜಿನ ಮೇಲೆ ಇಡುತ್ತಿದ್ದಾರೆ. ಒರೇ ಪಾಪದ ಗಂಟನ್ನು ನಮ್ಮ ಮುಖ್ಯ ಮಂತ್ರಿಗಳ ಮೇಜಿನ ಮೇಲೆ ಇಡುವುದಕ್ಕೆ ಬದಲು ನಿಮ್ಮ ಪಾಪದ ಗಂಟನ್ನೆಲ್ಲಾ ದೇವರ ಮುಂದೆ ಇಟ್ಟಿದ್ದರೆ ಆದಕ್ಕೆ ಸೂಕ್ತ ಪರಿಹಾರವನ್ನು ದೇವರು ಕೊಡುತ್ತಿದ್ದರು ಎಂದು ನಾನು ಹೇಳಬಯಸುತ್ತೇನೆ. ಬರಗಾಲದಲ್ಲಿ ಏನೂ ಮಾಡಲಿಲ್ಲ ಎನ್ನುವ ಶಂಕೆಯನ್ನು ಹೇಳುತ್ತಿದ್ದಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, ನಮ್ಮ ಅರ್ಥಿಕ ಮಂತ್ರಿಗಳು ಹಾಗೂ ನಮ್ಮ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಪದೇಪದೇ ಹಾಗೂ ಮೇಲಿಂದ ಮೇಲೆ ಆಶ್ವಾಸನೆ ಕೊಟ್ಟಿದ್ದಾರೆ ಯಾವುದೇ ಪರಿಸ್ಥಿತಿ ಬಂದರೂಕೂಡ ಅದನ್ನು ಧೈರ್ಯದಿಂದ ಎದುರಿಸುತ್ತೇವೆ ಮತ್ತು ಇದಕ್ಕೆ ಎಷ್ಟು ಖರ್ಚು ಬಂದರೂ ಅದನ್ನು ಮಾಡಲು ಹೆದರುವುದಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಎಷ್ಟು ಹೇಳಿದ್ದರೂ ನಮ್ಮ ವಿರೋಧ ಪಕ್ಷದವರು ನಂಬುವುದಿಲ್ಲ. I cannot understand how this idea entered into their mind. ಹಿಂದೆ ಇಲ್ಲಿ. ಒಂದು ವರದಿಯ ಬಗ್ಗೆ ಶರಾವತಿ ಬೋರ್ಡಿನ ಬಗ್ಗೆ ತನಿಖೆ ಮಾಡಲಿಲ್ಲ ಎಂದು ಹೇಳಿದರು. ನಮ್ಮ ಮುಖ್ಯ ಮಂತ್ರಿಗಳು ಮಾಡಿರುವ ಪಾಪದಕೆಲಸಗಳೇನು ಎನ್ನುವುದನ್ನು ಅವರು ಹೇಳಲಿಲ್ಲ. 25 ವರ್ಷಗಳ ಹಿಂದೆ ಸರಕಾರದವರು ಬರಗಾಲ ಪ್ರದೇಶದಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದು ಕೊಳ್ಳಲಿಲ್ಲ ಎಂದು ಇದಕ್ಕೆ ಒಂದು ರೀತಿಯ ಮಾಗ್ನಿಫೈಯಿಂಗ್ ಗ್ಲಾಸ್ ಹಾಕಿಕೊಂಡು ಇದನ್ನು ಪಾಪದ ಗಂಟು ಎಂದು ಹೇಳುತ್ತಾರೆ. ಅವರೇ ಅಧಿಕಾರದಲ್ಲಿದ್ದಾಗ ಬರಗಾಲಕ್ಕಾಗಿ ಖರ್ಚು ಮಾಡಿರುವುದು ಕೇವಲ 20-21 ಕೋಟಿಯಷ್ಟು. ಇವೊತ್ತು ಏಳೆಂಟು ತಿಂಗಳಲ್ಲಿ ಬರಗಾಲಕ್ಕಾಗಿ ಸುಮಾರು 40-45 ಕೋಟಿಯವರೆಗೆ ಖರ್ಚು ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—1968 ರಲ್ಲಿ ಶ್ರೀ ವೀರೇಂದ್ರ ಪಾಟೀಲರು ಅಧಿಕಾರದಲ್ಲಿದ್ದಾಗ ಬಂದ ಬರಗಾಲ ಹೀಗಿರಲಿಲ್ಲ. ಈಗ ಬಂದ ಬರಗಾಲ ಯಾವಾಗಲೂ ಹಿಂದೆ ಬಂದಿರಲಿಲ್ಲ. ಇದು ಅನ್‌ಪ್ರಿಸಿಡೆಂಟೆಡ್ ಬರಗಾಲ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ವಿ. ಎಂ. ಘಾಡಿ.—ಆಗಿನ ಸರಕಾರದಲ್ಲಿದ್ದಾಗ ಎರಡು ಮೂರು ವರ್ಷಕ್ಕಾಗಿ ಸುಮಾರು 30 ಕೋಟಿ ರೂಪಾಯಿ ಖರ್ಚು ಮಾಡಿದರು. ಇಂದು ಈ ಸರಕಾರ ಯಾವ ರೀತಿ ಖರ್ಚು ಮಾಡಿದೆ ಎನ್ನುವುದನ್ನು ಹೇಳದೆ ಬರೀ ಪಾಪದ ಗಂಟು ಎಂದು ಹೇಳಿದರೆ ಇದಕ್ಕೇನು ಹೇಳುವುದು ?

ಶ್ರೀ ಕಾಗೋಡು ತಿಮ್ಮಪ್ಪ —ಆಗ ಇದ್ದ ಶ್ರೀ ಚನ್ನಬಸಪ್ಪನವರೇ ಅಂತಹ ಕರ್ಮಕಾಂಡದ ತನಿಖೆ ಮಾಡಿ ಎಂದು ಹೇಳಿದರೂ ಮಾಡಲಿಲ್ಲ. ಇಂದು ನೀವೇಕೆ ಅದರ ಬಗ್ಗೆ ತನಿಖೆ ಮಾಡಿಸಲು ಪ್ರಯತ್ನ ಮಾಡಬಾರದು ? ಅವರೇನೋ ಪಾಪಮಾಡಿದರು ನೀವು ಅಧಿಕಾರದಲ್ಲಿರುವುದರಿಂದ ಈಗ ನೀವೇ ವಿಚಾರಣೆ ಮಾಡಬಹುದಲ್ಲವೇ ?

ಶ್ರೀ ವಿ. ಎಂ. ಘಾಡಿ.—ಪರಿಷತ್ತಿನ ವಿರೋಧ ಪಕ್ಷದ ನಾಯಕರು ಒಂದು ರಾಜಸ್ಥಾನದ ಗೀತೆಯನ್ನು ಹೇಳಿದರು. ಅದು ಹೀಗಿದೆ :—

> " ಇದು ಗಾಡಿ ಮಗ ನಿನಗೆ ನಡೆಸಲು ತಿಳಿದಿದ್ದರೆ, ಇದು ಪಾಪದ ಗಾಡಿ ತಾತಾ ನೀನೇ ನಡೆಸು, ಇದು ಆಹಾರ ಮಗು, ನಿನಗೆ ತಿನ್ನಲು ತಿಳಿದಿದ್ದರೆ ಇದು ಪಾಪದ ಆಹಾರ ತಾತ ನೀನೇ ತಿನ್ನು. ಇದು ಉದ್ಯಮ ಮಗು, ನಿನಗೆ ಕಾಲಿಡಲು ರೀತಿ ತಿಳಿದಿದ್ದರೆ, ಇದು ಪಾಪದ ಉದ್ಯಮ ತಾತ, ನೀನೇ ಕಾಲಿಡು, ಇದು ಕುದುರೆ ಮಗು, ನಿನಗೆ ಸವಾರಿ ತಿಳಿದಿದ್ದರೆ ಇದು ಪಾಪದ ಕುದುರೆ ತಾತ ನೀನೇ ಸವಾರಿ ಮಾಡು. ಇದು ರಾಜ್ಯದ ಮಕ್ಕಳೇ ನಿಮಗೆ ಆಡಳಿತ ತಿಳಿದಿದ್ದರೆ, ಇದು ಪಾಪದ ಗಂಟಿನಿಂದ ತಾತ, ರಾಜ್ಯ ಕಳಕೊಂಡಿ. "

ಈ ಎಲ್ಲ ಪಾಪದ ವಿಚಾರಗಳನ್ನೂ ಅವರು ಅರ್ಥ ಮಾಡಿಕೊಂಡೇ ಅಧಿಕಾರಕ್ಕೆ ಬಂದಿರುವುದು. ಆದರೆ ಇದರಲ್ಲಿ ನನಗೆ ತೋರುವುದು ಅವರು ಇನ್ನೂ ಅಧಿಕಾರಕ್ಕೆ ಬರಬೇಕು ಎನ್ನುವ ಆಸೆಯಿಂದ ಈ ಮಾತುಗಳನ್ನು ಹೇಳಿದ್ದಾರೆ, ಇಂತಹ ಪಾಪದ ಗಂಟನ್ನು ತನಿಖೆ ಮಾಡಲು ಶರಾವತಿ ಕರ್ಮಕಾಂಡ ಅವರ ಕೈಯ್ಯಲ್ಲೇ ಇತ್ತು. ಆಗಲೇ ಏಕೆ ಅವರು ತನಿಖೆ ಮಾಡಲಿಲ್ಲ ? ಆಗಲೇ ಅವರು ಮಾಡಬಹುದಾಗಿತ್ತು, ಇದನ್ನು ನೋಡಿದರೆ ನಮ್ಮ ವಿರೋಧಿ ಪಕ್ಷಕ್ಕೆ ಏನೋ ಒಂದು ರೀತಿಯ

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ ಕ್ರಮಾಂಕ No.........

ದೆವ್ವಬಡಿದು ಅದು ಪೆಡಂಭೂತವಾಗಿರುವಂತೆ ಒಂದು ರೀತಿಯ ಸಂಶಯಭೂತ ಬಂದಿದೆ. ಇದರಿಂದಾಗಿ ಮೇಲಿಂದ ಮೇಲೆ ಶಂಕೆಗಳನ್ನೇ ಹೇಳುತ್ತಿದ್ದಾರೆ. ಸಾಧಾರಣವಾಗಿ ನಮ್ಮ ರಾಜ್ಯದ ನೌಕರರಿಗೆ ಸೆಂಟ್ರಲ್ ಡಿ. ಎ. ಕೊಡುವ ಧೈರ್ಯವನ್ನು ನಮ್ಮ ರಾಜ್ಯದ ಅರ್ಥಮಂತ್ರಿಗಳು ಬೇರೆ ಯಾವ ರಾಜ್ಯವೂ ಮಾಡದೇ ಇದ್ದರೂ ಧೈರ್ಯದಿಂದ ನಮ್ಮ ಸರಕಾರ ಮಾಡಿದೆ, ಇದೇ ರೀತಿ ಹಿಂದೆ ಯಾರ್ಡ್ ರಿಪೋರ್ಟ್ ಬಂದಾಗಲೂ ಅಂದಿನ ಪರಿಸ್ಥಿತಿ ಯಾವ ರೀತಿ ಇತ್ತು ಅದನ್ನ ನೋಡಿ ಅದರ ಪ್ರಕಾರ ಸೆಂಟ್ರಲ್ ಗೌವರ್ನಮೆಂಟು ಲೆವಲ್‌ಗೆ ಇಂಥ ರಾಜ್ಯ ನೌಕರರಿಗೂ ಡಿ.ಎ. ಜಾಸ್ತಿ ಮಾಡಿದ್ದಾರೆ. ಆಹಾರ ಪದಾರ್ಥಗಳ ಬೆಲೆ ಏರುತ್ತಿರುವುದನ್ನು ಕಂಟ್ರೋಲು ಮಾಡಬೇಕು, ಬೆಲೆ ಏರುವುದನ್ನು ತಡೆಗಟ್ಟಿದ್ದರೆ ಇಷ್ಟು ಹೆಚ್ಚು ಡಿ ಎ. ಕೊಡುವ ಅವಶ್ಯಕವೇ ಇರಲಿಲ್ಲ. ಬೆಲೆಯನ್ನು ಹತೋಟಿಯಲ್ಲಿಡಲಾಗದುದರಿಂದ ಇಂದು ಡಿ. ಎ. ಹೆಚ್ಚು ಮಾಡಬೇಕಾಗಿ ಬಂದಿದೆ, ಇನ್ನು ಮುಂದಾದರೂ ಬೆಲೆಗಳ ಏರಿಕೆಯನ್ನು ಹತೋಟಿಯಲ್ಲಿಡಬೇಕು.

ಇನ್ನೊಂದು ಬಡ್ಜೆಟ್ಟಿನಲ್ಲಿ ನಮಗೆ ಕಂಡುಬರುವುದು ಐದು ಕೋಟಿ ರೂಪಾಯಿಗಳನ್ನು ಹೌಸಿಂಗಾಗಿ ಒದಗಿಸಿರುವುದು ಸ್ತುತ್ಯಾರ್ಹವಾದುದು ಹಾಗೂ ಸೂಕ್ತವಾದುದು. ಸಮಾಜವಾದವನ್ನು ನಾವು ತರುವ ಹಾದಿಯಲ್ಲಿ ಇದು ಒಂದು ಮೊದಲ ಹೆಜ್ಜೆ. ಇದಕ್ಕೆ ಬೇರೆ ರೀತಿ ನಮ್ಮ ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರು ಹೋಲಿಸಿದರು. ನಮಗೆ ಐದು ಕೋಟಿ ರೂಪಾಯಿ ಯೋಜನೆ ಮಾಡಿರುವುದು ತುಂಬಾ ಸ್ವಾಗತಾರ್ಹವಾದುದು. ಮುಖ್ಯವಾಗಿ ಜನಕ್ಕೆ ಬೇಕಾಗಿರುವುದು, ವಸತಿ, ಹೊಟ್ಟೆಗೆ ಅನ್ನ ಹಾಗೂ ಉಡಲು ಅರಿವೆ. ಇವು ಮೂರು ಅಗತ್ಯವಾದ ವಸ್ತುಗಳು, ಇದನ್ನು ಹೇಳುವಾಗ ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರು ಆಕಾಶದಲ್ಲಿ ಮಾವಿನ ಹಣ್ಣು ಇದ್ದ ಹಾಗೆ ಎಂದರು ಇದು ಹೇಗೆ ಬಂತೋ ಇಲ್ಲವೇ ಅವರು ಸ್ವಪ್ನ ಕಂಡರೋ ನನಗೆ ಗೊತ್ತಿಲ್ಲ. ಇಲ್ಲಿ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ, ಇದು ಬಹು ಮುಖ್ಯವಾದುದು, ಮುಖ್ಯವಾಗಿ ಆಹಾರ, ಮನೆ ಹಾಗೂ ಬಟ್ಟೆ ಇವು ಅಗತ್ಯವಾಗಿ ಬೇಕಾದವುಗಳು. ಎಲ್ಲ ಕೆಲಸಗಳೂ ಆಗಲಿಲ್ಲ ಇವೆಲ್ಲ ಆಗಬೇಕಾಗಿತ್ತು ಎಂದು ಹೇಳಿದರೆ ಸರಕಾರ ಒಂದು ಮ್ಯಾಜಿಕ್ ವ್ಯಾಂಡ್ ಇಟ್ಟುಕೊಂಡು ಮಾಡಲಿಕ್ಕೆ ಸಾಧ್ಯವೇ? ಹಾಗೆ ಯಾರ ಕೈಯ್ಯಲ್ಲೂ ಮಾಡಲು ಸಾಧ್ಯವಾಗುವುದಿಲ್ಲ. ನಮಗೆ ಕೆಲಸಗಳನ್ನು ಮಾಡಲು ಓವರು ಡ್ರಾಫ್ಟ್‌ಗಳೂ ಸಿಗುತ್ತಿಲ್ಲ; ಹಾಗಿರುವಾಗ ನಮ್ಮ ಅರ್ಥಮಂತ್ರಿಗಳು ಇಲ್ಲ ತೆರಿಗೆ ಇಲ್ಲದಂತಹ ಒಂದು ಬಡ್ಜೆಟ್ಟನ್ನು ತಂದು ಇಟ್ಟಿರುವುದನ್ನು ನೋಡಿದರೆ ಇವರಿಂದ ಎಷ್ಟು ಪ್ರಗತಿಯಾದ ಕೆಲಸಗಳನ್ನು ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇವನ್ನೆಲ್ಲಾ ಸರಿಯಾಗಿ ತುಲನ ಮಾಡಿ ನೋಡಬೇಕೆಂದು ಇಲ್ಲಿ ಹೇಳಬಯಸುತ್ತೇನೆ.

5-30 P. M.

ಎರಡನೆಯದಾಗಿ ಓಲ್ಡ್ ಏಜ್ ಪೆನ್‌ಷನನ್ನು 30 ರೂಪಾಯಿಗಳಿಂದ 40 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಹಾಸ್ಟಲ್‌ನಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ವೆಚ್ಚಕ್ಕಾಗಿ ಕೊಡುತ್ತಿದ್ದ 30 ರೂಪಾಯಿಗಳನ್ನು 40 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಈ ವಿಚಾರದಲ್ಲಿ ನಾನು ಒಂದು ವಿಶೇಷ ಸೂಚನೆ ಕೊಡುತ್ತೇನೆ ; ಏನೆಂದರೆ ಹಾಸ್ಟಲ್‌ನಲ್ಲಿರತಕ್ಕಂಥ ಹುಡುಗರಿಗೆ ನೂಲು ತೆಗೆಯುವುದು, ಮುಂತಾದ ಯಾವುದಾದರು ಕೆಲಸಗಳನ್ನು ಕಲ್ಪಿಸಿಕೊಟ್ಟು ಅವರಿಗೆ ಕಲಿಯುವಾಗಲೇ ಸ್ವಲ್ಪ ವರಮಾನ ಬರುವಂತೆ ನೋಡಿಕೊಳ್ಳಬೇಕು. ಗಡಿ ಭಾಗಗಳಲ್ಲಿರುವಂತಹ ಪ್ರದೇಶಗಳ ಬಗ್ಗೆ ಸರ್ಕಾರದವರು ಮಲತಾಯಿ ಧೋರಣೆ ತಾಳಿದ್ದಾರೆಂದು ಮಾನ್ಯ ಸರ್ದೇಸಾಯಿ ಅವರು ಮಾತನಾಡುವಾಗ ಹೇಳಿದರು. ನಾನು ಸಹ ಆ ಗಡಿ ಭಾಗದಿಂದಲೇ ಬಂದಿದ್ದೇನೆ. ಕೆಲವು ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಬರೆದಿದ್ದೆ. ಆದರೆ ಇದುವರೆಗೆ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣ ನಮ್ಮ ರಾಜ್ಯದ ಹಲವು ಭಾಗಗಳಲ್ಲಿ ಬರಗಾಲ ಬಂದಿರುವುದು. ಈ ಕಾರಣದಿಂದ ಸರ್ಕಾರದವರಿಗೆ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದು ಕಷ್ಟವಾಗಿದೆ. ಆದಕಾರಣ ಸರ್ಕಾರದವರು ಗಡಿ ಭಾಗಗಳ ಬಗ್ಗೆ ಮಲತಾಯಿ ಧೋರಣೆ ತಳೆದಿದ್ದಾರೆಂದು ಹೇಳುವುದು ಸರಿಯಲ್ಲ. ಕೆಲವು ಸಲ ಸರ್ಕಾರದವರು ಯೋಜನೆಗಳನ್ನು ಮಂಜೂರು ಮಾಡಿ ಸಹ ಅಧಿಕಾರಿಗಳು ಅದನ್ನು ತ್ವರಿತವಾಗಿ ಮಾಡದಿದ್ದಾಗ ಸ್ಪೆಷಲ್ ಇಂಜಕ್ಷನ್ ಕೊಡಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಕೆಲವು ಇರಿಗೇಷನ್ ಯೋಜನೆಗಳ ಬಗ್ಗೆ ಸರ್ವೆಯಾಗಿದೆ. ಸರ್ಕಾರದವರು ಹಣದ ಪರಿಸ್ಥಿತಿ ನೋಡಿಕೊಂಡು ಮುಂದಿನ ವರ್ಷ ತೆಗೆದುಕೊಳ್ಳಬಹುದೆಂದು ನಾನು ಆಶೆ ಮಾಡುತ್ತೇನೆ ಇಂದಿನ ಬಡ್ಜೆಟ್‌ನಲ್ಲಿ ನೀರಾವರಿಗೆ ಮತ್ತು ವಿದ್ಯುಚ್ಛಕ್ತಿ ಯೋಜನೆಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ನಮ್ಮ ಹಳಿಯಾಳ

(ಶ್ರೀ ವಿ. ಎಂ. ಘಾಡಿ)

ತಾಲ್ಲೂಕ್‌ನಲ್ಲಿ ನೀರಾವರಿಗೆ ಹೆಚ್ಚು ಗಮನ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಹಂಚಿನ ಕಾರ್ಖಾನೆ, ಕಾರ್ಡ್‌ಬೋರ್ಡಿನ ಕಾರ್ಖಾನೆ ಮುಂತಾದವನ್ನು ಸ್ಥಾಪನೆ ಮಾಡಲು ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಮುಖ್ಯ ವಾಗಿ ಸಕ್ಕರೆ ಕಾರ್ಖಾನೆಗೆ ಬೇಕಾದ ನೀರಾವರಿ ಪ್ರದೇಶಗಳನ್ನು ಬೆಳೆಸಬೇಕೆಂದು ಬೇಡಿ ಕೊಳ್ಳುತ್ತೇನೆ.

ಇನ್ನು ಮಲೆನಾಡು ಡೆವಲಪ್‌ಮೆಂಟ್ ಸ್ಕೀಮ್ ಏನಿದೆ ಅದನ್ನು ತ್ವರಿತಗೊಳಿಸುವುದರ ಮೂಲಕ ಮಲೆನಾಡಿನ ಜನರಿಗೆ ಅದರ ಪ್ರಯೋಜನ ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಬೇಡಿಕೊಳ್ಳುತ್ತೇನೆ. ಕೇಂದ್ರಸರ್ಕಾರದ ಮೇಲೆ ಒತ್ತಾಯ ತರುವುದರ ಮೂಲಕ ಈ ಸ್ಕೀಮನ್ನು ಜಾಗ್ರತೆ ಜಾರಿಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಹಳಿಯಾಳ ತಾಲ್ಲೂಕ್‌ನ ಯಲ್ಲಾಪುರದಲ್ಲಿ ಬರಬೇಕಾಗಿದ್ದ ಡಬ್ಲ್ಯು. ಎಚ್. ಓ. ಸ್ಕೀಮು ಇನ್ನೂ ಜಾರಿಯಲ್ಲಿ ಬಂದಿಲ್ಲ. ಇದು 23 ಲಕ್ಷ ರೂಪಾಯಿಗಳ ಸ್ಕೀಮ್ ಆಗಿದೆ. ಕೇಂದ್ರಸರ್ಕಾರದ ಒಪ್ಪಿಗೆಗಾಗಿ ಹೋಗಿದೆ ಎಂದು ಕೇಳಿದ್ದೇನೆ. ಕೇಂದ್ರಸರ್ಕಾರಕ್ಕೆ ಹೋಗಿ 6 ತಿಂಗಳಾದರೂ ಅಪ್ರೂವಲ್ ಸಿಕ್ಕಿಲ್ಲ. ಆದಕಾರಣ ಸರ್ಕಾರದವರು ಕೇಂದ್ರದ ಮೇಲೆ ಒತ್ತಾಯ ತಂದು ಈ ಸ್ಕೀಮನ್ನು ಬಳಕೆಯಲ್ಲಿ ತರಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅರ್ಥ ಮಂತ್ರಿಗಳು ಈ ಸಲದ ಬಡ್ಜೆಟ್‌ನ್ನು ಬಹಳ ಜಾಣ್ಮೆಯಿಂದ ತಯಾರು ಮಾಡಿದ್ದಾರೆ. ಅದಕ್ಕಾಗಿ ಅವರನ್ನು ವಂದಿಸಿ, ನನಗೆ ಮಾತನಾಡಲು ವೇಳೆಯನ್ನು ಕೊಟ್ಟ ಅಧ್ಯಕ್ಷರನ್ನು ಸಹ ವಂದಿಸಿ ನನ್ನ ಮಾತನ್ನು ಮುಗಿ ಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕಂಥ 1973-74ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ವಿರೋಧಿಸಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಬಡ್ಜೆಟ್‌ಮಂಡನೆ ಮಾಡುವ ಕಾಲದಲ್ಲಿ ಉಳಿತಾಯದ ಬಡ್ಜೆಟ್ ಅಥವಾ ಕೊರತೆಯಿರುವ ಬಡ್ಜೆಟ್, ಇವೆರಡರಲ್ಲಿ ಒಂದು ಇರು ತ್ತದೆ. ಉಳಿತಾಯ ಅಥವಾ ಕೊರತೆ ಇವೆರಡೂ ಸಹ ಇಲ್ಲದಿರುವ ಬಡ್ಜೆಟ್‌ನ್ನು ತಯಾರು ಮಾಡಿ ಇಡುವುದಕ್ಕೂ ಸಹ ತಾವು ಪ್ರಯತ್ನ ಮಾಡಬಹುದು. ಮುಖ್ಯವಾಗಿ ಈ ಬಡ್ಜೆಟ್ ಎಂಬುದು ಆಯಾ ಸರ್ಕಾರಗಳ ಕಾರ್ಯಕ್ರಮಗಳ ಮೇಲೆ ಅವಲಂಬನೆಯಾಗಿರುತ್ತದೆ. ಮುಂದಿನ ಸಾಲಿನಲ್ಲಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಇಚ್ಛೆ ತಮಗೆ ಇರುತ್ತದೋ ಅದರ ಮೇಲೆ ನಿಮ್ಮ ಆಯವ್ಯಯ ಪತ್ರದ ಪ್ರಕೃತಿ ಇರುತ್ತದೆ. ರಾಜ್ಯದಲ್ಲಿ ಹೆಚ್ಚಿನ ಕೆಲಸಕಾರ್ಯಗಳನ್ನು ನಡೆ ಸದೇ ಹೋದರೆ ಅಭಿವೃದ್ಧಿ ದೃಷ್ಟಿಯಿಂದ ಬಹಳ ಅನ್ಯಾಯವಾಗುತ್ತದೆ ಎನ್ನುವ ವಿಷಯ ಮನವ ರಿಕೆಯಾದರೆ ತಾವು ಕೊರತೆ ಇರುವ ಬಡ್ಜೆಟ್‌ನ್ನು ತಯಾರು ಮಾಡಲೇ ಬೇಕಾಗುತ್ತದೆ ತಮ್ಮ ಕೆಲವು ಕಾರ್ಯಕ್ರಮಗಳನ್ನು ಕಟ್ ಮಾಡುವುದಾದರೆ ಉಳಿತಾಯದ ಬಡ್ಜೆಟ್‌ನ್ನು ಸಹ ತಯಾರು ಮಾಡಬಹುದು. ತೆರಿಗೆ ಇಲ್ಲದಿರತಕ್ಕಂಥ ಆಯವ್ಯಯ ಪತ್ರವನ್ನು ಮಂಡಿಸುವುದು ಎಂದರೆ ತಮ್ಮ ಕೆಲವು ಕಾರ್ಯಕ್ರಮಗಳನ್ನು ಖೋತಾ ಮಾಡಬೇಕಾಗುತ್ತದೆ. ನಮ್ಮ ದೇಶದ ಯಾವ ಯಾವ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಇವೆಯೋ ಆ ಸರ್ಕಾರಗಳಿಗೆಲ್ಲಾ ಹೊಸ ತೆರಿಗೆಗಳನ್ನು ಹಾಕುವ ಹವ್ಯಾಸಕ್ಕೆ ಹೋಗಬೇಡಿ ಎಂದು ಕಾಂಗ್ರೆಸ್ ಹೈಕಮ್ಯಾಂಡ್‌ನವರು ಆದೇಶ ಕೊಟ್ಟಿರು ವಂತೆ ಕಾಣುತ್ತದೆ. ಉತ್ತರ ಭಾಗದಲ್ಲಿರುವ ಒಂದು ರಾಜ್ಯದಲ್ಲಿ ತೆರಿಗೆಗಳು ಇಲ್ಲದ ಬಡ್ಜೆಟ್‌ನ್ನು ಮಂಡನೆ ಮಾಡಲಾಯಿತು ಎಂಬುದನ್ನು ನಾನು ಮೊನ್ನೆ ಒಂದು ಪತ್ರಿಕೆಯಲ್ಲಿ ಓದಿದೆ. ಈ ದೇಶ ದಲ್ಲಿರತಕ್ಕಂಥ ಜನರು ನಿಮ್ಮನ್ನು ನೋಡಿ ನಂಬಬೇಕು. ಆ ಒಂದು ಅರ್ಥ ಬರುವ ರೀತಿಯಲ್ಲಿ ಬಡ್ಜೆ ಟ್‌ನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕೇಂದ್ರದವರು ಈಗಾಗಲೇ ಚರ್ಮ ಸುಲಿಯುವಷ್ಟು ತೆರಿಗೆ ಯನ್ನು ಹಾಕಿದ್ದಾರೆ. ಮತ್ತೆ ತೆರಿಗೆಯನ್ನು ಹಾಕುವುದಕ್ಕೆ ಇವರಿಗೆ ಜಾಗ ಎಲ್ಲಿದೆ ?

ಶ್ರೀ ಎಸ್. ಬಂಗಾರಪ್ಪ.—ಅದು ನಿಜವೇ ; ಬಡಜನತೆಯ ಮೇಲೆ ಮಧ್ಯಮವರ್ಗದ ಜನ ತೆಯ ಮೇಲೆ ಹೊಸ ತೆರಿಗೆಗಳನ್ನು ಹೇರುವುದಿಲ್ಲ, ಬಡತನವನ್ನು ಹೋಗಲಾಡಿಸುತ್ತೇವೆಂದು ತಾವು ಚುನಾವಣಾ ಸಮಯದಲ್ಲಿ ಜನರಿಗೆ ಮಾತು ಕೊಟ್ಟು ಅಧಿಕಾರಕ್ಕೆ ಬಂದಿದ್ದೀರಿ. ಗರೀಬಿ ಹಟಾವೋ ಮಾಡುತ್ತೇವೆ ಎನ್ನುವ ಮಹಾ ಮಂತ್ರವನ್ನು ಏನು ಜನರಿಗೆ ಹಾಕಿದಿರಿ, ಅದನ್ನು ಉಳಿ ಸಿಕೊಳ್ಳಲು ಹೊಸ ತೆರಿಗೆಗಳು ಇಲ್ಲದಿರುವ ಬಡ್ಜೆಟ್‌ನ್ನು ಮಂಡನೆ ಮಾಡಿದ್ದೀರಿ. ಆದರೆ ಇದು

ಕೇವಲ ಕಣ್ಣೊರೆಸುವ ಒಂದು ಮಂತ್ರವಾಗಿದೆ. ಇದು ತೆರಿಗೆಗಳು ಇಲ್ಲದಿರುವ ಬಡ್ಜೆಟ್ ಎಂಬುದು ಸತ್ಯಕ್ಕೆ ದೂರವಾದ ಮಾತು. ಹೊಸ ತೆರಿಗೆಗಳು ಇಲ್ಲ ಎಂದರೋ ಹಿಂದಿನ ತೆರಿಗೆಗಳನ್ನು ಮತ್ತು ಬಾಂಗ್ಲಾ ದೇಶದ ತೆರಿಗೆಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಕೋಳಿ ಮುಂತಾದುವುಗಳ ಮತ್ತು ದನಕರುಗಳ ಮೇವಿನ ಮೇಲೆ ತೆರಿಗೆ ಹಾಕಿದ್ದಾರೆ. ಕೀಟನಾಶಕಗಳ ಮೇಲೆ ತೆರಿಗೆ ಹಾಕಿದ್ದಾರೆ. ಮಾನ್ಯ ಅರ್ಥಸಚಿವರು ಈ ಕಡೆ ಇದ್ದಾಗ ನನ್ನ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಆಗ ಹಸಿರುಕ್ರಾಂತಿಯಾಗಬೇಕೆಂದು ಸಲಹೆ ಕೊಟ್ಟಿದ್ದರು. ಅದು ನನ್ನ ಜ್ಞಾಪಕದಲ್ಲಿ ಇದೆ.

ಶ್ರೀ ಎಂ. ವೈ. ಘೋರ್ಪಡೆ.— ಅದು ಹೊಸ ತೆರಿಗೆಯೇನೂ ಅಲ್ಲ. ಮಲ್ಟಿ ಪಾಯಿಂಟನ್ನು ತೆಗೆದು ಸಿಂಗಲ್ ಪಾಯಿಂಟಾಗಿ ಮಾಡಿದರೆ ಸ್ವಲ್ಪ ಭಾರ ಕಡಿಮೆಯಾಗುತ್ತದೆ. ಮೂರುವರೆ ಪರ್ಸೆಂಟ್ ಮಲ್ಟಿಪಾಯಿಂಟಿನಲ್ಲಿ ಎರಡು ಸಲ ಆದರೆ 7 ಪರಸೆಂಟ್ ಆಗುತ್ತದೆ. ಅದನ್ನು 6 ಪರ್ಸೆಂಟಿಗೆ ಇಳಿಸಿದರೆ ಕಡಿಮೆಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಅದಕ್ಕೋಸ್ಕರವೇ ನಾನು ಹೇಳುವುದು, ಇದು ತೆರಿಗೆ ಇಲ್ಲದ ಬಜೆಟ್ ಅಲ್ಲ ಎಂದು. ಇವತ್ತು ಕೋಳಿ ಮತ್ತು ದನಗಳ ಆಹಾರದ ಮೇಲೆ ಮತ್ತು ಸಿಗಡಿ ಮೀನುಗಳ ಮೇಲೆ ತೆರಿಗೆ ಹಾಕಿದ್ದೀರಿ. ಇದರ ಅರ್ಥ ಬಜೆಟಿನಲ್ಲಿ ತೆರಿಗೆಗಳು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಪ್ರಜಾಪ್ರಭುತ್ವದಲ್ಲಿ ತೆರಿಗೆ ಇಲ್ಲದೆ ನಡೆಯುವುದಿಲ್ಲವೆಂಬುದನ್ನು ಒಪ್ಪುತ್ತೇನೆ. ಆದರೆ ಜನರಿಗೆ ಬೇಸಿಕ್ ನೀಡ್ಸನ್ನು ಪಡೆಯುವ ಶಕ್ತಿ ಬರುವವರೆಗೆ ಈ ರೀತಿ ಹೆಚ್ಚಿನ ತೆರಿಗೆಗಳು ಇರಬಾರದು. ಹೋದ ಸಾರಿ ಮಾನ್ಯ ಅರ್ಥ ಸಚಿವರು ಕೀಟನಾಶಕ ಮತ್ತು ರೋಗನಾಶಕ ವಸ್ತುಗಳ ಮೇಲೆ ತೆರಿಗೆಗಳನ್ನು ಹಾಕುವುದು ಸೂಕ್ತವಲ್ಲವೆಂದು ಹೇಳಿದ್ದಾರೆ. ಮತ್ತು ಎಲ್ಲಿ ಅಶ್ಯೂರ್ಡ್ ನೀರಾವರಿ ಸೌಕರ್ಯಗಳು ಇವೆ, ಅಂಥ ಪ್ರದೇಶಗಳಲ್ಲಿರತಕ್ಕಂತಹ ಜಮೀನುಗಳಿಗೆ ಒದಗಿಸತಕ್ಕಂತಹ ಗೊಬ್ಬರಕ್ಕಾಗಲಿ, ಕ್ರಿಮಿಕೀಟಕ ವಸ್ತುಗಳಿಗಾಗಲಿ ತೆರಿಗೆ ಹಾಕಿದರೆ, ಅದರಲ್ಲಿ ಸ್ವಲ್ಪ ಅರ್ಥ ಇದೆ. ಏಕೆಂದರೆ ಅಂತಹ ಯೋಜನೆಗಳಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಹಲವಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ. ಆದರೆ ನೀರಾವರಿ ಇಲ್ಲದಿರತಕ್ಕ ಕಡೆಗಳಲ್ಲಿ ಇದನ್ನು ಹಾಕಬಾರದು. ಅಂಥ ಕಡೆಗಳಲ್ಲಿ ರೈತ ಒಂದು ಸಲ ಹೈಬ್ರಿಡ್ ಬೆಳೆದರೆ, ಅದಕ್ಕೆ ರೋಗ ಬಂದರೆ ಇದರ ಅವಶ್ಯಕತೆ ಇರುತ್ತದೆ. ಆಗ ಈ ರೀತಿಯ ತೆರಿಗೆಗಳಿಗೆ ಅವನಿಗೆ ತೊಂದರೆಯಾಗುತ್ತದೆ. ಅದರಿಂದ ಈ ಕ್ರಿಮಿಕೀಟ ನಾಶಕಗಳ ಮೇಲೆ ಮತ್ತು ರೋಗನಾಶಕಗಳ ಮೇಲೆ ತೆರಿಗೆಗಳನ್ನು ಹಾಕಿರುವುದು ಸಮಂಜಸವಲ್ಲವೆಂದ ನಾನು ಹೇಳುತ್ತೇನೆ ಈ ತೆರಿಗೆಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು ; ಇಲ್ಲದಿದ್ದರೆ ಈ ಹಸಿರು ಕ್ರಾಂತಿ ಎಂದು ಏನು ಹೇಳುತ್ತೀರಿ, ಅದಕ್ಕೆ ನಿಮ್ಮ ಪಾಲಿಸಿ ವಿರುದ್ಧವಾಗುತ್ತದೆ.

ಇನ್ನು ಪ್ರೆಶ್ಯರ್ ಕುಕ್ಕರ್ಸ್‌ಗೂ ತೆರಿಗೆಗಳನ್ನು ಹಾಕಿದ್ದೀರಿ. ಇವುಗಳನ್ನು ಬರೀ ಶ್ರೀಮಂತರು ಮಾತ್ರ ಉಪಯೋಗ ಮಾಡುತ್ತಿಲ್ಲ : ಸಣ್ಣ ಪುಟ್ಟ ನೌಕರ ವರ್ಗದವರು ಸಹ ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಇದು ಬಡವರಿಗೂ ತಗಲುತ್ತದೆ. ಇವತ್ತು ಕೇಂದ್ರದವರು ಸಹ ಪೆಟ್ರೋಲಿಗೆ 8 ಪೈಸೆ ತೆರಿಗೆ ಹಾಕಿ ಬಡವರಿಗೆ ತಗಲುವುದಿಲ್ಲವೆಂದು ಹೇಳಿದ್ದಾರೆ. ಆದರೆ ಅದು ಸಹ ಬಡ ಜನರಿಗೆ ತಗಲಿಯೇ ತಗಲುತ್ತದೆ. ಇದರ ಜೊತೆಗೆ ಕಾಗದ, ಪಾದರಕ್ಷೆ-ಮುಂತಾದುವುಗಳಿಗೆ ಸಹ ತೆರಿಗೆ ಹಾಕಿರುವುದು ನಿಮ್ಮ ಸಮಾಜವಾದದ ಘೋಷಣೆಗೆ ವಿರೋಧವಾದುದು. ಅದಕ್ಕೋಸ್ಕರವಾಗಿ ನಾನು ಹೇಳುವುದು ಈ ರೀತಿಯ ತೆರಿಗೆಗಳು ನೀವು ಹಾಕಿದರೆ, ಇದು ತಮ್ಮ ನೀತಿಗೆ ವಿರೋಧವಾದ ಪಾಲಿಸಿಗಳು ಎಂದು ಹೇಳುತ್ತೇನೆ. ಇನ್ನು ಟ್ರ್ಯಾಕ್ಟರ್ ಮೇಲೆ, ಸೋಡಾ ಮೇಲೆ ಹಾಕಿ ಯಾರೂಬೇಡ ಎಂದು ಹೇಳುವುದಿಲ್ಲ.

ಅದೇ ರೀತಿ ಅಲ್ಯುಮಿನಿಯಂ ಪಾತ್ರೆಗಳಿಗೆ ಹಾಕಿದ್ದಾರೆ. ಇದನ್ನು ಹೆಚ್ಚಾಗಿ ಉಪಯೋಗ ಮಾಡತಕ್ಕವರು ಬಡವರು. ಶ್ರೀಮಂತರು ಯಾರೂ ಇದನ್ನು ಉಪಯೋಗಿಸುವುದಿಲ್ಲ. ಇದರಿಂದ ಬಡವರಿಗೆ ಮತ್ತು ಮಧ್ಯಮವರ್ಗದವರಿಗೆ ಪೆಟ್ಟುಬೀಳುತ್ತದೆ. ಆದ್ದರಿಂದ ತಮಗೆ ಗರೀಬ ಹಠಾವೋದಲ್ಲಿ ನಂಬಿಕೆ ಇದ್ದರೆ ಅವುಗಳ ಮೇಲಿನ ತೆರಿಗೆಯನ್ನು ತೆಗೆದು ಹಾಕಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಪ್ರೆಶ್ಯರ್ ಕುಕ್ಕರ್ ಯಾರು ಯೂಸ್ ಮಾಡುತ್ತಾರೆ ?

ಶ್ರೀ ಎಸ್. ಬಂಗಾರಪ್ಪ.— ಅಂದರೆ ತಮ್ಮ ಅರ್ಥ ತಮ್ಮಂತಹ ಶ್ರೀಮಂತರು ಮಾತ್ರ ಅದನ್ನು ಖರೀದಿ ಮಾಡುತ್ತಾರೆ, ಬಾಕಿಯವರು ಮಾಡುವುದಿಲ್ಲವೆಂದೇ ? ಇವತ್ತು ಸಿಗರೇಟಿಗೆ ಹಾಕಿದ್ದೀರಿ ; ಅದರಿಂದ ಬಡವರಿಗೆ ಪೆಟ್ಟು ಬೀಳುವುದಿಲ್ಲವೇ ? ಆದ್ದರಿಂದ ತಾವು ಈ ತೆರಿಗೆಯನ್ನು ಮುಂದುವರಿಸಿಕೊಂಡು ಬರತಕ್ಕಂತಹ ಪದ್ಧತಿ ಏನಿದೆ ಇದು ಸರಿಯಾದ ನೀತಿಯಲ್ಲ. ಇನ್ನು ಈ

(ಶ್ರೀ ಎಸ್. ಬಂಗಾರಪ್ಪ)

ಸಿಗಡಿ ಮೀನಿಗೆ ಹಾಕಿದುದರ ಬಗ್ಗೆ ಈಗಾಗಲೇ ಶ್ರೀಮಾನ್ಯ ಮಧ್ವರಾಜರವರು ಅವರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಇದರಿಂದ ಆ ಮೀನಿನ ಕೈಗಾರಿಕೆಗೆ ಪೆಟ್ಟು ಬೀಳುತ್ತದೆ ಎಂದು ಹೇಳಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ. ಅದನು ಕ್ಯಾನಿಂಗ್ ಇಂಡಸ್ಟ್ರಿಯವರು ಕೊಡುತ್ತಾರೆ; ಅದು ಬಡವರ ಮೇಲೆ ಬೀಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗಿದ್ದರೆ ಸರಿ. ಇನ್ನು ಬಜೆಟ್ ತಯಾರುಮಾಡತಕ್ಕ ರೀತಿ ನೀತಿಗಳು ಸರಿಯಾಗಿಲ್ಲ. ಮತ್ತು ಕಾರ್ಯಕ್ರಮಗಳು ಅನಿಶ್ಚಿತವಾಗಿವೆ. ತಾವು ಒಪ್ಪಿಕೊಂಡಿರುವ ಹಾಗೆ ಕೇಂದ್ರ ಸರ್ಕಾರದವರು ಎಷ್ಟು ಕೇಳುತ್ತಾರೆ, ಅಷ್ಟು ಕೊಡುತ್ತಾರೆ ಎನ್ನುವ ದಾಟಿಯಲ್ಲಿ ಹೇಳುತ್ತಿದ್ದೀರಿ. ಈಗ ಏನಾಗಿದೆ ಎಂದರೆ ಪ್ರಧಾನ ಮಂತ್ರಿಯು ಮರಬರಗಾಲ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅರಿತು ಎಷ್ಟು ಹಣವನ್ನಾದರೂ ಕೊಡುತ್ತೇವೆಂದು ಹೇಳಿದ್ದಾರೆ ಎನ್ನುವ ಅಭಿಪ್ರಾಯವನ್ನು ತಾವು ಹೇಳುತ್ತಿದ್ದೀರಿ. ಇದರಲ್ಲಿ ಬಹಳ ತೊಂದರೆ ಇದೆ. ಏಕೆಂದರೆ ಕಳೆದ ಸಾರಿ 5ನೇ ಹಣಕಾಸಿನ ಆಯೋಗದವರು ಏನು ಕಡಿಮೆ ಹಣ ಕೊಟ್ಟಿದ್ದಾರೆ. ಅದಕ್ಕೆ ಹಿಂದಿನ ಸರ್ಕಾರವನ್ನು ಬೈಯುತ್ತಿದ್ದೀರಿ. ನಮಗೆ ಕೇಂದ್ರ ಸರ್ಕಾರದಿಂದ ಸಹಾಯಧನ ಬರುತ್ತದೆ ಮತ್ತು ಓವರ್‌ಡ್ರಾಫ್ಟನ್ನು ತುಂಬಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನ ಮಾಡಿದ್ದೇವೆಂದು ಹೇಳಿದಾರೆ. ಇವತ್ತು ಸಾಲ ತೆಗೆದುಕೊಳ್ಳತಕ್ಕಂತಹ ವಿಚಾರದಲ್ಲಿ ನನ್ನ ವಾದವಿಲ್ಲ. ಆದರೆ ಕೆಲಸಕಾರ್ಯಗಳ ನಿಮಿತ್ತ ಓವರ್‌ಡ್ರಾಫ್ಟನ್ನು ಮುಂದುವರಿಸಬಾರದು ಎಂದು ಕೇಂದ್ರಸರ್ಕಾರದ ನೀತಿ ಏನಿದೆ, ಇದು ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆಯೇ ? ಆದರೆ ಅನೇಕ ರಾಜ್ಯಗಳು ಈಗಲೂ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಆದರೆ ತಾವು ಮಾತ್ರ ಸಂಪೂರ್ಣವಾಗಿ ಓವರ್‌ಡ್ರಾಫ್ಟನ್ನು ತೀರಿಸಿದ್ದೇವೆ ಎಂದು ಹೇಳುತ್ತಿದ್ದೀರಿ. ಆ ಮಾತು ಅರ್ಥಹೀನವಾದುದು. 5ನೇ ಆರ್ಥಿಕ ಆಯೋಗದವರು ಜಾಸ್ತಿ ಹಣವನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಿ. ಆದರೆ ನಮಗೆ ಸ್ಪೆಶಲ್ ಆಸಿಸ್ಟನ್ಸ್ ಕೇಂದ್ರದಿಂದ ಬಂದರೂ ಕೂಡ, ನಮಗೆ 5ನೇ ಆಯೋಗದಲ್ಲಿ ಕಡಿಮೆ ಕೊಟ್ಟಿರತಕ್ಕಂತಹ ಹಣವನ್ನು ತುಂಬಿಸಿಕೊಳ್ಳುವುದಕ್ಕೆ ಮಾಡಿದ ಪ್ರಯತ್ನ ಏನೂ ಸಾಲದು. ಈ ದೃಷ್ಟಿಯಿಂದ ನಾನಾದರೂ ಹೇಳುತ್ತೇನೆ—ಇವತ್ತು ಮೈಸೂರು ರಾಜ್ಯದ 2—3 ಜಿಲ್ಲೆಗಳಲ್ಲಿ ಬರಗಾಲ ಬಂದ ಷಣಕ್ಕೆ ಸರ್ಕಾರ ತತ್ತರಿಸಿ ಹೋಗಿದೆ. ಹಾಗಿದ್ದರೆ, ಇರುವ ಎಲ್ಲಾ ಜಿಲ್ಲೆಗಳಲ್ಲಿಯೂ ಇಂಥ ಪರಿಸ್ಥಿತಿ ಬಂದಿದ್ದರೆ ಇವರ ಗತಿ ಏನಾಗುತ್ತಿತ್ತೋ ಎಂದು ಅನುಮಾನ ಬರುತ್ತದೆ. ಇದು ನಿಮ್ಮ ಆಡಳಿತದ ವೈಖರಿಯ ಲಕ್ಷಣವಲ್ಲ. ನಾನು ಇವತ್ತು ಹಿಂದೆ ಕಾಂಗ್ರೆಸ್ ಆಡಳಿತ ಬೇರೆ, ನಿಮ್ಮ ಕಾಂಗ್ರೆಸ್ ಆಡಳಿತ ಬೇರೆ ಎಂದು ಭಾವಿಸುವುದಿಲ್ಲ. ಹಿಂದಿನ ಸರ್ಕಾರದಲ್ಲಿ ನೀವು ಸಹ ಇದ್ದೀರಿ. ಇವತ್ತು ನಿಮ್ಮ ಪಾಪದ ಕೆಲಸ ಎಂದು ಹೇಳುತ್ತಿದ್ದೀರಿ. ಈ ರೀತಿ ನಿಮ್ಮ ಪಾಪದ ಫಲ, ನಿಮ್ಮ ಪಾಪದ ಕೂಸು ಎಂದು ಹೇಳಿ ಜನತೆಯ ಮನಸ್ಸಿನಿಂದ ಗರೀಬಿ ಹಠಾವೋ ಘೋಷಣೆಯನ್ನು ಮರೆಯುವಂತೆ ಮಾಡುತ್ತಿದ್ದೀರಿ.

ಅಧ್ಯಕ್ಷರು.—ತಾವು ಇನ್ನು 4 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ನನಗೆ ಮಾತನಾಡಲು ಇನ್ನೂ ಸ್ವಲ್ಪ ಕಾಲ ಬೇಕು. ತಾವು ಕೊಡಬೇಕು ಬಹಳ ವಿಷಯ ಮಾತನಾಡಬೇಕಾಗಿದೆ.

ಅಧ್ಯಕ್ಷರು.—ತಾವು ಆಗಲೇ 25 ನಿಮಿಷ ಮಾತನಾಡಿದ್ದೀರಿ. ತಾವು ಈಗ ಮುಗಿಸಬೇಕು.

ಶ್ರೀ ಎಸ್ ಬಂಗಾರಪ್ಪ.—ಕ್ಷಮಿಸಬೇಕು. ಹಾಗಿದ್ದರೆ ನಾನು ನನ್ನ ಭಾಷಣವನ್ನು ಇಲ್ಲಿಗೆ ಮುಗಿಸಿಬಿಡುತ್ತೇನೆ.

† ಶ್ರೀ ಜಿ. ಪುಟ್ಟಸ್ವಾಮಿ.—(ಮೂಡಿಗೆರೆ) ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿಟ್ಟಿರುವ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ವಿರೋಧ ಪಕ್ಷದವರು ಏನು ಇದರ ಬಗ್ಗೆ ಹೇಳಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ನಮ್ಮ ಮಾನ್ಯ ಶ್ರೀ ನಾಯುಡುರವರು ಈಗಾಗಲೇ ಅದಕ್ಕೆ ಜವಾಬು ಕೊಟ್ಟಿದ್ದಾರೆ. ಆದರೆ ಆಯವ್ಯಯ ಪಟ್ಟಿಯಲ್ಲಿ ಇಷ್ಟು ನಮ್ಮ ರಾಜ್ಯದಲ್ಲಿ ಬರಗಾಲ ಇದ್ದರೂ ಕೂಡ ಈ ಕಷ್ಟದ ಪರಿಸ್ಥಿತಿಯಲ್ಲಿ ಅರ್ಥಮಂತ್ರಿಯವರು, ಮತ್ತು ಮಂತ್ರಿಮಂಡಲದವರು ಮತ್ತು ಅರ್ಥ ಶಾಖೆಯವರು ಕಷ್ಟಪಟ್ಟು ಇಷ್ಟು ಜಾಣ್ಮೆಯಿಂದ ಕೊರತೆ ಬಜೆಟ್ ಮಾಡಿದ್ದಾರೆಂದರೆ ಇದನ್ನು ಎಲ್ಲರೂ ಒಪ್ಪತಕ್ಕದ್ದು. ಇದನ್ನು ಬಹಳ ವಿಚಕ್ಷಣೆಯಿಂದ ಮಾಡಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ರೀತಿ ಮಾಡಬೇಕಾದರೆ ಅರ್ಥ ಮಂತ್ರಿಗಳು ಅರ್ಥ ಶಾಸ್ತ್ರದಲ್ಲಿ ನಿಪುಣರು ಇರಬೇಕು. ಇಲ್ಲಿ ಖೋತಾ ಇರತಕ್ಕದ್ದು 13 ಕೋಟಿ ಚಿಲ್ಲರೆ ರೂಪಾಯಿ. ಇನ್ನೂ ಕೂಡ ಕಡಿಮೆಯಾಗುವ ಸಂದರ್ಭ ಇದೆ ಎಂದು ಅವರು ಹೇಳಿದ್ದಾರೆ. ಕೆಲವು ಸದಸ್ಯರು ಸರಿದೂಗಿಸುವ ಬಜೆಟ್ ಮಾಡಿಲ್ಲವೆಂದು ಆಪಾದನೆ ಮಾಡಿದರು. ನಾನಾದರೂ ಅವರಿಗೆ ಕೇಳುತ್ತೇನೆ ಹೇಳುವುದು ಸುಲಭ ಮಾಡುವುದು ಕಷ್ಟ. ಒಂದು ಸಲ ಅವರು ಅಂಥ ಬಜೆಟ್ ಮಾಡಿ ತೋರಿಸಲಿ ; ನೋಡೋಣ. ಬರೇ ವಿರೋಧ ಮಾಡುವ ಉದ್ದೇಶದಿಂದ ಇದನ್ನು ವಿರೋಧ ಮಾಡುವುದು ಒಳ್ಳೆಯದಲ್ಲ.

ಅಧ್ಯಕ್ಷರು : —ತಾವು ನಾಳೆ ತಮ್ಮ ಭಾಷಣವನ್ನು ಮುಂದುವರಿಸಬಹುದು. ಸಭೆಯು ಈಗ ಎದ್ದು ನಾಳೆ ಒಂದು ಗಂಟೆಗೆ ಸೇರುವುದು.

The House adjourned at Six of the Clock to meet again at One of the Clock on Wednesday the 14th March 1973.

WD 19953—GPB—550—12-6-1974